# ಮಹಾಯೋಗಿ ವೇಮನ

## ಮತ್ತು

# ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮ

ಸಂಪಾದಕರು

**ಡಾ. ಎಚ್. ಬಿ. ನೀಲಗುಂದ**

ಧಾರವಾಡ

೨೦೧೮

**ಪ್ರಸಾರಾಂಗ**

**ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ**

**Mahayogi Vemana mattu Mahasadhvi Hemaraddi Mallamma**

| | | |
|---|---|---|
| Author | : | Dr. H. B. Neelgund<br>Co-ordinator<br>Mahayogi Vemana Peetha<br>Karnatak University, Dharwad – 580003 |
| Published by | : | Dr. Harilal Pawar<br>Director<br>Prasaranga<br>Karnatak University, Dharwad – 580 003. |
| Copies | : | 5000 |
| First Edition | : | 2018 |
| Pages | : | xii + 74 |
| Printed at | : | Dr. Vedamurthy A.B.<br>Director, Printing Press, K.U.Dharwad |

■■

**ಮಹಾಯೋಗಿ ವೇಮನ ಮತ್ತು ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮ**

| | | |
|---|---|---|
| ಲೇಖಕರು | : | **ಡಾ. ಎಚ್. ಬಿ. ನೀಲಗುಂದ**<br>**ಸಂಯೋಜಕರು**<br>ಮಹಾಯೋಗಿ ವೇಮನಪೀಠ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಪ್ರಕಾಶಕರು | : | ಡಾ. ಹರಿಲಾಲ ಪವಾರ<br>ನಿರ್ದೇಶಕರು<br>ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ,<br>ಧಾರವಾಡ |
| ಪ್ರತಿಗಳು | : | ೫೦೦೦ |
| ಪ್ರಥಮ ಮುದ್ರಣ | : | ೨೦೧೮ |
| ಪುಟ ಸಂಖ್ಯೆ | : | xii + ೭೪ |
| ಬೆಲೆ | : | ರೂ. ೧೦೦/– |
| ಮುದ್ರಕರು | : | ಡಾ. ವೇದಮೂರ್ತಿ ಎ.ಬಿ.<br>ನಿರ್ದೇಶಕರು<br>ಮುದ್ರಣ ವಿಭಾಗ, ಕ.ವಿ.ವಿ., ಧಾರವಾಡ |




## ಕುಲಪತಿಗಳ ನಲ್ನುಡಿ

ವಿಶ್ವವಿದ್ಯಾಲಯಗಳು ಪ್ರಪಂಚದ ವಿವಿಧ ವಿಷಯಗಳ ಜ್ಞಾನವನ್ನು ಸಮಗ್ರವಾಗಿ ಒಟ್ಟುಗೂಡಿಸಿ ಜನಸಮುದಾಯಕ್ಕೆ ತಲುಪಿಸುವ ಉದ್ದೇಶದಿಂದ ಸ್ಥಾಪಿತವಾದವುಗಳು. ಇವುಗಳ ಗುರಿ ಸಂಗ್ರಹಿತ ಜ್ಞಾನವನ್ನು ಹಂಚುವುದು. ಹೊಸ ಜ್ಞಾನವನ್ನು ಬೆಳೆಸುವುದು. ಇವುಗಳ ಉದ್ದೇಶ ಮನುಕುಲದ ಸರ್ವತೋಮುಖ ಏಳ್ಗೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯವು ಹಲವು ಆಯಾಮಗಳಲ್ಲಿ ಅಮೋಘ ಸೇವೆಯನ್ನ ಸಲ್ಲಿಸುತ್ತಾ ಬಂದಿದೆ.

ಕನ್ನಡದ ಸರ್ವಜ್ಞನಂತೆ ತೆಲುಗಿನ ಮಹಾಯೋಗಿ ವೇಮನ ಜನರ ಕವಿ. ಸರಳ ಭಾಷೆಯಲ್ಲಿ ಸಾಮಾನ್ಯ ವಿಷಯದಿಂದ ಗಹನವಾದ ವಿಷಯದವರೆಗೆ ಜನಹಿತ ವಿಷಯಗಳನ್ನೇ ಸಾರಿದ ಸಂತ ಕವಿ. ಈ ಪ್ರಜಾಕವಿಯ ಪದ್ಯಗಳನ್ನು ಈಗಾಗಲೇ ನಮ್ಮ ವಿಶ್ವವಿದ್ಯಾಲಯವು "ವೇಮನ ವಿಶ್ವಗೀತೆ" ಎಂಬ ಹೆಸರಿನಲ್ಲಿ ಪ್ರಕಟಿಸಿದೆ. ಇವರಿಗೆ ಸಂಬಂಧಿಸಿದಂತೆ ಬೇರೆ ಬೇರೆ ಉಪನ್ಯಾಸ ಗ್ರಂಥಗಳನ್ನೂ ಸಹ ವಿಶ್ವವಿದ್ಯಾಲಯ ಪ್ರಕಟಿಸಿದೆ.

ಪ್ರಸ್ತುತ ಗ್ರಂಥವು ಸಂಕ್ಷಿಪ್ತವಾಗಿ ಸರ್ವರಿಗೂ ಮಹಾಯೋಗಿ ವೇಮನರನ್ನು ಮತ್ತು ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮಳನ್ನು ಪರಿಚಯಿಸುವ ಪ್ರಯತ್ನವಾಗಿದೆ. ಸುಮಾರು 20 ಸಾವಿರ ಪದ್ಯಗಳಿರುವ ವೇಮನರ ಸಾಹಿತ್ಯವನ್ನಷ್ಟೂ ಓದುವುದು ಎಲ್ಲರಿಗೂ ಸಾಧ್ಯವಾಗದು. ಅದೇ ರೀತಿ ಯಾವುದೇ ಸಾಹಿತ್ಯವನ್ನು ಸೃಷ್ಟಿಸದ ಹೇಮರಡ್ಡಿ ಮಲ್ಲಮ್ಮನ ಜೀವನವನ್ನು ತಿಳಿಯುವುದು ಕಷ್ಟ. ಆದ್ದರಿಂದ ಮಹಾಯೋಗಿ ವೇಮನ ಪೀಠದ ಸಂಯೋಜಕರಾದ ಡಾ. ಎಚ್.ಬಿ.ನೀಲಗುಂದ ಇವರು ವೇಮನರು ನಡೆದಾಡಿದ ಸ್ಥಳಗಳೆಂದು ನಂಬಲಾಗಿರುವ ಪ್ರದೇಶಗಳಿಗೆ ಭೇಟಿ ನೀಡಿ ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮಳ ಜೀವನವನ್ನಾಧರಿಸಿ ಸೃಷ್ಟಿಯಾಗಿರುವ ಪುರಾಣ ಮತ್ತು ನಾಟಕಗಳನ್ನಾಧರಿಸಿ ಮತ್ತು ಇತರ ವಿವಿಧ ಮೂಲಗಳಿಂದ ಸಂಗ್ರಹಿಸಿದ ಮಾಹಿತಿಯನ್ನಾಧರಿಸಿ ಮಹಾಯೋಗಿ ವೇಮನ ಮತ್ತು ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮಳ ಸಂಕ್ಷಿಪ್ತ ಜೀವನವನ್ನು ಮತ್ತು ಹುಲಕೋಟಿಯ ಶ್ರೀ ಎಸ್.ಆರ್. ಪಾಟೀಲರವರು ಸಂಪಾದಿಸಿ ಪ್ರಕಟಿಸಿರುವ ವೇಮನ ವಿಶ್ವಗೀತೆ ಎಂಬ ಬೃಹತ್ ಗ್ರಂಥದಿಂದ ಕೆಲ ಪದ್ಯಗಳನ್ನು ಆಯ್ಕೆ ಮಾಡಿ ಇಲ್ಲಿ ಪ್ರಕಟಿಸಿದ್ದಾರೆ. ಈ

ಪ್ರಯತ್ನವು ಕನ್ನಡಿಯಲ್ಲಿ ಕರಿ (ಆನೆ) ಯನ್ನು ತೋರಿಸಿದಂತಾದರೂ, ವೇಮನರನ್ನು ಮತ್ತು ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮಳ ವಾಸ್ತವಿಕ ಜೀವನವನ್ನು ಪ್ರಥಮ ಬಾರಿಗೆ ತಿಳಿದುಕೊಳ್ಳಬೇಕೆನ್ನುವವರಿಗೆ ಇದು ಉಪಯುಕ್ತ ಗ್ರಂಥವಾಗಿದೆ.

ಮಹಾಯೋಗಿ ವೇಮನ ಮತ್ತು ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮಳನ್ನು ತಿಳಿಯ ಬಯಸುವವರಿಗೆ ಈ ಪುಟ್ಟ ಕೃತಿ ಒಂದು ಸಾರಲೇಖವಿದ್ದಂತೆ. ಈ ಕೃತಿಯನ್ನು ಕರ್ನಾಟಕ ವಿಶ್ವವಿದ್ಯಾಲಯದ ಮುದ್ರಣಾಲಯದಿಂದ ಮುದ್ರಿಸಿ, ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ ವತಿಯಿಂದ ಸಾರ್ವಜನಿಕರಿಗೆ ತಲುಪಿಸಲು ನಿರ್ಧರಿಸಿರುವುದು ಶ್ಲಾಘನೀಯ. ಇದೇ ರೀತಿ ಮಹಾಯೋಗಿ ವೇಮನ ಪೀಠವು ತನ್ನ ಕಾರ್ಯ ಚಟುವಟಿಕೆಗಳನ್ನು ವಿಭಿನ್ನ ಆಯಾಮಗಳಲ್ಲಿ ವಿಸ್ತರಿಸಿಕೊಳ್ಳುವ ಮೂಲಕ ಮಾನವ ಕಲ್ಯಾಣದ ಕೆಲಸವನ್ನು ಮುಂದುವರೆಸಲೆಂದು ಹಾರೈಸುತ್ತೇನೆ.

ಧಾರವಾಡ
19.10.2018

**ಡಾ. ಪ್ರಮೋದ ಬಿ. ಗಾಯಿ**
ಕುಲಪತಿಗಳು
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ



## ಓದುವ ಮೊದಲು....

ಮಹಾಯೋಗಿ ವೇಮನರು ಮತ್ತು ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮ, ಭಾರತೀಯ ಋಷಿ ಪರಂಪರೆಯ ವ್ಯಕ್ತ ರೂಪಗಳು. ಮಹಾಯೋಗಿ ವೇಮನರು ತಮಗಾದ ಸತ್ಯ ದರ್ಶನವನ್ನು ಸಾವಿರಾರು ಪದ್ಯಗಳ ಮೂಲಕ ಹೇಳಿದ್ದರಿಂದ ಅವರನ್ನು ಸಂತ ಕವಿ ಎನ್ನುತ್ತಾರೆ. ಭಾರತೀಯ ದಾರ್ಶನಿಕ ಸಾಹಿತ್ಯವನ್ನು ಸಾಮಾನ್ಯರಿಗೂ ತಿಳಿಯುವಂತೆ, ಆಡು ನುಡಿಯಲ್ಲಿ ಪದ್ಯಗಳ ಮೂಲಕ ಹೇಳಿದ ಜನಪ್ರಿಯ ಕವಿ. ಪರಮಜ್ಞಾನಿ. ಸಮಸ್ತ ಸಿದ್ಧಿಗಳೆಲ್ಲವೂ ಪ್ರಾಪ್ತವಾಗಿದ್ದರೂ, ಅವುಗಳಿಗೆ ಅಂಟಿಕೊಳ್ಳದೇ ಜ್ಞಾನಕ್ಕೆ ಮಾತ್ರ ಮಹತ್ವ ನೀಡಿ ಆ ಮಾರ್ಗದಲ್ಲಿ ಮುನ್ನಡೆಯಲು ಪ್ರೇರೇಪಿಸಿದವರು.

ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮ, ಉಸಿರಿನೊಳಗಿನ ಪ್ರಾಣದಂತೆ ಅವ್ಯಕ್ತವಾಗಿರುವಂತವಳು. ಸಂಸಾರದಲ್ಲಿದ್ದು ಅದರ ಕಷ್ಟ – ನಷ್ಟಗಳನ್ನು ಶಾಂತವಾಗಿ ಸ್ವೀಕರಿಸಿ, ಅವುಗಳಿಗೆಲ್ಲ ಪರಿಹಾರವನ್ನು ಸೂಚಿಸಿ ಐಕ್ಯಳಾದವಳು. ಸಂಸಾರದ ಸಮಸ್ತ ಜವಾಬ್ದಾರಿಯನ್ನು ಹೊತ್ತಿದ್ದರೂ, ಅದರಲ್ಲಿ ಇಲ್ಲದಂತಿದ್ದು, ಭೌತಿಕವಾಗಿ ಇಲ್ಲವಾದರೂ ಅಭೌತಿಕವಾಗಿ ನಮ್ಮೊಳಗೆ ಸದಾ ಚೈತನ್ಯದ ಚಿಲುಮೆಯಾಗಿ ಉಪಸ್ಥಿತಳಾಗಿರುವಂತವಳು. ಬುದ್ಧಿವಂತರು, ತಾರ್ಕಿಕರ ತಾಕಲಾಟಗಳಿಗೆ ಘರ್ಷಣೆಗಳಿಗೆ ಉಪಯೋಗವಾಗುವಂತಹ ಸಂದೇಶಗಳೆಂಬ ಯಾವುದೇ ಶಬ್ದಗಳನ್ನು ಹೇಳಿದವಳಲ್ಲ. ಆಧ್ಯಾತ್ಮಿಕ ಸಾಹಿತ್ಯವನ್ನಾಗಲಿ, ಸಂಪ್ರದಾಯವನ್ನಾಗಲಿ ಸೃಷ್ಟಿಸಿದವಳಲ್ಲ. ಗುರು – ಶಿಷ್ಯ ಪರಂಪರೆಯನ್ನು ಪ್ರೋತ್ಸಾಹಿಸಿದವಳಲ್ಲ. ಆದರೂ ಭಕ್ತಿಯ, ಸೇವೆಯ, ಕ್ಷಮಾಗುಣದ ಸೆಲೆಯಾಗಿ ಸಾಮಾನ್ಯರ ಹೃದಯದಲ್ಲಿ ಸದಾ ಮಿಡಿಯುತ್ತಿರುತ್ತಾಳೆ.

ಮಹಾಯೋಗಿ, ಜನಪರ ಕವಿ, ಜನಪ್ರಿಯ ಕವಿ, ಸಂತಕವಿ, ದಾರ್ಶನಿಕ, ಸಿದ್ಧಿಪುರುಷ, ಕ್ರಾಂತಿಕಾರಿ, ಸಮಾಜ ಸುಧಾರಕ, ಸಂತ ಎಂಬೆಲ್ಲ ಬಿರುದುಗಳು ವೇಮನರಿಗಿದ್ದರೆ, ಮಹಾಸಾಧ್ವಿ, ಪರಮ ಪತಿವೃತೆ, ಮಹಾಮಾತೆ, ಶಿವಶರಣೆ, ಸಂಸಾರಯೋಗಿನಿ, ಜಗನ್ಮಾತೆ ಎಂದು ಹಲವಾರು ಬಿರುದುಗಳಿಂದ ನಮ್ಮೆಲ್ಲರ ಮಧ್ಯ ಉಪಸ್ಥಿತವಿರುವವಳು ಹೇಮರಡ್ಡಿ ಮಲ್ಲಮ್ಮ. ಮಹಾಯೋಗಿ ವೇಮನರು ರಡ್ಡಿ ಜನಾಂಗದ ಮೂಲ ಪುರುಷ ವ್ಯೋಮ ಯೋಗಿಯ ವ್ಯಕ್ತರೂಪವಾದರೆ ಹೇಮರಡ್ಡಿ ಮಲ್ಲಮ್ಮ ರಡ್ಡಿ ಜನಾಂಗದ ಕುಲಮಾತೆ. ಇವರಿಬ್ಬರ ತತ್ವ ಸಿದ್ಧಾಂತಗಳು ಸಮಸ್ತ ಮಾನವ ಕುಲಕ್ಕೆ ಆದರ್ಶಪ್ರಾಯವಾದವುಗಳು.

ಮಹಾಯೋಗಿ ವೇಮನರು ಸಂಸಾರ ಮತ್ತು ಸಮಾಜದ ಸ್ವಾರ್ಥ, ದುರಾಸೆ, ಮೋಸ, ವಂಚನೆಗಳಿಂದ ಮತ್ತು ಮಾನವ ದೇಹದಲ್ಲಿಯ ಕಾಮ, ಕ್ರೋಧ, ಲೋಭ, ಮೋಹಗಳಿಂದ ವೈರಾಗ್ಯತಾಳಿ ಯೋಗಿಯಾದರೆ, ಹೇಮರಡ್ಡಿ ಮಲ್ಲಮ್ಮ ಸಂಸಾರದ ಸಹಿಸಲಸಾಧ್ಯವಾದ ಕಷ್ಟಗಳ ನಡುವೆಯೇ ಜೀವಿಸಿ ಪರಮ ಸತ್ಯವನ್ನು ದರ್ಶಿಸಿದ ಸಂಸಾರ ಯೋಗಿನಿ. ಭಾರತದ ಪುರಾತನ ಋಷಿ ಪರಂಪರೆಯ ವ್ಯಕ್ತರೂಪವಾಗಿ ಆರು ನೂರು ವರ್ಷಗಳ ಹಿಂದೆ ದೇಹ ಸಹಿತ ವ್ಯಕ್ತವಾಗಿ, ಭೌತಿಕವಾಗಿ ಕಣ್ಮರೆಯಾದರು. ಅಭೌತಿಕವಾಗಿ ಸದಾ ನಮ್ಮೊಳಗಿರುವಂತವರು.

ಇವರಿಬ್ಬರೂ ರಡ್ಡಿ ರಾಜಮನೆತನದಲ್ಲಿ ಜನಿಸಿದ್ದರೂ, ಸದಾ ಬಡವರಿಗಾಗಿ ಅಸಹಾಯಕರಿಗಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡವರು. ಸ್ಥಾಪಿತ ಧರ್ಮ, ಜಾತಿ, ಜನಾಂಗ, ದೇಶ, ಭಾಷೆ ಮತ್ತು ವ್ಯಕ್ತಿ ಪ್ರಚಾರದಂತಹ ಮಾನವ ಕಲ್ಪಿತ ವಿಷಯಗಳನ್ನು ಮೀರಿ ಇರುವ ಪರಮ ಸತ್ಯವನ್ನು ದರ್ಶಿಸಲು ಮಾರ್ಗ ತೋರಿಸಿದವರು. ಇವರು ಯಾವುದೇ ಸಂಘ–ಸಂಸ್ಥೆ, ಮತ–ಸಂಪ್ರದಾಯಗಳು, ಗುರು–ಶಿಷ್ಯ ಪರಂಪರೆಯನ್ನು ಸ್ಥಾಪಿಸದೇ ಕೇವಲ ಸತ್ಸಂಗದ ಮೂಲಕ ಆಧ್ಯಾತ್ಮಿಕ ಜೀವಿಗಳನ್ನು ಆಕರ್ಷಿಸಿ ಸಾಧನಾ ಪಥವನ್ನು ನಿರ್ದೇಶಿಸಿದ್ದಾರೆ.

ಮಹಾಯೋಗಿ ವೇಮನರನ್ನು ಕನ್ನಡ ನಾಡಿಗೆ ಪರಿಚಯಿಸಲು ತಮ್ಮನ್ನೇ ತಾವು ಸಮರ್ಪಿಸಿಕೊಂಡವರು ಹುಲಕೋಟಿಯ ಶ್ರೀ ಎಸ್. ಆರ್. ಪಾಟೀಲರು. ಶ್ರೇಷ್ಠ ಆಧ್ಯಾತ್ಮಿಕ ಜೀವಿಗಳಾಗಿದ್ದ ಶ್ರೀ ಎಸ್. ಆರ್. ಪಾಟೀಲರು, ಹಲವಾರು ಯೋಗಿಗಳ ಋಷಿ ಮುನಿಗಳ ಮತ್ತು ಸಿದ್ಧ ಪುರುಷರೊಂದಿಗೆ ಸಂಪರ್ಕವನ್ನಿಟ್ಟುಕೊಂಡು ಆಧ್ಯಾತ್ಮಿಕ ಸಾಧನೆ ಮಾಡಿದವರು. ವೇಮನರ ಸಾಹಿತ್ಯಕ್ಕೆ ಮಾರುಹೋದ ಶ್ರೀ ಎಸ್. ಆರ್. ಪಾಟೀಲರು ವೇಮನರ ಬಹುಭಾಗ ಸಾಹಿತ್ಯವನ್ನು ಕನ್ನಡಕ್ಕೆ ಅನುವಾದ ಮಾಡಿದರು. ಈ ಸಾಹಿತ್ಯವು ಸರ್ವರಿಗೂ ದೊರೆಯುವಂತಾಗಲು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಮಹಾಯೋಗಿ ವೇಮನ ಪೀಠವನ್ನು ಸ್ಥಾಪಿಸಿದರು. ವೇಮನರ ೩೮೧೩ ಪದ್ಯಗಳನ್ನು ಕನ್ನಡಕ್ಕೆ ಅನುವಾದಿಸಿ "ವೇಮನ ವಿಶ್ವಗೀತೆ" ಎಂಬ ಹೆಸರಿನಿಂದ ಪ್ರಕಟಿಸಿದ್ದಾರೆ.

ಪೂಜ್ಯ ಶ್ರೀ ಎಸ್. ಆರ್. ಪಾಟೀಲರ ಸಂಕಲ್ಪ ಮತ್ತು ಶ್ರೀ ಎಚ್. ಕೆ. ಪಾಟೀಲರ ಕರ್ತೃತ್ವ ಶಕ್ತಿಯಿಂದ ೧೯೮೩ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸ್ಥಾಪನೆಯಾದ ಮಹಾಯೋಗಿ ವೇಮನ ಪೀಠವು ಶೈಕ್ಷಣಿಕ ಹಾಗೂ ಆಧ್ಯಾತ್ಮಿಕ ಕಾರ್ಯಕ್ರಮಗಳಿಗೆ ತನ್ನನ್ನು ತಾನು ತೊಡಗಿಸಿಕೊಂಡಿದೆ. ಕರ್ನಾಟಕ ಸರಕಾರವು ಮಹಾಯೋಗಿ ವೇಮನ ಜಯಂತ್ಯುತ್ಸವವನ್ನು ಪ್ರತಿವರ್ಷ ಜನೆವರಿ ೧೯ ರಂದು ಸರಕಾರದ ವತಿಯಿಂದ ಆಚರಿಸಲು ನಿರ್ಧರಿಸಿದ್ದರಿಂದ ಸರ್ವ ಸಮಾಜಕ್ಕೆ ವೇಮನರ ಪರಿಚಯವಾಗಲು ಸಾಧ್ಯವಾಯಿತು.



ಜನವರಿ ೧೯, ೨೦೧೮ ರಂದು ಕರ್ನಾಟಕ ಸರಕಾರವು ಮಹಾಯೋಗಿ ವೇಮನರ ಜಯಂತಿಯನ್ನು ಪ್ರಥಮವಾಗಿ ರಾಜ್ಯಾದ್ಯಂತ ವಿಜೃಂಭಣೆಯಿಂದ ಆಚರಿಸಿತು. ಈ ಸಂದರ್ಭದಲ್ಲಿ ಮಹಾಯೋಗಿ ವೇಮನರ ಸಂಕ್ಷಿಪ್ತ ಪರಿಚಯದ ಸಣ್ಣ ಪುಸ್ತಕವನ್ನು ಮುದ್ರಿಸಿ ಸರ್ವರಿಗೂ ಉಚಿತವಾಗಿ ತಲುಪಿಸಲು ಪೀಠವು ನಿರ್ಧರಿಸಿತು. ವಿಶ್ವವಿದ್ಯಾಲಯದ ನಿಯಮಾನುಸಾರ ಪುಸ್ತಕಗಳನ್ನು ಉಚಿತವಾಗಿ ಹಂಚಲು ಅವಕಾಶವಿಲ್ಲದ್ದರಿಂದ ಮಾನ್ಯ ಶ್ರೀ ಎಚ್. ಕೆ. ಪಾಟೀಲರ ಧನ ಸಹಾಯದಿಂದ ಐವತ್ತು ಸಾವಿರ ಪ್ರತಿಗಳನ್ನು ಮುದ್ರಿಸಿ ಉಚಿತವಾಗಿ ವಿತರಿಸಲಾಗಿದೆ.

ಶ್ರೀ ಮಹಾಯೋಗಿ ವೇಮನ ಸಂಸ್ಥಾನಮಠ – ರೆಡ್ಡಿ ಗುರುಪೀಠ, ಎರೆ ಹೊಸಳ್ಳಿಯ ಪ. ಪೂ. ಗುರುಗಳಾದ ವೇಮನಾನಂದ ಮಹಾಸ್ವಾಮಿಗಳು ೨೦೧೮ ನೇ ವರ್ಷದ ಶ್ರಾವಣ ಮಾಸದ ಕಾರ್ಯಕ್ರಮವನ್ನು ಕಲಬುರ್ಗಿ ಜಿಲ್ಲೆಯಲ್ಲಿ ಹಮ್ಮಿಕೊಳ್ಳಲು ನಿರ್ಧರಿಸಿದ್ದರು. 'ಹೇಮ–ವೇಮ ಶ್ರಾವಣ' ಎಂಬ ಹೆಸರಿನ ಈ ಕಾರ್ಯಕ್ರಮದಲ್ಲಿ ಪ್ರತಿದಿನ ಒಂದೊಂದು ಊರಿನಲ್ಲಿ ಒಟ್ಟು ೨೮ ಊರುಗಳಲ್ಲಿ ಪ್ರವಚನ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದರು. ಈ ಕಾರ್ಯಕ್ರಮಗಳಲ್ಲಿ ಜನರಿಗೆ ಹಂಚಲು ಎರಡು ಸಾವಿರ ವೇಮನರ ಪುಸ್ತಕಗಳು ಬೇಕಾಗಬಹುದು, ಸಾಧ್ಯವಾದರೆ ಹೇಮರಡ್ಡಿ ಮಲ್ಲಮ್ಮಳ ಜೀವನ ವೃತ್ತಾಂತವನ್ನು ಸೇರಿಸಿದರೆ ಸೂಕ್ತವೆನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಹೇಮರಡ್ಡಿ ಮಲ್ಲಮ್ಮಳ ಜೀವನವನ್ನಾಧರಿಸಿ ಹಲವಾರು ಪುರಾಣಗಳು ಸೃಷ್ಟಿಯಾಗಿವೆ. ತೆಲುಗು ನಾಡಿನಲ್ಲಿ ೧೫ ನೇ ಶತಮಾನದಲ್ಲಿ ಆಗಿಹೋದ ಹೇಮರಡ್ಡಿ ಮಲ್ಲಮ್ಮಳ ಬಗೆಗೆ ಕನ್ನಡದಲ್ಲಿ ಪುರಾಣಗಳು ಹುಟ್ಟಿಕೊಂಡದ್ದು ೧೮ ನೇ ಶತಮಾನದಲ್ಲಿ. ಅಂದರೆ ಮೂರು ನೂರು ವರ್ಷಗಳ ನಂತರ. ಪುರಾಣಕಾರರು ತಮ್ಮ ಕಾಲದ ಸಾಮಾಜಿಕ ಮತ್ತು ಕೌಟುಂಬಿಕ ಹಿನ್ನೆಲೆಯನ್ನಾಧಾರವಾಗಿಟ್ಟುಕೊಂಡು ಹೇಮರಡ್ಡಿ ಮಲ್ಲಮ್ಮಳ ಜೀವನವನ್ನು ಆಧರಿಸಿ ಪುರಾಣಗಳನ್ನು ಸೃಷ್ಟಿಸಿದರು. ಈ ಪುರಾಣಗಳಿಗೆ ಪ್ರೇರಣೆ ಜನಪದ ಹಾಡುಗಳು.

ಕರ್ನಾಟಕದಲ್ಲಿ ಆ ಕಾಲದ ಮುಖ್ಯ ವೃತ್ತಿ ಕೃಷಿ. ಅದಕ್ಕೆ ಅನುಕೂಲವಾಗಲು ಆಕಳುಗಳ ಸಾಕಾಣಿಕೆ. ಕುಟುಂಬದ ಪ್ರತಿಯೊಬ್ಬ ಸದಸ್ಯರು ಈ ವೃತ್ತಿಯಲ್ಲಿ ಭಾಗವಹಿಸುತ್ತಿದ್ದರು. ಕೃಷಿಯನ್ನೇ ಅವಲಂಬಿಸಿದ ಕುಟುಂಬ ಮತ್ತು ಆ ಕಾಲದ ಪ್ರಮುಖ ಸಮಸ್ಯೆಯಾಗಿದ್ದ ಅತ್ತೆ ಸೊಸೆಯ ಜಗಳವನ್ನು ಆಧಾರವಾಗಿಟ್ಟುಕೊಂಡು ಹೇಮರಡ್ಡಿ ಮಲ್ಲಮ್ಮಳ ಪುರಾಣಗಳನ್ನು ಸೃಷ್ಟಿಸಿದರು.

ರಡ್ಡಿ ರಾಜ ಮನೆತನದ ಕುಲಮಾತೆಯಾಗಿದ್ದ ಹೇಮರಡ್ಡಿ ಮಲ್ಲಮ್ಮಳನ್ನು ಆಕಳು ಕಾಯುವ, ಸೆಗಣಿಯಿಂದ ಕುಳ್ಳು ಬಡಿಯುವ ಕೆಲಸಕ್ಕೆ ಸೀಮಿತಗೊಳಿಸಿದರು.

ಮಹಾಸಾಧ್ವಿಯಾದ ಹೇಮರಡ್ಡಿ ಮಲ್ಲಮ್ಮಳ ಕರುಣಾಭಾವ ಮತ್ತು ತ್ಯಾಗದಿಂದ ಯುವರಾಜನಾಗಿದ್ದ ವೇಮನ ಮಹಾಯೋಗಿಯಾದ ಘಟನೆಯನ್ನು ಅಶ್ಲೀಲವಾಗಿ ಚಿತ್ರಿಸಲಾಯಿತು. ಸಕಲ ಮಾನವ ಕುಲಕ್ಕೆ ಸತ್ಯದ ಮಾರ್ಗ ತೋರಿಸಲು ಸಾವಿರಾರು ಪದ್ಯಗಳನ್ನು ರಚಿಸಿದವರು ವೇಮನರು. ಪಾಶ್ಚಿಮಾತ್ಯ ವಿದ್ವಾಂಸರು ಏಸು ಮಹಾಸ್ವಾಮಿಯ ಪುನರಾವತಾರವೆಂದು ಹೊಗಳಿದ ಮಹಾಯೋಗಿ ವೇಮನರನ್ನು ಹುಚ್ಚನೆಂದು ಬಿಂಬಿಸಲಾಯಿತು.

ಪೂಜ್ಯ ಶ್ರೀ ವೇಮನಾನಂದ ಸ್ವಾಮಿಜಿಯವರು ಹೇಮರಡ್ಡಿ ಮಲ್ಲಮ್ಮಳ ಬಗೆಗೆ ಬರೆಯಿರಿ ಎಂದಾಗ ಆಕೆಯ ಬಗೆಗಿರುವ ಲಭ್ಯ ಪುರಾಣಗಳನ್ನು, ಸಂಶೋಧನಾ ಗ್ರಂಥಗಳನ್ನು ಅಧ್ಯಯನ ಮಾಡಿದೆ. ಜನಪದ ಹಾಡುಗಳನ್ನು ಹಾಡಿಸಿ ಆಲಿಸಿದೆ. ಹಲವರು ಹೇಳುವ ಕಥೆಯನ್ನು ಕೇಳಿದೆ. ಆಗ ನನಗನಿಸಿದ್ದು, ಒಂದು ವೇಳೆ ಹೇಮರಡ್ಡಿ ಮಲ್ಲಮ್ಮ ಯಾವುದೇ ಆಧ್ಯಾತ್ಮಿಕ ಸಾಹಿತ್ಯವನ್ನಾಗಲಿ, ಪರಂಪರೆಯನ್ನಾಗಲಿ ಬಾಹ್ಯ ಆಚರಣೆಯನ್ನಾಗಲಿ ಉಪದೇಶಿಸಿದ್ದರೆ ಅದರ ಸುತ್ತಲೂ ಬುದ್ಧಿವಂತ ಮನಸ್ಸುಗಳ ತಾಕಲಾಟ ನಿರಂತರವಾಗಿ ಮುಂದುವರೆಯುತ್ತಿತ್ತು. ಆದರೆ ಅದಾವುದೂ ಇಲ್ಲದ ಜನಸಾಮಾನ್ಯರ ಹೃದಯದಲ್ಲಿರುವ ಆಕೆಯ ಬಗೆಗಿರುವ ಗೌರವ ಮತ್ತು ಭಕ್ತಿ ರೋಮಾಂಚನವನ್ನುಂಟು ಮಾಡುತ್ತದೆ. ಆರು ನೂರು ವರ್ಷಗಳಿಂದ ಉತ್ತರ ಕರ್ನಾಟಕದ ಸರ್ವಜನಾಂಗದ ಅಂತರಾಳದಲ್ಲಿ ಆದರ್ಶ ಸ್ತ್ರೀಯಾಗಿ, ಮಹಾಸಾಧ್ವಿಯಾಗಿ, ಶಿವಶರಣೆಯಾಗಿ, ಸಂಸಾರ ಯೋಗಿನಿಯಾಗಿ ಮತ್ತು ಭಕ್ತಿಯ ಸೆಲೆಯಾಗಿ ಹರಿಯುತ್ತಿದ್ದಾಳೆ.

ಲಭ್ಯವಿರುವ ಪುರಾಣಗಳಲ್ಲಿ, ಸಂಶೋಧನ ಗ್ರಂಥಗಳಲ್ಲಿರುವ ಮಾಹಿತಿಯನ್ನು ಕ್ರೋಢೀಕರಿಸಿದ್ದೇನೆ. ಹಾಡುಗಳಲ್ಲಿ ಮತ್ತು ಕಥೆಗಳಲ್ಲಿರುವ ಸದ್ಭಾವನೆಯನ್ನು ಅರಿತಿದ್ದೇನೆ. ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದ ಸಾಮಾಜಿಕ ಮತ್ತು ಕೌಟುಂಬಿಕ ಹಿನ್ನೆಲೆಯನ್ನಾಧರಿಸಿ ಸೃಷ್ಟಿಸಿರುವ ಪುರಾಣ ಮತ್ತು ನಾಟಕಗಳನ್ನು ದಾಟಿ ಮಹಾಯೋಗಿ ವೇಮನ ಮತ್ತು ಹೇಮರಡ್ಡಿ ಮಲ್ಲಮ್ಮಳ ಜೀವನವನ್ನು ಪ್ರಸ್ತುತಪಡಿಸಲು ಪ್ರಯತ್ನಿಸಿದ್ದೇನೆ.

ಅಧಿಕೃತ ದಾಖಲೆಗಳಿಲ್ಲದ ಹೇಮರಡ್ಡಿ ಮಲ್ಲಮ್ಮಳ ಜೀವನವನ್ನು ನಾಡಿನ ಸಾಮಾನ್ಯ ಜನರ ಭಕ್ತಿಯ ಸ್ಮರಣೆಯಿಂದ ಗ್ರಹಿಸಿ ಪ್ರಸ್ತುತಪಡಿಸುವುದು ಸುಲಭದ ಕೆಲಸವಲ್ಲ. ನಾಟಕಗಳಲ್ಲಿ ಪ್ರಸ್ತುತಪಡಿಸಿದ ಹೇಮರಡ್ಡಿ ಮಲ್ಲಮ್ಮ ಮತ್ತು ವೇಮನರ ಜೀವನ ನಿಜವಾದದ್ದಲ್ಲ ಎಂದು ಬಹಿರಂಗವಾಗಿ ಧೈರ್ಯದಿಂದ ಹೇಳದೇ ಗೊಣಗಾಡುತ್ತಿರುವವರ ಅಭಿಪ್ರಾಯವನ್ನು ಸಂಗ್ರಹಿಸಿ, ಲಭ್ಯವಿರುವ ಸಾಹಿತ್ಯದೊಂದಿಗೆ ಜೋಡಿಸಿದ್ದೇನೆ. ಹೌದು – ಅಲ್ಲ, ಸರಿ – ತಪ್ಪು, ಹೀಗಿತ್ತು – ಹೀಗಿರಲಿಲ್ಲ ಎನ್ನುವ



ಮಾನವ ಬುದ್ಧಿಯ ತಾಕಲಾಟಗಳನ್ನು ಮೀರಿ ವಾಸ್ತವಿಕ ಸತ್ಯವನ್ನು ಪ್ರಕಟಿಸಲು ಪ್ರಯತ್ನಿಸಿದ್ದೇನೆ.

**ಮಹಾಯೋಗಿ ವೇಮನ ಮತ್ತು ಹೇಮರಡ್ಡಿ ಮಲ್ಲಮ್ಮ, ಹುಟ್ಟು–ಸಾವುಗಳನ್ನು ಮೀರಿರುವ ದೈವ ಶಕ್ತಿಯ ವ್ಯಕ್ತರೂಪಗಳು. ಹುಟ್ಟು – ಸಾವುಗಳಿಲ್ಲದವರಿಗೆ ದೇಹದ ಭಾವವೆಲ್ಲಿ? ದೇಹದ ಭಾವನೆ ಮೀರಿ ಬದುಕಿದವರ ದೇಹ ಎಲ್ಲಿ ಹುಟ್ಟಿತು? ಯಾರಿಗೆ ಹುಟ್ಟಿತು? ಯಾವಾಗ ಹುಟ್ಟಿತು ? ಅವರಿಗೂ ಇವರಿಗೂ ಏನು ಸಂಬಂಧ? ಎನ್ನುವುದಂತೂ ಅಪ್ರಸ್ತುತವಾದದ್ದು. ಇಂತಹ ಮಹಾತ್ಮರನ್ನು ಜಾತಿಗೆ, ಧರ್ಮಕ್ಕೆ, ಭಾಷೆಗೆ, ದೇಶಭಾವನೆಗೆ ಅಂಟಿಸುವುದಂತೂ ಮಹಾ ಪಾಪ.**

ಆದ್ದರಿಂದ ಓದುಗರಲ್ಲಿ ನನ್ನ ಕಳಕಳಿಯ ವಿನಂತಿ ಎಂದರೆ, ನಾವೆಲ್ಲ ಅರಿಯಬೇಕಾದದ್ದು ಅವರ ಚರಿತ್ರೆಯನ್ನಲ್ಲ; ಚಾರಿತ್ರ್ಯವನ್ನು. ನಾವೆಲ್ಲ ಪ್ರಜ್ಞಾಪೂರ್ವಕವಾಗಿ ಅರಿಯಬೇಕಾದದ್ದು ಅವರ ತ್ಯಾಗ, ಸಹನೆ, ಪ್ರೀತಿ ಮತ್ತು ಕ್ಷಮಾ ಗುಣ. ಸಮಾಜದಲ್ಲಿರುವ ಅಸಹಾಯಕರಿಗೆ, ಬಡವರಿಗೆ, ತುಳಿತಕ್ಕೊಳಗಾದವರಿಗೆ, ತಿರಸ್ಕಾರಕ್ಕೊಳಗಾದವರಿಗೆ ತೋರಿಸಿದ ಪ್ರೀತಿ, ಅವರೆಲ್ಲರ ಉನ್ನತಿಗಾಗಿ ಅವರು ಮಾಡಿದ ಕೆಲಸ ಮತ್ತು ಅವರ ಸೇವಾ ಭಾವನೆಯನ್ನು ಭಕ್ತಿಪೂರ್ವಕವಾಗಿ ಸ್ಮರಿಸಬೇಕು. ತನ್ಮೂಲಕ ದೇಹಭಾವವನ್ನು ಮೀರಿ ಬ್ರಹ್ಮಭಾವದಲ್ಲಿ ಪ್ರವೇಶಿಸುವ ಬಾಗಿಲು ತೆರೆದುಕೊಳ್ಳುತ್ತದೆ. ವಾಸ್ತವಿಕ ಸತ್ಯದರ್ಶನದ ಪ್ರಯಾಣ ಪ್ರಾರಂಭವಾಗುತ್ತದೆ.

**ಇದು ಭೌತಿಕವಾದ, ಸಾಹಿತ್ಯಿಕವಾದ ಸ್ಥಿತಿಗತಿಗಳನ್ನಾಧರಿಸಿದ ಸಂಶೋಧನಾ ಗ್ರಂಥವಲ್ಲ. ಅವುಗಳೆಲ್ಲದರ ಮೂಲಕ ಹಾಯ್ದು ಅಲೌಕಿಕವಾದ ಸತ್ಯ ದರ್ಶನ ಮಾಡಲು ಪ್ರಯತ್ನಿಸಿದ ಆಧ್ಯಾತ್ಮಿಕ ಗ್ರಂಥ. ಇಲ್ಲಿ ಉಲ್ಲೇಖಿಸಿರುವ ವ್ಯಕ್ತಿ, ವಿಷಯ ಮತ್ತು ಘಟನೆಗಳಿಗೆ ಅಧಿಕೃತ ದಾಖಲಾತಿಗಳ ಕಡೆಗೆ ವಿಶೇಷ ಗಮನಕೊಟ್ಟರೆ ವಾಸ್ತವಿಕ ಸತ್ಯ ಸಾಯುತ್ತದೆ. ಒಟ್ಟಾರೆಯಗಿ ಈ ಗ್ರಂಥ ಆಧ್ಯಾತ್ಮಿಕ ಚಿಂತನೆಯ ಗ್ರಂಥ. ಮಹಾಯೋಗಿ ವೇಮನ ಮತ್ತು ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮಳ ಜೀವಾತ್ಮಗಳನ್ನು ಅರಿಯಲು ಪ್ರಯತ್ನ ಮಾಡುವ ಮೂಲಕ ನಮ್ಮ ನಮ್ಮ ಜೀವನವನ್ನು ಅರ್ಥಮಾಡಿಕೊಂಡು, ಮಾನವ ಜೀವನದ ಪರಮೋಚ್ಚ ಉದ್ದೇಶವಾದ ಪರಮಶಾಂತಿಯನ್ನು ದರ್ಶಿಸುವುದು.**

ಈ ಪುಸ್ತಕವನ್ನು ಬರೆಯಲು ಪ್ರೇರಣೆ ನೀಡಿದ ಪರಮಪೂಜ್ಯ ಶ್ರೀ ವೇಮನಾನಂದ ಸ್ವಾಮೀಜಿಗಳಿಗೆ ಭಕ್ತಿಪೂರ್ವಕ ಪ್ರಣಾಮಗಳು. ಈ ನಾಡಿನ ಶ್ರೇಷ್ಠ ರಾಜಕೀಯ ಚಿಂತಕರೂ ಆಧ್ಯಾತ್ಮಿಕ ಜೀವಿಗಳೂ ಆದ ಮತ್ತು ವೇಮನಪೀಠದ ಶಕ್ತಿ ಕೇಂದ್ರವಾಗಿರುವ ಪೂಜ್ಯಶ್ರೀ ಎಚ್. ಕೆ. ಪಾಟೀಲ ಅವರಿಗೆ ಭಕ್ತಿಪೂರ್ವಕ ಪ್ರಣಾಮಗಳು. ಈ ಕಾರ್ಯಕ್ಕೆ ಪ್ರೇರಣೆ ನೀಡಿದ ಹುಲಕೋಟಿಯ ಶ್ರೀ ಆರ್.

ಆರ್. ಸಾವಕಾರ ಅವರಿಗೆ ಹಾಗೂ ಸೂಕ್ತ ಮಾರ್ಗದರ್ಶನ ನೀಡಿದ ಡಾ. ಎಸ್. ಆರ್. ನಾಗನೂರ ಅವರಿಗೂ ಭಕ್ತಿಪೂರ್ವಕ ಪ್ರಣಾಮಗಳು. ಸಲಹಾ ಸಮಿತಿಯ ಗೌರವಾನ್ವಿತ ಸದಸ್ಯರುಗಳಾದ ಡಾ. ಎಸ್. ಎನ್. ಅಮಾತೆಪ್ಪನವರ, ಡಾ. ಕೃ. ಅನ್ವನ್ ಹಾಗೂ ಶ್ರೀ ರಮೇಶ ಜಂಗಲ್ ಅವರಿಗೂ ಭಕ್ತಿಪೂರ್ವಕ ಪ್ರಣಾಮಗಳು.

ಈ ಕಾರ್ಯಕ್ಕೆ ಒಪ್ಪಿಗೆ ನೀಡಿದ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಪ್ರಮೋದ ಭೀ. ಗಾಯಿ ಅವರಿಗೆ ಹೃದಯಪೂರ್ವಕ ಧನ್ಯವಾದಗಳು. ಈ ಪುಸ್ತಕವನ್ನು ಸುಂದರವಾಗಿ ಮುದ್ರಿಸಲು ಸಹಾಯಮಾಡಿದ ಕರ್ನಾಟಕ ವಿಶ್ವವಿದ್ಯಾಲಯದ ಮುದ್ರಣಾಲಯದ ನಿರ್ದೇಶಕರಾಗಿರುವ ಡಾ. ವೇದಮೂರ್ತಿ ಎ.ಬಿ. ಹಾಗೂ ಅವರ ಸಿಬ್ಬಂದಿ ಅವರಿಗೆ ಧನ್ಯವಾದಗಳು. ಪ್ರಸಾರದ ಜವಾಬ್ದಾರಿ ಹೊತ್ತಿರುವ ಪ್ರಸಾರಾಂಗದ ನಿರ್ದೇಶಕರಾಗಿರುವ ಡಾ. ಹರಿಲಾಲ ಪವಾರ ಹಾಗೂ ಅವರ ಸಿಬ್ಬಂದಿಗಳಿಗೆ ಧನ್ಯವಾದಗಳು.

ಕರಡು ಪ್ರತಿಯಲ್ಲಿನ ತಪ್ಪುಗಳನ್ನು ತಿದ್ದಿ, ಪುಸ್ತಕವನ್ನು ಸುಂದರಗೊಳಿಸಲು ಸಹಾಯ ಮಾಡಿದ ನನ್ನ ಧರ್ಮ ಪತ್ನಿ ಶ್ರೀಮತಿ ಗಾಯತ್ರಿ ಹುದ್ದಾರ ಇವರಿಗೂ, ಡಿ.ಟಿ.ಪಿ. ಕಾರ್ಯವನ್ನು ಮಾಡಿಕೊಟ್ಟ ಶ್ರೀ ಆರ್. ಕೆ, ಹೆಗಡೆ ಹಾಗೂ ಮುಖಪುಟ ವಿನ್ಯಾಸಗೊಳಿಸಿದ ಚಿತ್ತಾರ ಗ್ರಾಫಿಕ್ಸ್‌ನ ಶ್ರೀ ಬಿ. ಮಾರುತಿ ಅವರಿಗೆ ಹೃದಯಪೂರ್ವಕ ಧನ್ಯವಾದಗಳು.

ಧಾರವಾಡ
19-10-2018

**ಡಾ. ಎಚ್. ಬಿ. ನೀಲಗುಂದ**
ಸಂಯೋಜಕರು
ಮಹಾಯೋಗಿ ವೇಮನ ಪೀಠ
ಕ.ವಿ.ವಿ. ಧಾರವಾಡ
ಮೊ: 9449800216



## ಪರಿವಿಡಿ

* ಕುಲಪತಿಗಳ ನಲ್ನುಡಿ iii
* ಓದುವ ಮೊದಲು v

### ಮಹಾಯೋಗಿ ವೇಮನ

ಮಹಾಯೋಗಿ ವೇಮನ 1
ರಡ್ಡಿ ಸಾಮ್ರಾಜ್ಯ 4
ಮಹಾಯೋಗಿ ವೇಮನರ ಜನನ 5
ವೇಮನರ ಶಿಕ್ಷಣ 6
ವೇಮನರ ಭೋಗ ಜೀವನ 8
ಯೋಗಿಯಾದ ವೇಮನ 11
ಪವಾಡ ಪುರುಷನಾಗಿ ವೇಮನ 14
ಯೋಗಿಯಾದ ನಂತರ ವೇಮನರ ಜೀವನ 15
ಮಹಾಯೋಗಿ ವೇಮನರ ದೇಹ ತ್ಯಾಗ 17
ಮಹಾಯೋಗಿ ವೇಮನರ ಸಮಾಧಿ 20
ವೇಮನರ ಸಾಹಿತ್ಯ 22
ಶ್ರೀ ಎಸ್. ಆರ್. ಪಾಟೀಲರು 23
ವೇಮನರ ಆಯ್ದ ಪದ್ಯಗಳು 26

### ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮ

ಜನನ ಮತ್ತು ಕಾಲ 40
ಕೌಟುಂಬಿಕ ಹಿನ್ನೆಲೆ 41
ಸಾಹಿತ್ಯ 46
ಪುರಾಣ ಎಂದರೇನು? 47
ಗುಪ್ತಗಾಮಿನಿ 52
ಶ್ರೀಶೈಲದಲ್ಲಿ ಹೇಮರಡ್ಡಿ ಮಲ್ಲಮ್ಮ 58
ವಿದೇಹಿಯಾದ ಹೇಮರಡ್ಡಿ ಮಲ್ಲಮ್ಮ 61
ಹೇಮರಡ್ಡಿ ಮಲ್ಲಮ್ಮಳ ಪವಾಡಗಳು 63
ಮಲ್ಲಮ್ಮಳ ದರ್ಶನಕ್ಕೆ ನಾವು ಮಾಡಬೇಕಾದದ್ದು 69

# 1

# ಮಹಾಯೋಗಿ ವೇಮನ

ಮಹಾಯೋಗಿ ವೇಮನರು ಈ ಭೂಮಂಡಲ ಕಂಡ ಅಪರೂಪದ ಸಂತ ಕವಿಗಳು. ದಾರ್ಶನಿಕ ಸಾಹಿತ್ಯ ಕಬ್ಬಿಣದ ಕಡಲೆ ಎಂದು ಭಾವಿಸಿದವರಿಗೆಲ್ಲ ಆಶ್ಚರ್ಯವಾಗುವಂತೆ ಜನರಾಡುವ ಸರಳ ಭಾಷೆಯಲ್ಲಿ ತಾವು ಕಂಡ ಪರಮ ಸತ್ಯವನ್ನು ಸಣ್ಣ ಸಣ್ಣ ಪದ್ಯಗಳ ಮೂಲಕ ಹೇಳಿದ್ದಾರೆ. ಇವರು ಪ್ರತಿಪಾದಿಸಿದ ತತ್ವ **ಪ್ರಜ್ಞಾಪೂರ್ವಕ ನಿಷ್ಕಾಮ ಕರ್ಮ**. ಪ್ರಕೃತಿಗೂ ಸಮಾಜಕ್ಕೂ ಅನಾನುಕೂಲವಾಗದಂತೆ ಸರಳವಾಗಿ ಸಹಜವಾಗಿ ಬದುಕುವ ಕಲೆಯದು. ವೇಮನರನ್ನು ವೇಮನರಿಗೆ ಹೋಲಿಸಬಹುದಲ್ಲದೆ, ಇತರರೊಡನೆ ಅವರನ್ನು ಹೋಲಿಸಿ ನೋಡುವುದು ವ್ಯರ್ಥ ಶ್ರಮವಾಗುತ್ತದೆ.

ಆದರೂ ಲೋಕರೂಢಿಯಂತೆ ಹಲವಾರು ಜನ ಸಾಹಿತಿಗಳು, ಚಿಂತಕರು, ಸಂಶೋಧಕರು, ವೇಮನರು ಕನ್ನಡದ ಸರ್ವಜ್ಞನಂತೆ, ತಮಿಳಿನ ತಿರುವಳ್ಳುವರಂತೆ, ಹಿಂದಿಯ ಕಬೀರರಂತೆ, ಮರಾಠಿಯ ಸಂತ ತುಕಾರಾಮರಂತೆ ಎಂದಿದ್ದಾರೆ. ಆದರೆ ವೇಮನರಂತೆ ಸಕಲ ಆಯಾಮಗಳಲ್ಲಿ ಜೀವನವನ್ನು ಅನುಭವಿಸಿ ಮಾರ್ಗದರ್ಶನ ನೀಡಿದವರು ಅಪರೂಪ. ವೇಮನರು ರಾಜಮನೆತನದಲ್ಲಿ ಹುಟ್ಟಿ, ಸಕಲ ವೈಭೋಗದಲ್ಲಿದ್ದರೂ ಅಸಹಾಯಕರಿಗೆ, ಹಿಂದುಳಿದವರಿಗೆ, ತುಳಿತಕ್ಕೊಳಗಾದವರಿಗೆ ಸದಾ ತುಡಿಯುವ ಮನಸ್ಸಿನವರಾಗಿದ್ದರು. ಜಾತಿಯ ಹೆಸರಿನಲ್ಲಿ, ದೇವರ ಹೆಸರಿನಲ್ಲಿ ಮಾಡುವ ಅನಾಚಾರಗಳನ್ನು ತೀವ್ರವಾಗಿ ಖಂಡಿಸುತ್ತಿದ್ದರು.

ಮಹಾಯೋಗಿ ವೇಮನರು ನಮಗೆಲ್ಲ ಬೋಧಿಸುವುದು, ಸ್ಥಾಪಿತ ಧರ್ಮ, ಜಾತಿ, ಜನಾಂಗ, ದೇಶ, ಭಾಷೆ ಮತ್ತು ವ್ಯಕ್ತಿ ಪ್ರಚಾರಗಳಂತಹ ಮಾನವ ಕಲ್ಪಿತ ವಿಷಯಗಳನ್ನು ಮೀರಿ ಇರುವ ಪರಮ ಸತ್ಯವನ್ನು ಅರಿತು ಆನಂದವಾಗಿ ಬದುಕುವ ಕಲೆಯನ್ನು. ಅವರ ಬೋಧನೆಯಲ್ಲಿ ಯಾವುದೇ ಮಡಿ–ಮೈಲಿಗೆ, ಪಾಪ–ಪುಣ್ಯ, ಮೇಲು–ಕೀಳು ಎನ್ನುವ ಡಾಂಬಿಕತೆಗಳಿಲ್ಲ, ಕೆಟ್ಟದ್ದನ್ನು ಖಂಡಿಸಿದ್ದಾರೆ ಒಳ್ಳೆಯದನ್ನು ಪುರಸ್ಕರಿಸಿದ್ದಾರೆ.

ಮಹಾಯೋಗಿ ವೇಮನರು ಯಾವುದೇ ಹೊಸ ಮತವನ್ನಾಗಲಿ, ಧರ್ಮವನ್ನಾಗಲಿ, ಸಂಪ್ರದಾಯವನ್ನಾಗಲಿ ಸ್ಥಾಪಿಸಲಿಲ್ಲ. ಜಾತಿಯ ಇಲ್ಲವೆ ಮತೀಯ ಸಂಘ–ಸಂಸ್ಥೆಗಳನ್ನು ಕಟ್ಟಲಿಲ್ಲ ಜನಮಾನಸದಲ್ಲಿರುವ ಅಜ್ಞಾನವನ್ನು ದೂರಮಾಡಿ,

ಸಮಾಜದ ಅಂಕುಡೊಂಕುಗಳನ್ನು ತಿದ್ದಿ ಜನರಾಡುವ ಭಾಷೆಯಲ್ಲಿ ಉಪದೇಶ ನೀಡಿದರು. ಅವರು ಹೇಳಿರುವ ಪ್ರತಿಯೊಂದು ಮಾತು ಅವರ ಸ್ವಯಂ ಅನುಭವದಿಂದ ಬಂದವುಗಳೇ ವಿನಃ; ಯಾರೋ ಹೇಳಿದ್ದನ್ನು, ಯಾವುದೇ ಧರ್ಮಗ್ರಂಥದಲ್ಲಿರುವುದನ್ನು ಅನುಕರಣೆ ಮಾಡಿ ಹೇಳಿದವುಗಳಲ್ಲ. ಯಾವುದೇ ಕಂದಾಚಾರಗಳಿಗೆ ಆಸ್ಪದ ನೀಡದೆ ಸರಳವಾದ ಜೀವನ ಕಲೆಯನ್ನು ಕಲಿಸುವ ಸತ್ಸಂಗಗಳನ್ನು ಏರ್ಪಡಿಸುತ್ತಿದ್ದ ಇವರ ಬಾಹ್ಯ ಆಚಾರವೆಂದರೆ ಪ್ರಕೃತಿಯೊಂದಿಗೆ ಮತ್ತು ತನ್ನ ಸುತ್ತಮುತ್ತಲಿರುವವರೊಂದಿಗೆ ಸಹಬಾಳ್ವೆ.

## ವೇಮನರ ಜೀವನ ಚರಿತ್ರೆ :

"ವೇಮನ" ಎನ್ನುವುದು ಅಪರೂಪದ ಶಬ್ದ. ವೇಮ+ಅನ್ನ ಸೇರಿ ವೇಮನ್ನ ಆಗಿದೆ, ಅದೇ ರೂಢಿಯಲ್ಲಿ ವೇಮನ ಎಂದಾಗಿದೆ. ಅಂತಿಮವಾಗಿ ತೆಲುಗಿನಲ್ಲಿ ಯೋಗಿ ವೇಮನ, ವೇಮನ ಯೋಗಿ ಎಂದಾಯಿತು. ಕನ್ನಡದಲ್ಲಿ ಮಹಾಯೋಗಿ ವೇಮನ ಎನ್ನುತ್ತಾರೆ.

ಪ್ರತಿಯೊಂದು ಧರ್ಮ, ದೇಶ, ಭಾಷೆ, ಸಂಪ್ರದಾಯ ಮತ್ತು ಮಹಾನ್ ವ್ಯಕ್ತಿಗಳ ಹಿಂದೆ ಒಬ್ಬ ಮೂಲ ಪುರುಷನಿರುತ್ತಾನೆ. ಆತನ ಇರುವಿಕೆ ಸದಾ ಅವ್ಯಕ್ತವಾಗಿರುತ್ತದೆ. ವೇಮನ ಎನ್ನುವ ಹೆಸರಿನ ಹಿಂದೆ ಅವ್ಯಕ್ತವಾದ ದೈವ ಶಕ್ತಿಯ ಪ್ರವಾಹವಿದೆ. ಮಹಾನ್ ಋಷಿಯ ಸಂಕಲ್ಪ ಈ ಹೆಸರಿನ ಮೂಲಕ ಸರ್ವರಿಗೂ ಸುಖ, ಶಾಂತಿ, ನೆಮ್ಮದಿಯನ್ನು ನೀಡುವ ಚೈತನ್ಯ ಶಕ್ತಿಯಾಗಿ ಹರಿಯುತ್ತಿದೆ. ಈ ಸಂಕಲ್ಪದ ಹಿಂದೆ ಒಂದು ದೊಡ್ಡ ಕತೆಯೇ ಇದೆ.

ಸಾಮಾನ್ಯವಾಗಿ ಯೋಗಿಗಳು, ಋಷಿಗಳು ಅರಣ್ಯಗಳಲ್ಲಿ, ಜನವಸತಿಗಳ ಹೊರ ವಲಯದಲ್ಲಿ ವಾಸ ಮಾಡುತ್ತಾರೆ. ಅಂತಹ ಒಬ್ಬ ಯೋಗಿಯ ಅನುಗ್ರಹಕ್ಕೆ ಪಾತ್ರವಾಗಿ ವೇಮನ ಎಂಬ ಹೆಸರು ಬಂದಿದೆ ಎಂದು ನಂಬಲಾಗಿದೆ.

ಒಬ್ಬ ಮಹಾನ್ ಯೋಗಿ ಕೊಂಡವೀಡು ಗ್ರಾಮದ ಸಮೀಪದ ಗುಹೆಯಲ್ಲಿ ವಾಸ ಮಾಡುತ್ತಿದ್ದರು. ಆತ ಜನರಿಗೆ ಕಾಣುವುದು ಗವಿಯ ಮುಂದಿರುವ ವಿಶಾಲವಾದ ಬೇವಿನ ಮರದ ಕೆಳಗೆ ಕುಳಿತಿರುವಾಗ. ಹೆಸರೇ ಇಲ್ಲದ ಈ ಯೋಗಿಯನ್ನು "ವೇಂಪೆಚೆಟ್ಟು ಅನ್ನ" ಎಂದು ಕರೆಯಲಾರಂಭಿಸಿದರು. ತೆಲುಗು ಭಾಷೆಯಲ್ಲಿ ಇದರ ಅರ್ಥ "ಬೇವಿನ ಮರದ ಕೆಳಗೆ ಕುಳಿತಿರುವವ". ನಂತರ ಇದು ವೇಂಪೆಚೆಟ್ಟು ಅನ್ನನಿಂದ –> ವೇಂಪನ್ನ –> ವೆಮನ್ನ –> ವೇಮನಾ ಅಂತಿಮವಾಗಿ ವೇಮನ ಎಂದಾಯಿತು. ಇದೇ ಹೆಸರಿನ ಪರಂಪರೆ ಸುಮಾರು ಒಂದು ನೂರು ವರುಷಗಳವರೆಗೆ ಮುಂದುವರೆದು ನಮ್ಮ ಪುಸ್ತಕದ ನಾಯಕನ ಯೋಗಸಿದ್ಧಿಯಿಂದ ಮಹಾಯೋಗಿ ವೇಮನ ಎಂದು ಪರಿಚಿತವಾಗಿ ಅಜರಾಮರವಾಗಿ ಜನಮಾನಸದಲ್ಲಿ ಉಳಿದಿದೆ.



ಪ್ರತಿ ದಿನ ತನ್ನ ಕೆಲಸಕ್ಕೆ ಹೋಗುವ ರೈತನೊಬ್ಬ ಇವರಿಗೆ ಊಟವನ್ನು ಇವರು ವಾಸವಾಗಿರುವ ಗವಿಯ ಮುಂದೆ ಇಟ್ಟು ಹೋಗುತ್ತಿದ್ದ. ಯೋಗಿಯಿಂದ ಯಾವ ಪ್ರತಿ ಫಲವನ್ನೂ ಬಯಸುತ್ತಿರಲಿಲ್ಲ. ಹೀಗೆ ಹಲವಾರು ವರ್ಷ ನಡೆಯಿತು. ಅಂದೊಂದು ದಿನ ಪ್ರಶಾಂತವಾದ ಮುಂಜಾವು ಯೋಗಿಗಳು ಬೇವಿನ ಮರದ ಕೆಳಗೆ ಕುಳಿತು ಪರಮಾನಂದದ ಅನುಭೂತಿಯಲ್ಲಿದ್ದರು. ಆ ಪ್ರಸನ್ನವಾದ, ಪ್ರಶಾಂತವಾದ ಪರಮಾತ್ಮನ ಉಪಸ್ಥಿತಿ ಇರುವಾಗಲೇ ದಿನ ನಿತ್ಯದಂತೆ ಆ ರೈತ ಊಟವನ್ನು ಇಡಲು ಹೋದ. ಯೋಗಿಗಳನ್ನು ನೋಡಿ ದೂರದಿಂದಲೇ ನಮಸ್ಕರಿಸಿದ. ಆಶೀರ್ವಾದ ಮುದ್ರೆಯಿಂದ ಕೈ ಎತ್ತಿದ ಯೋಗಿ; "ಯಾಕಪ್ಪ ನನಗಾಗಿ ಇಷ್ಟು ತೊಂದರೆ ತೆಗೆದುಕೊಳ್ಳುತ್ತಿರುವಿ? ನಿನಗೆ ಏನಾದರು ಬೇಕಾಗಿದೆಯೇ?" ಎಂದರು.

"ಇಲ್ಲ ಸ್ವಾಮಿ ನನಗೆ ಏನೂ ಬೇಕಾಗಿಲ್ಲ ತಮ್ಮಂತವರ ಅನುಗ್ರಹದಿಂದ ಸಕಲ ಸಂಪತ್ತು, ಸೌಭಾಗ್ಯ, ಆಳು, ಕಾಳು, ಎಲ್ಲವೂ ಸಮೃದ್ಧವಾಗಿಯೇ ಇದೆ. ಇದನ್ನು ದಯಪಾಲಿಸಿದ ತಮ್ಮಂತವರ ಸೇವೆ ಮಾಡುವುದೇ ನನ್ನ ಸೌಭಾಗ್ಯವೆಂದು ಭಾವಿಸಿದ್ದೇನೆ" ಎಂದ ಆ ರೈತ. ಇದರಿಂದ ಮತ್ತಷ್ಟು ಸಂತುಷ್ಟರಾದ ಆ ಯೋಗಿ; ಈ ಭಾವ ನಿನ್ನಲ್ಲಿ ಶಾಶ್ವತವಾಗಿರಲಿ, ನಿನ್ನ ಕುಲಕ್ಕೆ ಎಂದೂ ಕೊರತೆ ಉಂಟಾಗುವುದಿಲ್ಲ, ನೀನು ನೆಚ್ಚಿರುವ ಭೂತಾಯಿ ನಿನ್ನನ್ನೆಂದೂ ಕೈ ಬಿಡುವುದಿಲ್ಲ. ಆಕೆಯನ್ನು ಸದಾ ಭಕ್ತಿಯಿಂದ ಸ್ಮರಿಸು; ಒಳ್ಳೆಯ ಬೆಳೆ, ಹಣ್ಣು ಹಂಪಲಗಳನ್ನು ಕೊಡುವ ಆ ತಾಯಿಯ ಗರ್ಭದಿಂದ ನಿನಗೆ ಅಪಾರವಾದ ಸಂಪತ್ತು ದೊರೆಯುವುದಿದೆ. ಅದನ್ನು ಪಡೆದುಕೊಂಡು ಸಾತ್ವಿಕ ಭಾವದಿಂದ ಉಪಯೋಗಿಸು. ಅಸಹಾಯಕರಿಗೆ, ನಿರ್ಗತಿಕರಿಗೆ, ಬಡವರಿಗೆ, ಸಾಧ್ಯವಾದಷ್ಟು ದಾನ ಮಾಡು. ನಿನ್ನ ಮನೆಯಲ್ಲಿ ಹೊಲದಲ್ಲಿ ದುಡಿಯುವ ಕೆಲಸಗಾರರನ್ನು ನಿನ್ನ ಮಕ್ಕಳಂತೆ ಕಾಣು. ಪರಮಾತ್ಮನ ಅನುಗ್ರಹದಿಂದ ದೊರೆತಿರುವ ಸಂಪತ್ತನ್ನು ಎಂದೂ ದುರಾಚಾರಕ್ಕೆ ಬಳಸಬೇಡ. ನಿನ್ನ ಕುಲಕ್ಕೆಲ್ಲ ಪರಮಾತ್ಮ ಸಕಲ ಸೌಭಾಗ್ಯವನ್ನು ಕರುಣಿಸುವನು ಎಂದು ಆಶೀರ್ವದಿಸಿದರು.

ಆ ರೈತ ಬೇರೆ ಯಾರೂ ಅಲ್ಲ, **"ರೆಡ್ಡಿ ಸಾಮ್ರಾಜ್ಯದ ಸ್ಥಾಪಕ ಪ್ರೋಲಯ ವೇಮಾರಡ್ಡಿಯ ತಂದೆ ಅಲ್ಲಾಡ ರೆಡ್ಡಿ. ಯೋಗಿಗಳಿಂದ ಅನುಗ್ರಹಿತನಾದ ಅಲ್ಲಾಡ ರೆಡ್ಡಿ ಯೋಗಿಯ ಸ್ಮರಣೆಗಾಗಿ ತನ್ನ ಮಕ್ಕಳ ಮೂಲ ಹೆಸರಿನೊಂದಿಗೆ 'ವೇಮನ' ಎನ್ನುವುದನ್ನು ಸೇರಿಸಿದ."**

ಯೋಗಿಯ ಅನುಗ್ರಹದಿಂದ ಭಾರಿ ಸಂಪತ್ತು ದೊರೆತನಂತರ ಅಲ್ಲಾಡ ರೆಡ್ಡಿ ಜನಹಿತ ಕಾರ್ಯಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡ. ತನಗೆ ಬರುವ ವರಮಾನದ ಬಹುಭಾಗವನ್ನು ದಾನ ಮತ್ತು ಧರ್ಮದ ಕಾರ್ಯಗಳಿಗೆ ಉಪಯೋಗಿಸುತ್ತಿದ್ದ. ಬಡವರಿಗೆ ಮನೆ ಅವರ ಮಕ್ಕಳಿಗೆ ಶಿಕ್ಷಣ ಗ್ರಾಮಗಳಲ್ಲಿ ಧರ್ಮಶಾಲೆಗಳನ್ನು ತೆರೆದು ಉಚಿತವಾಗಿ ಊಟ ದೊರೆಯುವಂತೆ ಮಾಡುತ್ತಿದ್ದ.

ಹೊಲಗಳಿಗೆ ರಸ್ತೆ, ಕುಡಿಯುವ ನೀರಿಗಾಗಿ ಕೆರೆಗಳನ್ನು ನಿರ್ಮಿಸಿದ. ಕೆಲವೇ ದಿನಗಳಲ್ಲಿ ಕೊಂಡವೀಡುವಿನ ಸುತ್ತ ಮುತ್ತಲಿನ ಗ್ರಾಮಸ್ಥರಿಗೆಲ್ಲ ಅಲ್ಲಾಡರೆಡ್ಡಿ ದೇವರಾಗಿ ಕಾಣಲಾರಂಭಿಸಿದ. ಆದರೂ ಆತ ತನ್ನಲ್ಲಿ ಒಂದಿನಿತೂ ಅಹಂಕಾರಕ್ಕೆ ಆಸ್ಪದ ನೀಡಲಿಲ್ಲ. ತನ್ನ ಎಲ್ಲ ಮಕ್ಕಳಿಗೂ ಇದೇ ಭಾವದಲ್ಲಿ ಮುಂದುವರೆಯಲು ಪ್ರೇರೇಪಿಸುತ್ತಿದ್ದ.

## ರಡ್ಡಿ ಸಾಮ್ರಾಜ್ಯ

ಅಲ್ಲಾಡ ರಡ್ಡಿಯ ನಾಲ್ಕು ಜನ ಗಂಡು ಮಕ್ಕಳು ಆದ್ದಂಕಿ, ಅಮರಾವತಿ, ಕೊಂಡವೀಡು, ಕಂದಕೂರುಗಳ ನಾಯಕರಾಗಿ ಜನಸೇವೆ ಮಾಡುತ್ತಿದ್ದರು. ಆ ಪ್ರದೇಶವನ್ನು ಆಳುವ ಅರಸರಿಗೂ ಇವರನ್ನು ಕಂಡರೆ ಅಪಾರ ಪ್ರೀತಿ; ಕಾರಣ ಇರುವ ಅರಸರಿಗೆ ಮೋಸ ಮಾಡಿ ಅಥವಾ ಯುದ್ಧಮಾಡಿ ಅವರನ್ನು ಸೋಲಿಸಿ ಅಧಿಕಾರಕ್ಕಾಗಿ ಆಸೆ ಪಡುತ್ತಿರಲಿಲ್ಲ. ಹೀಗಾಗಿ ಇವರ ಮೇಲೆ ಅವರಿಗೆ ನಂಬಿಕೆ ಮತ್ತು ವಿಶೇಷವಾದ ಪ್ರೀತಿ.

ಆಂಧ್ರಪ್ರದೇಶದ ಈ ಭಾಗಗಳಲ್ಲಿ ಕಾಕತೀಯ ಅರಸರು ರಾಜ್ಯಭಾರ ಮಾಡುತ್ತಿದ್ದರು. ಮೂರು ಶತಮಾನಗಳಿಂದ ಇವರು ಈ ಭಾಗದಲ್ಲಿ ಆಳ್ವಿಕೆ ನಡೆಸುತ್ತಿದ್ದರು. ಇವರ ಬಹುಭಾಗ ರಾಜಕೀಯ ನಿರ್ಣಯಗಳು ಮತ್ತು ಸೇನಾಧಿಪತ್ಯ ಅಲ್ಲಾಡ ರಡ್ಡಿಯ ಮಕ್ಕಳಿಂದ ನಿಯಂತ್ರಿಸಲ್ಪಡುತ್ತಿತ್ತು. 1309ರಲ್ಲಿ ಆರಂಭವಾದ ಮಹಮ್ಮದೀಯರ ದಾಳಿಯಿಂದಾಗಿ ಕಾಕತೀಯ ಸಾಮ್ರಾಜ್ಯವು ದೊಡ್ಡ ಪ್ರಮಾಣದಲ್ಲಿ ಹಾನಿಯನ್ನನುಭವಿಸಿತು. ನಂತರ ಮಹಮ್ಮದ್ ಬಿನ್ ತುಘಲಕ್‌ನ ಕಾಲದಲ್ಲಿ ಆದ ಭಾರಿ ದಾಳಿಯಲ್ಲಿ ಕಾಕತೀಯ ಅರಸು ವಾರಂಗಲ್ಲದ ಪ್ರತಾಪರುದ್ರ ಸೋತು ಸೆರೆ ಸಿಕ್ಕ. ಸೆರೆಯಾಳಾಗಿ ದಿಲ್ಲಿಗೆ ಹೋಗುವ ಮಾರ್ಗ ಮಧ್ಯದಲ್ಲಿಯೇ ಅಸುನೀಗಿದ.

ಕಾಕತೀಯ ಅರಸು ಸೆರೆ ಸಿಕ್ಕ ತಕ್ಷಣ ತನ್ನ ಧೂತರ ಮೂಲಕ ಪ್ರೋಲಯ ವೇಮಾರಡ್ಡಿಗೆ ಸಂದೇಶ ಕಳುಹಿಸಿ ರಾಜನಾಗಿ ಅಧಿಕಾರ ಸ್ವೀಕರಿಸಿ ಹೇಗಾದರೂ ಮಾಡಿ ರಾಜ್ಯವನ್ನು ಉಳಿಸು ಎಂದಿದ್ದ. ರಾಜ್ಯದಲ್ಲುಂಟಾದ ಅರಾಜಕತೆಯನ್ನು ವೀರಾವೇಶದಿಂದ ಹೋರಾಡಿ ನಿಯಂತ್ರಣಕ್ಕೆ ತಂದ **ಪ್ರೋಲಯ ವೇಮಾರಡ್ಡಿ ಆದ್ದಂಕಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು 1324ರಲ್ಲಿ ಸ್ವತಂತ್ರ ರಡ್ಡಿ ಸಾಮ್ರಾಜ್ಯವನ್ನು ಸ್ಥಾಪಿಸಿದ.**

ಪ್ರೋಲಯ ವೇಮಾರಡ್ಡಿಯ ತಮ್ಮಂದಿರೂ ತಮ್ಮ ಸುಪರ್ಧಿಯಲ್ಲಿದ್ದ ಅಮರಾವತಿ, ಕೊಂಡವೀಡು, ಮತ್ತು ಕಂದಕೂರುಗಳ ಆಡಳಿತವನ್ನು ನೋಡಿಕೊಳ್ಳಲಾರಂಭಿಸಿದರು. 1324 ರಿಂದ 1424ರ ವರೆಗೆ ಆಡಳಿತ ನಡೆಸಿದ



ರಡ್ಡಿ ರಾಜರುಗಳ ತಮ್ಮ ತಮ್ಮಲ್ಲಿಯ ದಾಯಾದಿ ಕಲಹ, ತೀವ್ರವಾದ ಬರಗಾಲದಿಂದಾಗಿ ವಿಜಯನಗರ ಸಾಮ್ರಾಜ್ಯದಲ್ಲಿ ರಡ್ಡಿ ರಾಜ್ಯ ವಿಲೀನವಾಯಿತು.

### ರಡ್ಡಿ ರಾಜರುಗಳ ಆಳ್ವಿಕೆ

1. ಪ್ರೋಲಯ ವೇಮಾರಡ್ಡಿ – 1324–1339
2. ದೇಸಟಿ ವೇಮಾರಡ್ಡಿ – 1339–1350
3. ಅನುಪೋತ ವೇಮಾರಡ್ಡಿ – 1350–1362
4. ಅನುವೇಮಾರಡ್ಡಿ – 1365–1380
5. ಕುಮಾರ ಗಿರಿರಡ್ಡಿ – 1380–1400
6. ಪೆದ್ದು ಕೋಮಟಿ ವೇಮ ಭೂಪಾಲ – 1400–1420
7. ರಾಚವೇಮಾರಡ್ಡಿ – 1420–1424

ವಿಜಯನಗರ ಸಾಮಂತರಾಗಿ ಕ್ರಿ.ಶ. 1424–1448 ರ ವರೆಗೆ ಮುಂದುವರೆದು ನಂತರ ವಿಜಯನಗರ ಸಾಮ್ರಾಜ್ಯದಲ್ಲಿ ರಡ್ಡಿ ರಾಜ್ಯವು ವಿಲೀನವಾಯಿತು.

### ರಡ್ಡಿ ಎಂದರೆ ಯಾರಿವರು?

**ರಡ್ಡಿ–ರೆಡ್ಡಿ ಎನ್ನುವ ಶಬ್ದ ಸಂಸ್ಕೃತದ "ರಾಟ", ಎನ್ನುವ ಶಬ್ದದಿಂದ ಉತ್ಪನ್ನವಾಗಿದೆ. ರಡ್ಡಿ ಎಂದರೆ ರಾಜ, ರೈತ, ನಾಯಕ, ಊರ ಗೌಡ, ರಾಷ್ಟ್ರಕಟ್ಟುವ ಕೆಲಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು, ಸೇನಾಧಿಪತಿ, ಪಾಲಕ ಎಂಬ ವಿಭಿನ್ನ ಅರ್ಥಗಳಿವೆ.**

ಇವರ ಮೂಲ ದಕ್ಷಿಣ ಭಾರತವೆಂದೂ, ಇವರು ದ್ರಾವಿಡ ಜನಾಂಗಕ್ಕೆ ಸೇರಿದವರೆಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ. **ರಟ್ಟೆ ಮುರಿದು ದುಡಿಯುವವರೆಲ್ಲರೂ ರಡ್ಡಿ ಜನರು ಎನ್ನುವುದು ಜನಜನಿತ. ಆಂಧ್ರದಲ್ಲಿ ಕಾಪು ಎಂದು ಕರೆಯುವವರೂ ರಡ್ಡಿಗಳೇ. ಹರಿಯಾಣ, ಪಂಜಾಬ, ಮಧ್ಯಪ್ರದೇಶ, ರಾಜಸ್ಥಾನ, ಗುಜರಾತಗಳಲ್ಲಿರುವ "ಜಾಟರು" ಸಹ ಈ ಜನಾಂಗಕ್ಕೆ ಸೇರಿದವರು. ಬಿಹಾರ ಮತ್ತು ನೇಪಾಳಗಳಲ್ಲಿ ಇವರನ್ನು "ಶಾಕ್ಯ" ರೆಂದು ಕರೆಯುತ್ತಾರೆ.**

## ಮಹಾಯೋಗಿ ವೇಮನರ ಜನನ

ವೇಮನರ ಪದ್ಯಗಳನ್ನು ಆಧರಿಸಿ ಹೇಳುವುದಾದರೆ, ಅವರು ನಂದನ ನಾಮ ಸಂವತ್ಸರದ ಕಾರ್ತೀಕ ಶುದ್ಧ ಪೂರ್ಣಿಮೆಯಂದು, ಕೊಂಡವೀಡು ಪಟ್ಟಣದ

ಮೂಗಚಿಂತಪಲ್ಲಿಯಲ್ಲಿ ಜನಿಸಿದರು. ಅವರು 68 ವರ್ಷಗಳ ಕಾಲ ಬಾಳಿ ಶಾರ್ವರಿ ಶುಕ್ಲ ಪಕ್ಷ ನವಮಿಯಂದು ಕಟಾರಪಲ್ಲಿಯಲ್ಲಿ ನಿಶ್ಚಲ ತತ್ವದಲ್ಲಿ ಲೀನವಾದರು. ಆ ದಿನ ಶ್ರೀ ರಾಮ ಮಹಾನಿರ್ವಾಣದ ದಿನ.

ಚಾರ್ಲಸ್ ಫಿಲಿಫ್ ಬ್ರೌನ್ ಎಂಬ ಬ್ರಿಟಿಷ ಅಧಿಕಾರಿ ಕ್ರಿ.ಶ. 1816ರಲ್ಲಿ ಮಹಾಯೋಗಿ ವೇಮನರ ಜೀವನ ಮತ್ತು ತತ್ವಚಿಂತನೆಯ ಅಧ್ಯಯನವನ್ನು ಆರಂಭಿಸಿದರು. ಜನರ ಬಾಯಿಯಲ್ಲಿರುವ ಪದ್ಯಗಳ ಸಾಹಿತ್ಯವನ್ನು ಹುಡುಕಲು ಒಂದು ಅಭಿಯಾನವನ್ನೇ ನಡೆಸಿದರು. ಈ ಪ್ರಯತ್ನದಲ್ಲಿ 1215 ಪದ್ಯಗಳನ್ನು ಸಂಗ್ರಹಿಸಿದರು. ನಂತರದ ಸಂಶೋಧನೆಯಲ್ಲಿ ಸುಮಾರು 20,000 ಪದ್ಯಗಳಿವೆಯೆಂದು ಅಂದಾಜು ಮಾಡಲಾಗಿದೆ. ಇಲ್ಲಿಯ ವರೆಗೆ 6000 ಪದ್ಯಗಳನ್ನು ಗ್ರಂಥಸ್ಥಗೊಳಿಸಲಾಗಿದೆ. ಮೂಲ ತೆಲುಗು ಭಾಷೆಯಲ್ಲಿರುವ ಈ ಪದ್ಯಗಳಲ್ಲಿ ಸುಮಾರು 4000 ಪದ್ಯಗಳನ್ನು ಕನ್ನಡ ಭಾಷೆಗೆ ತರ್ಜುಮೆ ಗೊಳಿಸಲಾಗಿದೆ.

ಈ ಪದ್ಯಗಳನ್ನು ಗ್ರಂಥಸ್ಥಗೊಳಿಸಲು ಪ್ರಥಮ ಪ್ರಯತ್ನ ಆರಂಭಿಸಿದ ಬ್ರಿಟಿಷ ಅಧಿಕಾರಿಯಾದ ಸಿ. ಪಿ. ಬ್ರೌನ್‌ರವರು 25 ವರ್ಷಗಳ ತಮ್ಮ ರಾಯಲ್ ಸೀಮಾ ವಲಯದಲ್ಲಿಯ ಸೇವೆಯಲ್ಲಿರುವಾಗ ವೇಮನರನ್ನು, ಅವರ ಸಾಹಿತ್ಯವನ್ನು ಪರಿಪೂರ್ಣವಾಗಿ ಅರ್ಥಮಾಡಿಕೊಳ್ಳಲು ಶುದ್ಧ ತೆಲುಗು ಭಾಷೆಯನ್ನು ಕಲಿತು ವೇಮನರ ಬಗೆಗೆ ಆಳವಾದ ಸಂಶೋಧನೆಯನ್ನು ಮಾಡಿ ಅವರ ಜನನ ಕ್ರಿ.ಶ. 1412ರಲ್ಲಿ ಆಯಿತೆಂದು ನಿಗದಿ ಮಾಡಿದರು. ಆಂಧ್ರಪ್ರದೇಶದ ಹಲವಾರು ಜನಾಂಗದ ಜನರು ಸಂಕ್ರಮಣವಾದ ಐದನೆಯ ದಿನ ವೇಮನರ ಪುಣ್ಯ ಸ್ಮರಣೆಯ ನೆನಪಿನಲ್ಲಿ ಅವರ ಜಯಂತ್ಯುತ್ಸವವನ್ನು ಹಲವಾರು ತಲೆಮಾರುಗಳಿಂದ ಆಚರಿಸುತ್ತಿರುವುದನ್ನು ಗಮನಿಸಿ ಅವರ ಜನ್ಮ ದಿನಾಂಕವನ್ನು ಜನೇವರಿ 19 ಎಂದು ನಿರ್ಧರಿಸಲಾಗಿದೆ.

ಅಂದಿನಿಂದ ಇಂದಿನವರೆಗೆ ಹಲವಾರು ವಿದ್ವಾಂಸರ ಅಭಿಪ್ರಾಯವನ್ನು ಸಂಗ್ರಹಿಸಿ ಕರ್ನಾಟಕ ಸರ್ಕಾರವೂ ಸಹ ಇದನ್ನು ಒಪ್ಪಿ ಪ್ರತಿ ವರ್ಷದ ಜನೆವರಿ 19ನೇ ತಾರೀಖಿನಂದು ವೇಮನ ಜಯಂತ್ಯುತ್ಸವವನ್ನು ಸರ್ಕಾರದ ವತಿಯಿಂದ ಆಚರಿಸಲು ಆದೇಶ ಹೊರಡಿಸಿದೆ.

**ಅಂದರೆ ವೇಮನರ ಜೀವಿತ ಕಾಲ ಜನೆವರಿ 19, 1412 ರಿಂದ 1480 ರಾಮನವಮಿಯವರೆಗೆ.**

## ವೇಮನರ ಶಿಕ್ಷಣ

ರೆಡ್ಡಿ ಅರಸು ಮನೆತನದ ಐದನೆಯ ಅರಸನಾಗಿ ರಾಜ್ಯಭಾರ ಮಾಡಿದ (1380–1400) ಕುಮಾರಗಿರಿರೆಡ್ಡಿ (ಕೋಮರು ಗಿರಿರೆಡ್ಡಿ) ಮತ್ತು ಕೂತೂರು



ಮಲ್ಲಮ್ಮ ಎಂಬ ದೈವ ಭಕ್ತರ ಐದನೆಯ ಮಗನಾಗಿ ವೇಮನ ಜನಿಸಿದ. ವೇಮನ ಎರಡು ವರುಷದ ಹಸುಳೆಯಿರುವಾಗಲೇ ರೆಡ್ಡಿ ಅರಸರುಗಳ ದಾಯಾದಿ ಕಲಹ ತೀವ್ರವಾಗಿತ್ತು. ತಮ್ಮ ತಮ್ಮಲ್ಲಿಯೇ ಘೋರವಾದ ಯುದ್ಧ ಮಾಡಿಕೊಳ್ಳುತ್ತಿದ್ದರು. ಇದೆಲ್ಲವನ್ನು ಸಹಿಸಲಾಗದ ಮಲ್ಲಮ್ಮ ಶ್ರೀಶೈಲ ಮಲ್ಲಿಕಾರ್ಜುನನ ಸೇವೆಯಲ್ಲಿ ನಿರತಳಾಗಿಬಿಟ್ಟಳು. ದೇವಾಲಯದ ಜೀರ್ಣೋದ್ಧಾರ, ಮಹಾದ್ವಾರಗಳ ನಿರ್ಮಾಣ, ಪ್ರಸ್ಥಗಳನ್ನು ನಡೆಸುವುದರಲ್ಲಿ ಹೆಚ್ಚಿನ ಸಮಯ ಕಳೆಯಲಾರಂಭಿಸಿದಳು. ಅಂತಿಮವಾಗಿ ಶ್ರೀಶೈಲದಲ್ಲಿಯೇ ಐಕ್ಯಳಾದಳು. ವೇಮನ ತನ್ನ ಅಣ್ಣನ ಹೆಂಡತಿ ಹಾಗೂ ಸೋದರತ್ತೆಯ ಮಗಳಾದ ಹೇಮರಡ್ಡಿ ಮಲ್ಲಮ್ಮಳ ಆಶ್ರಯದಲ್ಲಿ ಬೆಳೆಯಲಾರಂಭಿಸಿದ. ಮಕ್ಕಳಿಲ್ಲದ ಅತ್ತಿಗೆ ವೇಮನನನ್ನು ತನ್ನ ಮಗನಂತೆ ಪ್ರೀತಿಸಲಾರಂಭಿಸಿದಳು. ವೇಮನ ಸ್ವಚ್ಛಂದವಾಗಿ ಸುಂದರ ವಾತಾವರಣದಲ್ಲಿ ತನ್ನಿಷ್ಟದಂತೆ ಬೆಳೆಯಲಾರಂಭಿಸಿದ.

ವೇಮನ ಮುದ್ದಾದ ಬಾಲಕ. ರಾಜಪರಿವಾರದ ಪರಿಪಾಟದಂತೆ ಮನೆಯಲ್ಲಿಯೇ ಶಿಕ್ಷಣ ನಡೆಯಿತು. ಕೊಂಡವೀಡುವಿನಲ್ಲಿ ಪ್ರಾಥಮಿಕ ಹಂತದ ಶಿಕ್ಷಣ ಮುಗಿಸಿದ ವೇಮನ, ನಂತರ **'ಇವ್ವಟೂರಿ ಸೋಮಶೇಖರ' ಗುರುಗಳಲ್ಲಿ** ವಿದ್ಯಾಭ್ಯಾಸ ಮಾಡಿದ. ಖ್ಯಾತ ಕವಿ ಬೊಮ್ಮರ ಪೋತನನೂ ಕೂಡ ಅದೇ ಗುರುಪೀಠದಲ್ಲಿ ಅಧ್ಯಯನ ಮಾಡಿದವರು.

ವೇಮನ ಶಾಲೆಯ ಓದಿನಲ್ಲಿ ನಿರಾಸಕ್ತ. ಪ್ರಕೃತಿ ಸೌಂದರ್ಯ ಸವಿಯುತ್ತ ಹೊಳೆ, ಹಳ್ಳಗಳ ಹರಿತ, ಪಶು ಪಕ್ಷಿಗಳ ಓಡಾಟ–ಹಾರಾಟಗಳಲ್ಲಿ ಮನಸ್ಸನ್ನು ಮಗ್ನನಾಗಿಸಿದ್ದ. ಸಾಂಪ್ರದಾಯಿಕ ಶಿಕ್ಷಣಕ್ಕೆ ತೀವ್ರ ವಿರೋಧಿಯಾಗಿದ್ದ. ಗುರುಕುಲದ ನಾಲ್ಕು ಗೋಡೆಯ ಮಧ್ಯದಲ್ಲಿಯ ಶಿಕ್ಷಣವೆಂಬುದು ನಿರರ್ಥಕವೆಂದು ವೇಮನ ವಾದಿಸುತ್ತಿದ್ದ. ಅಕ್ಷರಾಭ್ಯಾಸವಾದ ನಂತರದ ಶಿಕ್ಷಣ ಏನಿದ್ದರೂ ನಿಸರ್ಗ ಮತ್ತು ಸಮಾಜದ ಆಗುಹೋಗುಗಳನ್ನು ನೋಡಿ ಅನುಭವಿಸಿ ಕಲಿಯಬೇಕೆಂದು ಬಲವಾಗಿ ನಂಬಿದ್ದ. ಪ್ರತಿಯೊಂದು ವಿಷಯವನ್ನು ಹಲವಾರು ಪ್ರಶ್ನೆಗಳ ಮೂಲಕ ಪರಾಮರ್ಶಿಸಿದರೂ, ತನಗೆ ಸ್ವ–ಅನುಭವವಾಗುವವರೆಗೆ ನಂಬುವುದಿಲ್ಲ ಎನ್ನುತ್ತಿದ್ದ. ಪ್ರಖಾಂಡ ಪಾಂಡಿತ್ಯ, ಮೇಲಾಗಿ ಅರಸರ ಮಗ. ಹೀಗಾಗಿ ಗುರುಗಳು ಆತನು ತನಗಿಷ್ಟದಂತೆ ಇರಲು ಬಿಟ್ಟಿದ್ದರು. ಬ್ರಹ್ಮಸ್ವರೂಪಿಯಾದ ಸೋಮಶೇಖರ ಗುರುಗಳು ವೇಮನನಲ್ಲಿರುವ ವಿಶೇಷತೆಯನ್ನು ಗುರುತಿಸಿದರು. ಮುಂದೆ ಆತ ಮಹಾಯೋಗಿಯಾಗಿ ಸರ್ವ ಸಮಾಜಕ್ಕೆ ಸತ್ಯ ದರ್ಶನ ಮಾಡಿಸುವ ಸಂತ ಕವಿಯಾಗುವನೆಂದು ಭವಿಷ್ಯ ನುಡಿದಿದ್ದರು.

ವೇಮನ ಗುರುಕುಲವಾಸದಿಂದ ಲೌಕಿಕ ಶಿಕ್ಷಣವನ್ನು ಮತ್ತು ಪಾರಮಾರ್ಥಿಕ ದರ್ಶನವನ್ನು ಪಡೆದಿದ್ದ. ಶಿಕ್ಷಣ ಪಡೆದವರು ಅದನ್ನು ಕೇವಲ ಹೊಟ್ಟೆ ಹೊರೆಯುವುದಕ್ಕೆ, ರಾಜನಾಗಲಿಕ್ಕೆ ಅಥವಾ ವ್ಯಾಪಾರ ಮಾಡಲಿಕ್ಕೆ

ಉಪಯೋಗಿಸುವುದನ್ನು ನೋಡಿ ವ್ಯಾಕುಲನಾದ. ಸಮಾಜದಲ್ಲಿಯ ಕಂದಾಚಾರ, ಅನಿಷ್ಟ ಆಚರಣೆಗಳನ್ನು ನೋಡಿ ರೋಸಿಹೋಗಿ ಇವುಗಳಿಗೆಲ್ಲ ಒಂದು ಪರಿಹಾರ ಕಂಡುಹಿಡಿಯುವುದು ತನ್ನ ಜೀವನದ ಗುರಿಯೆಂದು ನಿರ್ಧರಿಸಿದ. ಪ್ರತಿಯೊಬ್ಬರ ಅಂತರಾತ್ಮದಲ್ಲಿ ದೇವರಿದ್ದಾನೆ. ಪ್ರತಿಯೊಬ್ಬರೂ ಈ ಸತ್ಯವನ್ನು ಅರಿತು ಆನಂದವಾಗಿ ಬದುಕಲು ಮಾರ್ಗದರ್ಶನ ನೀಡಬೇಕೆಂದು ಸದಾ ಚಿಂತಿಸುತ್ತಿದ್ದ.

ವೇಮನ ಗುರುಕುಲವಾಸದಲ್ಲಿರುವಾಗ ಪ್ರಪಂಚದ ಪ್ರಮುಖ ಮತ, ಧರ್ಮಗಳ ಬಗೆಗೆ ಆಳವಾದ ಅಧ್ಯಯನ ಮಾಡಿದ. ಸಾಮಾನ್ಯ ಶಿಕ್ಷಣದ ಜೊತೆಗೆ ಆ ಕಾಲದಲ್ಲಿ ಜಾರಿಯಲ್ಲಿದ್ದ ಶೈವ, ವೈಷ್ಣವ, ಶಾಕ್ತ, ಗಾಣಪತ್ಯ, ಕೌಮಾರ, ಸೌರ ಮುಂತಾದ ವೇದ ಸಮ್ಮತ ಮತಗಳ ಜೊತೆಗೆ ಬೌದ್ಧ, ಜೈನ ಮತಗಳನ್ನೂ ಅಧ್ಯಯನ ಮಾಡಿದ. ವೇಮನರ ಕಾಲಕ್ಕಿಂತ ಒಂದೆರಡು ಶತಮಾನಗಳ ಮೊದಲು ದೇಶದಲ್ಲಿ ಕಾಲೂರಿದ್ದ ಇಸ್ಲಾಂ ಮತದ ಬಗೆಗೂ ಅಧ್ಯಯನ ಮಾಡಿದ.

## ವೇಮನರ ಭೋಗ ಜೀವನ

ವೇಮನರು ಗುರುಕುಲ ಶಿಕ್ಷಣ ಮುಗಿಸಿ ಮನೆಗೆ ಮರಳುವಷ್ಟರಲ್ಲಿ ರೆಡ್ಡಿ ರಾಜ್ಯಗಳ ದಾಯಾದಿ ಕಲಹ ನಂದಿರಲಿಲ್ಲ. ತಮ್ಮ ತಮ್ಮಲ್ಲಿಯೇ ಹಲವಾರು ಯುದ್ಧಗಳನ್ನು ಮಾಡಿಕೊಂಡು ಅಪಾರವಾದ ಹಾನಿಯನ್ನನುಭವಿಸಿದ್ದರು. ಕೋಮಟಿ ವೇಮಾರೆಡ್ಡಿ ಅರಸನಾಗಿ ಅಧಿಕಾರ ಸ್ವೀಕರಿಸಿದ್ದರಿಂದ ನಿರುದ್ಯೋಗಿಯಂತಾಗಿದ್ದ ವೇಮನರ ತಂದೆ ಕುಮಾರಗಿರಿರಡ್ಡಿ ಸಂಗೀತ ಮತ್ತು ನೃತ್ಯಲೋಲನಾಗಿ ಕಾಲಕಳೆಯುತ್ತಿದ್ದ. ಈ ಕಲೆಯಲ್ಲಿ ಪ್ರಾವೀಣ್ಯತೆಯನ್ನು ಪಡೆದಿದ್ದ ದೇವದಾಸಿ ಮಹಿಳೆ 'ಲಕುಮಾದೇವಿ'ಯ ಪರಿಚಯವಾಗಿ ಆಕೆಯ ಮನೆಯಲ್ಲಿಯೇ ಹೆಚ್ಚು ಕಾಲ ಕಳೆಯಲಾರಂಭಿಸಿದ. ಈಕೆಯ ಮೋಹಪಾಶದಿಂದ ತಂದೆಯನ್ನು ಹೊರ ತರುವ ಜವಾಬ್ದಾರಿ ವೇಮನನ ಹೆಗಲಿಗೇರಿತು. ತಂದೆಯನ್ನು ಒತ್ತಾಯಪೂರ್ವಕವಾಗಿಯಂತೂ ಕರೆತರುವುದು ಸಾಧ್ಯವಿಲ್ಲ. ಅದಕ್ಕೆ ಉಪಾಯ ಮಾಡಲು ಲಕುಮಾದೇವಿಯ ಎಲ್ಲ ಕೆಲಸ ಮತ್ತು ಆಕೆಯ ಮೂಲವನ್ನೆಲ್ಲ ತಿಳಿಯಲು ನಿರ್ಧರಿಸಿ ಮೇಲಿಂದ ಮೇಲೆ ಆಕೆಯ ಮನೆಯ ಸುತ್ತಮುತ್ತ ಹೋಗಿ ಮಾಹಿತಿಯನ್ನು ಸಂಗ್ರಹಿಸಲಾರಂಭಿಸಿದ. ಅದೊಂದು ದೊಡ್ಡ ಅರಮನೆಯಂತಿತ್ತು. ಅಲ್ಲಿ ನೃತ್ಯ, ಸಂಗೀತ, ಶಿಲ್ಪಕಲೆ ಮತ್ತು ಆಯುರ್ವೇದ ಔಷಧಗಳ ತಯಾರಿಕೆಗೆ ತರಬೇತಿ ನೀಡಲಾಗುತ್ತಿತ್ತು.

ಒಂದು ದಿನ ವೇಮನ ಲಕುಮಾದೇವಿಯ ಮಗಳು 'ವಿಶ್ವದಾ' ಭರತನಾಟ್ಯ ಕಲಿಯುವ ಪಾಠ ಶಾಲೆಗೆ ಪ್ರವೇಶಿಸಿದ. ಅಲ್ಲಿ ಹಾಡುವವರು ಮತ್ತು ವಾದ್ಯ ನುಡಿಸುವವರು ಹಲವಾರು ತಪ್ಪುಗಳನ್ನೆಸಗುತ್ತಿದ್ದರು. ಇದನ್ನು ನೋಡಿದ ವೇಮನ ಹಾಡುವ ಹಾಡೂ ತಪ್ಪು, ಉಚ್ಚರಿಸುವ ಸ್ವರವೂ ತಪ್ಪು, ವಾದ್ಯಗಳ ನುಡಿಯೂ



ತಪ್ಪು. ಇದೆಲ್ಲ ತಪ್ಪಿರುವಾಗ ಈಕೆಯ ನೃತ್ಯವೆಂತು ಸರಿಯಾದೀತು ಎಂದು ವ್ಯಂಗದ ಮಾತುಗಳನ್ನಾಡಿದ. ಇಪ್ಪತ್ತೊಂದರ ಯೌವ್ವನದ ಸದೃಢ ಶರೀರ, ಸುಂದರವಾದ ಕೋಲು ಮುಖ, ನೇರವಾದ ಮೂಗು, ಜ್ಞಾನದಿಂದ ತೇಜೋಮಯವಾಗಿ ಹೊಳೆಯುವ ಕಣ್ಣುಗಳು, ಕ್ಷಣಮಾತ್ರದಲ್ಲಿ ತಪ್ಪನ್ನು ಗ್ರಹಿಸುವ ಜಾಣ್ಮೆ, ನಿರ್ಭಿಡೆಯ ಮಾತು ಕೇಳಿದ ವಿಶ್ವದಾ, ಅದೇ ವ್ಯಂಗದ ಧ್ವನಿಯಲ್ಲಿ ಸರಿಯಾದದ್ದು ಯಾವುದು ಎಂಬುದನ್ನು ತೋರಿಸಬಲ್ಲಿರಾ? ಎಂದಳು. ಗುರುಕುಲದಲ್ಲಿ ಸರ್ವವನ್ನೂ ಕಲಿತ ವೇಮನರಿಗೆ ಇವೆಲ್ಲವುಗಳ ಬಗೆಗೆ ವಿಶೇಷವಾದ ಜ್ಞಾನವಿತ್ತು ಮಧುರ ಕಂಠದಿಂದ ಹಾಡುವುದಲ್ಲದೇ ಅದ್ಭುತವಾಗಿ ಭರತನಾಟ್ಯವನ್ನು ಮಾಡಿ ತೋರಿಸಿದರು. ಇದೆಲ್ಲವನ್ನು ಆಶ್ಚರ್ಯ ಮತ್ತು ಅದ್ಭುತವೆಂಬಂತೆ ನೋಡಿದ ವಿಶ್ವದಾ, ಇದೆಲ್ಲವನ್ನು ನೀವು ಹೇಗೆ ಮಾಡಲು ಸಾಧ್ಯವಾಯಿತು? ಎಂದಳು. ಯಾರು ದೇವರು ಕೊಟ್ಟ ಕಲೆಯನ್ನು ದೇವರ ಸೇವೆ ಎಂದು ಮಾಡುತ್ತಾರೋ ಅವರೆಲ್ಲರಿಗೂ ಇದು ಸಾಧ್ಯ ನಿಮ್ಮಂತೆ ಕಲೆಯನ್ನೂ-ದೇಹವನ್ನೂ ಮಾರಿ ಹಣಗಳಿಸುವವರಿಗೆ ಸಾಧ್ಯವಾಗದು ಎಂದು ನಿಷ್ಠುರವಾಗಿ ನುಡಿದ. ಈ ಮಾತನ್ನು ಕೇಳಿದ ವಿಶ್ವದಾ ದುಃಖಿಸಲಾರಂಭಿಸಿದಳು.

ಆಕೆ ವೇಶ್ಯೆ ಲಕುಮಾದೇವಿಯ ಮಗಳಾಗಿಯೇನೋ ಜನಿಸಿದ್ದಳು. ತಾಯಿ ನೃತ್ಯ – ಸಂಗೀತ ಕಲೆಯಲ್ಲಿ ನಿಪುಣತೆಯನ್ನು ಸಾಧಿಸಿ, ನಾಥ ಸಂಪ್ರದಾಯದ ಗುರುಗಳಿಗೆ ಸೇವೆ ಮಾಡಿ ವಿಶ್ವದಾಳಿಗೆ ಜನ್ಮ ನೀಡಿದ್ದಳು. ನಂತರ ಆ ಕಾಲದಲ್ಲಿಯ ಸಂಪ್ರದಾಯದಂತೆ 'ದೇವದಾಸಿ' ಪದ್ಧತಿಯನ್ನು ಸ್ವೀಕರಿಸಿ, ಸಂಗೀತ ಮತ್ತು ನೃತ್ಯ ಕಲಿಸುವ ಮೂಲಕ ತನ್ನ ಜೀವನವನ್ನು ಸಾಗಿಸುತ್ತಿದ್ದಳು. ಇದೆಲ್ಲದರ ನಡುವೆ ರಾಜಮಹಾರಾಜರುಗಳ ಒತ್ತಾಯಕ್ಕೊಳಗಾಗಿ ತನಗರಿವಿಲ್ಲದಂತೆ ವೇಶ್ಯೆಯೂ ಆಗಿದ್ದಳು. ತನ್ನ ಸ್ಥಿತಿ ಮಗಳಿಗೂ ಬರಬಾರದೆಂದು ವಿಶೇಷ ಮುತುವರ್ಜಿ ವಹಿಸಿ ಆಕೆ ಯಾವುದೇ ಕಾಮುಕ ಪುರುಷರ ಕಣ್ಣಿಗೆ ಬೀಳದಂತೆ ಕಾಪಾಡಿದ್ದಳು. ನೃತ್ಯ ಮತ್ತು ಸಂಗೀತ ಕಲೆಯಲ್ಲಿ ವಿಶೇಷ ತರಬೇತಿಗೊಳಿಸಿ ಆಕೆಯನ್ನು ದೊಡ್ಡ ನೃತ್ಯ ಗುರುವನ್ನಾಗಿಸಬೇಕೆಂದು ಸಂಕಲ್ಪಿಸಿದ್ದಳು. ತಾನು ಅನುಭವಿಸಿದ ಕಷ್ಟಗಳನ್ನು, ಜನರು ಆಕೆಯನ್ನು ದುರುಪಯೋಗ ಪಡಿಸಿಕೊಂಡ ಬಗೆಯನ್ನು ಮೇಲಿಂದ ಮೇಲೆ ಹೇಳಿ ಎಂದೂ ಹಾದಿ ತಪ್ಪದಂತೆ ಮಾರ್ಗದರ್ಶನ ನೀಡುತ್ತಿದ್ದಳು. ನಾಥ ಸಂಪ್ರದಾಯದ ಗುರುಗಳ ಸೇವೆಯಲ್ಲಿದ್ದಾಗ ದೊರೆತ ಆಧ್ಯಾತ್ಮಿಕ ಅನುಭವವನ್ನು ಮಗಳಿಗೆ ನಿರಂತರವಾಗಿ ಉಪದೇಶಿಸುತ್ತಿದ್ದಳು. ಹಾಗಾಗಿ ವಿಶ್ವದಾಳಲ್ಲಿ ಸಾತ್ವಿಕ ಮತ್ತು ಆಧ್ಯಾತ್ಮಿಕ ಚಿಂತನೆಯ ವ್ಯಕ್ತಿತ್ವ ರೂಪುಗೊಳ್ಳುತ್ತಿತ್ತು. ಅಂತಹ ಸಂದರ್ಭದಲ್ಲಿ ವೇಮನರ ಮಾತು ಆಕೆಗೆ ಅಪಾರವಾದ ನೋವನ್ನುಂಟುಮಾಡಿತ್ತು.

ಹಾಗಾದರೆ ನಮ್ಮಂತವರು ಎಂದೂ ಸಾಮಾನ್ಯ ಮನುಷ್ಯರಾಗಿ ಬಾಳಲು ಸಾಧ್ಯವೇ ಇಲ್ಲವೇನು? ಎಂದಳು ವಿಶ್ವದಾ. ಖಂಡಿತ ಇದೆ. ಆದರೆ ಇದರಿಂದ ಹೊರಬರಬೇಕು ಎಂದನು ವೇಮನ. ತಕ್ಷಣ ವೇಮನನ ಕಾಲಿಗೆರಗಿದ ವಿಶ್ವದಾ

ನೀವೇ ನನ್ನನ್ನು ಈ ಜೀವನದಿಂದ ಮುಕ್ತಳಾಗಿಸಿ ಎಂದು ಪರಿಪರಿಯಾಗಿ ಬೇಡಿಕೊಂಡಳು. ಸ್ವತಃ ಜ್ಞಾನಿಯಾಗಿದ್ದ ವೇಮನರು ಆಕೆಯ ಅಂತರಾತ್ಮದಲ್ಲಿಯ ತುಡಿತವನ್ನು ಅರ್ಥೈಸಿದರು. ತನ್ನ ತಂದೆಯನ್ನು ಬಿಡಿಸಿಕೊಂಡು ಹೋಗಲು ಈಕೆಯ ಸಹಾಯವನ್ನು ಪಡೆಯಬಹುದು ಎಂದು ನಿರ್ಧರಿಸಿದರು. ಮೇಲಿಂದ ಮೇಲೆ ವಿಶ್ವದಾಳ ನೃತ್ಯ ಶಾಲೆಗೆ ಹೋಗಲಾರಂಭಿಸಿದರು. ವೇಮನರ ಸೌಂದರ್ಯ, ಜ್ಞಾನ, ಆತನ ಕವಿತೆ, ಮಧುರ ಮಾತುಗಳು, ಸರ್ವರ ತಪ್ಪುಗಳನ್ನು ಪ್ರೀತಿಯಿಂದ ತಿದ್ದಿ ಹೇಳುವ ಜಾಣ್ಮೆ, ಮುಗ್ಧ ಮನಸ್ಸಿನ ವಿಶ್ವದಾಳ ಮನಸ್ಸನ್ನು ಸೂರೆಗೊಂಡಿತು. ತನಗರಿವಿಲ್ಲದೇ ವೇಮನನಿಗೆ ಶರಣಾಗಿದ್ದಳು.

ವೇಮನರೂ ಸಹ ವಿಶ್ವದಾಳ ಬಿಸಿಯಪ್ಪುಗೆಯಲ್ಲಿ ತಮ್ಮನ್ನು ತಾವು ಮರೆತರು. ತಾನು ಗುರುಕುಲದಲ್ಲಿ ಕಲಿತ ವಿದ್ಯೆಯನ್ನೆಲ್ಲ ಆಕೆಗೆ ಹೇಳಿಕೊಟ್ಟರು. ವಿಶ್ವದಾ ತನ್ನ ಜೀವನವನ್ನು ವೇಮನರಿಗೆ ಮಾತ್ರ ಮೀಸಲಿಡಲು ಸಂಕಲ್ಪಿಸಿದಳು. ಆದರೆ ಆಕೆಯ ತಾಯಿಗೆ ಈ ರೀತಿ ತನ್ನ ಮಗಳು ಮೋಹ ಪಾಶದಲ್ಲಿ ಬೀಳುವುದು ಇಷ್ಟವಿರಲಿಲ್ಲ. ಆತ ನಿಜವಾಗಿ ನಿನ್ನನ್ನು ಪ್ರೀತಿಸುವುದಿಲ್ಲ, ಆತನದೇನಿದ್ದರೂ ತೋರಿಕೆಯ ಪ್ರೀತಿ ಎಂಬ ವಿಷ ಬೀಜವನ್ನು ಆಕೆಯ ತಲೆಯಲ್ಲಿ ಬಿತ್ತಲಾರಂಭಿಸಿದಳು. ವೇಮನ ಮಾತ್ರ ವಿಶ್ವದಾಳ ತಾಯಿಯ ಇಚ್ಛೆಯಂತೆ ಎಲ್ಲವನ್ನು ತಂದು ಕೊಡುತ್ತಿದ್ದ. ಇದರಿಂದ ವೇಮನ ಮತ್ತು ವಿಶ್ವದಾಳ ಪ್ರೀತಿ ಮತ್ತಷ್ಟು ಗಾಢವಾಯಿತು. ಹೇಗಾದರೂ ಮಾಡಿ ವೇಮನನಿಂದ ವಿಶ್ವದಾಳನ್ನು ಬಿಡಿಸಿಕೊಳ್ಳಲು ಆ ತಾಯಿ ಒಂದು ಹೊಂಚಿಕೆ ಹೂಡಿದಳು.

ವೇಮನ ನಿನ್ನನ್ನು ನಿಜವಾಗಿಯೂ ಪ್ರೀತಿ ಮಾಡುವವನಾಗಿದ್ದರೆ, ಆತನ ಅತ್ತಿಗೆ ಹೇಮರಡ್ಡಿ ಮಲ್ಲಮ್ಮಳ ಮೂಗುತಿಯನ್ನು ತಂದುಕೊಡಲು ಹೇಳು ಎಂದಳು. ಈ ಮಾತನ್ನು ಕೇಳಿದ ವೇಮನರಿಗೆ ಆಕಾಶವೇ ಕಳಚಿ ಬಿದ್ದಂತೆ ಆಘಾತವಾಯಿತು. ಮನೆಯ ಎಲ್ಲ ಕಷ್ಟ ನಷ್ಟಗಳನ್ನು ಸಹಿಸಿಕೊಂಡು, ತಾಯಿಗಿಂತಲೂ ಹೆಚ್ಚಾಗಿ ಪ್ರೀತಿಸಿ, ಸಾಕಿ, ಸಲುಹಿ ಎಲ್ಲವನ್ನೂ ಒದಗಿಸಿದ ತನ್ನ ಪಾಲಿನ ದೇವರೇ ಎಂದು ನಂಬಿರುವ ಅತ್ತಿಗೆಯ ಮೂಗುತಿಯನ್ನು ಪಡೆದು ಆಕೆಯನ್ನು ರಾಜಮಾತಾ ಎನ್ನುವ ಗೌರವದಿಂದ ಕೆಳಗಿಳಿಸುವ ಮಾತನ್ನು ಕೇಳಿ ವಿಚಲಿತನಾದ.

ವೇಮನ ಬಹಳ ದುಃಖಿತನಾಗಿದ್ದ, ತನ್ನ ಮೇಲೆಯೇ ತನಗೆ ಹೇಸಿಗೆ ಬರಲಾರಂಭಿಸಿತು. ಇಂತಹ ಕೀಳು ಮನಸ್ಸಿನವರ ಜೊತೆ ಇನ್ನೇನು ಕೆಲಸವೆಂದು ಮರು ಮಾತನಾಡದೆ ಮನೆಗೆ ಬಂದನು. ಇಷ್ಟು ಬೇಗ ಮನೆಗೆ ಬಂದ ವೇಮನನನ್ನು ನೋಡಿದ ಅತ್ತಿಗೆ, "ಯಾಕೋ ವೇಮನ ಇಷ್ಟು ಬೇಗ ಬಂದೆ ಎಂದಳು?" ವೇಮನನಿಗೆ ದುಃಖ ತಡೆಯಲಾಗಲಿಲ್ಲ. ವಿಶ್ವದಾಳ ಪ್ರಸ್ತಾಪವನ್ನು, ದುಃಖಿಸುತ್ತ ಅತ್ತಿಗೆಗೆ ಹೇಳುತ್ತಾನೆ. ಮಹಾಸಾಧ್ವಿಯಾದ ಹೇಮರಡ್ಡಿ ಮಲ್ಲಮ್ಮ ವೇಮನನ



ಮನಸ್ಸಿನಲ್ಲಾಗುತ್ತಿರುವ ಅಲ್ಲೋಲಕಲ್ಲೋಲವನ್ನು ಗ್ರಹಿಸಿದಳು. ಆತನನ್ನು ಪರಿವರ್ತಿಸಲು ಇದೇ ಒಳ್ಳೆಯ ಸಮಯ ಎಂದರಿತು ತನ್ನ ಮೂಗುತಿಯನ್ನು ಬಿಚ್ಚಿ ವೇಮನನ ಕೈಗಿತ್ತ ಅತ್ತಿಗೆ "ಈ ಜಗತ್ತಿನಲ್ಲಿ ನಡೆಯುವ ಅನಾಚರಗಳಿಗೆ, ಅನ್ಯಾಯಗಳಿಗೆ ಪರಿಹಾರ ಕಂಡು ಹಿಡಿಯುತ್ತೇನೆ ಎಂದು ಮಾತನಾಡುವ ನೀನು; ಅಶಾಶ್ವತ ಶರೀರದ ಮೇಲಿನ ಮೋಹಕ್ಕಾಗಿ ಅಲ್ಲವೇ ಇಷ್ಟೆಲ್ಲ ದುಃಖಿತನಾಗಿರುವುದು. ಈ ಮೂಗುತಿಯನ್ನು ಆಕೆಗೆ ಕೊಡುವ ಮೊದಲು ನನ್ನದೊಂದು ಕರಾರು; ಆಕೆ ಬೆತ್ತಲೆಯಾಗಿ ನರ್ತಿಸುವಂತೆ ಹೇಳು, ನಂತರ ಮೂಗುತಿಯನ್ನು ನೆಲದ ಮೇಲಿಡು ಆ ಮೂಗುತಿಯನ್ನು ಮುಂದೆ ಬಾಗಿ ತನ್ನ ತುಟಿಯಿಂದ ತೆಗೆದುಕೊಳ್ಳುವಂತೆ ಹೇಳು, ಕೆಲವು ಕ್ಷಣ ಆ ಬಾಗಿದ ಸ್ಥಿತಿಯಲ್ಲಿರುವಂತೆ ಹೇಳಿ ಹಿಂದಿನಿಂದ ಆಕೆಯ ಅಂಗಾಂಗಳೆಲ್ಲವನ್ನು ಸ್ಪಷ್ಟವಾಗಿ ನೋಡು" ಎಂದು ಹೇಳಿ ಕಳುಹಿಸಿದಳು. ಇದೇ ಮಾತನ್ನು ವೇಮನ ವಿಶ್ವದಾಳಿಗೆ ಹೇಳಿದ. ತಾಯಿಯ ಮಾತಿಗೆ ಮರುಳಾಗಿದ್ದ ವಿಶ್ವದಾ ವೇಮನ ಹೇಳಿದಂತೆ ಮಾಡಲು ಸಿದ್ಧಳಾದಳು ಎನ್ನುವುದು ಪುರಾಣಕಾರರ ಹಾಗೂ ನಾಟಕಕಾರರ ಅಭಿಪ್ರಾಯ.

## ಯೋಗಿಯಾದ ವೇಮನ

ಹೇಮರಡ್ಡಿ ಮಲ್ಲಮ್ಮ ನಾಟಕದಲ್ಲಿ ಈ ವಿಷಯವನ್ನು ರಂಜನೀಯಗೊಳಿಸಲು ವಿಶ್ವದಾ ಬಟ್ಟೆ ಕಳಚಿದಳು, ನಗ್ನವಾಗಿಯೇ ನೃತ್ಯ ಮಾಡಿದಳು, ಮುಂದೆ ಬಾಗಿ ತನ್ನ ತುಟಿಯಿಂದ ಮೂಗುತಿಯನ್ನು ತೆಗೆದುಕೊಳ್ಳುವಾಗ ವೇಮನ ಪ್ರಜ್ಞಾಪೂರ್ವಕವಾಗಿ ದೇಹದ ಉಬ್ಬು ತಗ್ಗುಗಳ ವಿಕಾರಗಳನ್ನು ನೋಡಿದ. ಮೊದಲು ಅರೆಬರೆ ಬಟ್ಟೆಯಲ್ಲಿ ಮಂದ ಬೆಳಕಿನಲ್ಲಿ, ಕಾಮದ ಪರವಶತೆಯಲ್ಲಿ ಮೋಹಗೊಳಿಸಿದ ಅಂಗಾಂಗಗಳೇ ವೇಮನನ ಮನಸ್ಸಿನಲ್ಲಿ ಹೇಯಭಾವನೆಯನ್ನುಂಟು ಮಾಡಿದವು. ಯಾವ ದೇಹ ರಚನೆಯ ಸೌಂದರ್ಯ, ದಷ್ಟ–ಪುಷ್ಟತೆ, ಮಾಟ–ಮೋಡಿಗಳಿಗೆ ಮೊದಲು ಮರುಳಾಗಿದ್ದನೋ, ಅದೇ ದೇಹದ ನಗ್ನ ರೂಪ ನೋಡಿ ಹೇಸಿಗೊಂಡನು ಎಂದು ಪ್ರಸ್ತುತಪಡಿಸಿದರು.

ಅದಾಗಲೇ ಬತ್ತಲೆಯಾಗಿರುವ ದೇವದಾಸಿ ಮೂಗುತಿಯನ್ನು ಧರಿಸಿ, ಬತ್ತಲೆಯಾಗಿರುವ ಪರಿವೆಯನ್ನೇ ಮರೆತು ಕನ್ನಡಿಯಲ್ಲಿ ತನ್ನ ಮುಖ ನೋಡಿಕೊಳ್ಳುತ್ತಿದ್ದಳು. ಸಾಕ್ಷಾತ್ ದೈವೀ ಸ್ವರೂಪದ ಅತ್ತಿಗೆಯ ಮೂಗಿನಲ್ಲಿರಬೇಕಾದ ರಾಜ ಮನೆತನದ ಗೌರವದ ಸಂಕೇತವಾದ ಮೂಗುತಿ ದೇಹ ಮಾರಿ ಹಣಗಳಿಸುವವಳ ಬತ್ತಲೆ ಶರೀರದ ಮೂಗಿನಲ್ಲಿರುವುದನ್ನು ನೋಡಿ ವೇಮನನ ತಲೆಯೇ ಸ್ಫೋಟವಾದಂತಾಯಿತು, ಹುಚ್ಚನಂತಾದ (ಇದನ್ನೇ ವೇಮನ ಹುಚ್ಚನಾದ ಎನ್ನುವ ಅರ್ಥದಲ್ಲಿ ಜನಪದರು ಮತ್ತು ಪುರಾಣಕಾರರು ಬಿಂಬಿಸಿದ್ದಾರೆ) ವೇಮನ ಅಲ್ಲಿಂದ ಹೊರ ಬಂದ. ದೇಹ ಪ್ರಪಂಚದ ಪರಿವೆಯನ್ನು ಹರಿದುಕೊಂಡಿತ್ತು.

ಮುಂದೆ ಏನು? ಎನ್ನುವುದು ಗೊತ್ತಿಲ್ಲದೆ ಕಾಲುಗಳು ತಮ್ಮಷ್ಟಕ್ಕೆ ತಾವೇ ನಡೆದು ಊರು ದಾಟಿ ಕಾಡು ಪ್ರವೇಶಿಸಿದ್ದವು.

ಊರು ಬಿಟ್ಟು ದೂರ ಬಂದಿದ್ದ. ದೂರದ ಬೆಟ್ಟದಲ್ಲಿ 'ಓಂ' ಕಾರ ನಾದ ಕೇಳಲಾರಂಭಿಸಿತು. ಆ ನಾದ ತನಗರಿವಿಲ್ಲದೆ ವೇಮನರನ್ನು ಕರೆದುಕೊಂಡು ಹೋಯಿತು. **ಧ್ಯಾನಸ್ತ ಸ್ಥಿತಿಯಲ್ಲಿದ್ದ "ಲಂಬಿಕಾ ಯೋಗಿಗಳು" ನಿಧಾನವಾಗಿ ಕಣ್ಣು ತೆರೆದು "ವೇಮನಾ ಮೋಹದ ಪಾಶವನ್ನು ನೋಡಿದೆಯಲ್ಲವೇ?" ಎಂದರು. ವೇಮನ ಗಾಬರಿಯಾದ....! "ತಾವ್ಯಾರು? ನನ್ನದೆಲ್ಲ ನಿಮಗೆ ಹೇಗೆ ಗೊತ್ತು?" ಎಂದ. "ನನಗೆಲ್ಲ ಗೊತ್ತು ಬಾ ಮಗು ಕುಳಿತುಕೋ" ಎಂದರು ಗುರುಗಳು. "ನೀನು ಇಲ್ಲಿಯವರೆಗೆ ಅನುಭವಿಸಿದ್ದು ಪ್ರಾರಬ್ಧ ಕರ್ಮದ ಭೋಗ. ಇದರಿಂದ ಯಾರೂ ತಪ್ಪಿಸಿಕೊಳ್ಳಲಾಗದು. ನಿನ್ನನ್ನು ನಾನು ಇದರಿಂದ ತಪ್ಪಿಸಬಹುದಾಗಿತ್ತು, ಆದರೆ ಮುಂದೆ ನೀನು ಕೋಟಿ ಕೋಟಿ ಜನರಿಗೆ ನಿಜವಾದ ಆನಂದದ ದರ್ಶನ ಮಾಡಿಸಬೇಕಾಗಿದೆ. ಆದ್ದರಿಂದ ನಿನಗೆ ನೋವು, ದುಃಖ, ಹತಾಶೆ, ಅವಮಾನಗಳ ಅನುಭವವಿರಬೇಕು, ಆಗ ಮಾತ್ರ ನೀನು ಬೇರೆಯವರಿಗೆ ಸೂಕ್ತವಾದ ರೀತಿಯಲ್ಲಿ ಪರಿಪೂರ್ಣವಾದ ಆನಂದದ ಮಾರ್ಗವನ್ನು ತಿಳಿಸಬಲ್ಲೆ", ಎಂದು ಹೇಳಿದ ಗುರುಗಳು ಆತನ ತಲೆಯ ಮೇಲೆ ಹಸ್ತವನ್ನಿಟ್ಟರು.**

ಪ್ರಖಾಂಡ ಯೋಗಸಾಧಕರೂ, ಸಿದ್ಧಿ ಪುರುಷರೂ ಆಗಿದ್ದ ಲಂಬಿಕಾ ಯೋಗಿಗಳು ಎಷ್ಟೋ ದಿನಗಳಿಂದ ವೇಮನನ ಬರುವಿಕೆಗಾಗಿ ಕಾಯುತ್ತಿದ್ದರು. ತಮ್ಮ ಆಧ್ಯಾತ್ಮಿಕ ಶಕ್ತಿಯನ್ನೆಲ್ಲ ವೇಮನರಿಗೆ ಹಸ್ತ–ಮಸ್ತಕ ಸಂಯೋಗದಿಂದ ವರ್ಗಾಯಿಸಿದರು. ಕ್ಷಣ ಮಾತ್ರದಲ್ಲಿ ವೇಮನರಿಗೆ ಪರಮಶಾಂತಿಯ ದರ್ಶನವಾಯಿತು. ವೇಮನರಿಗೆ ಜ್ಞಾನೋದಯವಾಯಿತು. "ವೇಮನಾ ಈ ಪರಮಾನಂದದ ಸುಖ ನಿನ್ನಲ್ಲಿ ಸ್ಥಿರವಾಗುವುದು, ಇದನ್ನು ನಿತ್ಯ ಸತ್ಯದಲ್ಲಿ ಆನಂದಿಸು. ಲೋಕದ ಜನರಿಗೂ ಇದನ್ನು ತಿಳಿಸಿ ಅವರಿಗೂ ಪರಮಶಾಂತಿಯ ಅನುಭವವನ್ನು ಪಡೆಯಲು ಮಾರ್ಗ ತೋರಿಸು" ಎಂದು ಹೇಳುತ್ತ ಗುರುಗಳು ಮಾಯವಾದರು.

ಹಲವಾರು ದಿನಗಳವರೆಗೆ ವೇಮನ ಅದೇ ಗುಹೆಯಲ್ಲಿ ಧ್ಯಾನಸ್ತನಾದ. ಕಣ್ಣು ತೆರೆದಾಗ ಇಡೀ ವಿಶ್ವವೇ ಪರಮ ಶಾಂತಿಯ ತಾಣವಾಗಿ ತೋರುತ್ತಿತ್ತು. ಪರಮಾನಂದದ ಪ್ರವಾಹದಲ್ಲಿ ಮಿಂದು ತೇಲಾಡುತ್ತಿದ್ದರು ವೇಮನರು. ವಿಶ್ವ ಶಕ್ತಿಯೇ ವೇಮನರ ದೇಹವನ್ನು ಕೇಂದ್ರವಾಗಿರಿಸಿಕೊಂಡು ಲೋಕ ಕಲ್ಯಾಣದ ಕೆಲಸವನ್ನಾರಂಭಿಸಿತು. ದೇಹವೇ ಇಲ್ಲದ ಭಾವದಲ್ಲಿ ಸ್ಥಾಪಿತರಾದ ವೇಮನರು ಬಟ್ಟೆ ಧರಿಸುವುದನ್ನೇ ಮರೆತಿದ್ದರು. **ಸಾಮಾನ್ಯರಿಗೆ ದಿಗಂಬರರಾಗಿ ಕಂಡರೆ, ಸತ್ಯವನ್ನರಿತವರಿಗೆ ಸಾಕ್ಷಾತ್ ದೇವರಾಗಿ ಕಾಣಲಾರಂಭಿಸಿದರು.**



ಮನೆಯನ್ನು ತೊರೆದು ಹನ್ನೆರಡು ವರ್ಷಗಳಾಗಿದ್ದವು. ಹೆಚ್ಚಿನ ಸಮಯವನ್ನು ದಂಡಕಾರಣ್ಯದ ಏಕಾಂತದಲ್ಲಿಯೇ ಕಳೆದಿದ್ದರು. ಪ್ರಪಂಚದ ದುಃಖಕ್ಕೆ ಕಾರಣವಾದ ದೇಹವೇ ಇಲ್ಲವೆನ್ನುವ ಸ್ಥಿತಿ ಪ್ರಾಪ್ತವಾಗಿತ್ತು. ಸಕಲ ಇಷ್ಟಾರ್ಥಗಳನ್ನು ಪೂರೈಸುವ ದೈವಶಕ್ತಿ ವೇಮನರಲ್ಲಿ ಆಶ್ರಯ ಪಡೆದಿತ್ತು. ಅವರ ದರ್ಶನದಿಂದ ಕಷ್ಟ–ನಷ್ಟಗಳು ದೂರಾಗುತ್ತವೆ ಎಂದು ತಂಡೋಪ ತಂಡವಾಗಿ ಜನ ಅವರ ದರ್ಶನಕ್ಕೆ ಬರುತಿದ್ದರು.

ಇತ್ತ ಅತ್ತಿಗೆ ವೇಮನರನ್ನು ಪತ್ತೆ ಹಚ್ಚಲು ನಿರಂತರವಾಗಿ ಪ್ರಯತ್ನಿಸುತ್ತಿದ್ದಳು. ವೇಮನರ ಆತ್ಮೀಯ ಸ್ನೇಹಿತ, ವೃತ್ತಿಯಲ್ಲಿ ರಾಜ ಮನೆತನದ ಅಕ್ಕಸಾಲಿಗನಾದ ಅಭಿರಾಮನಂತೂ ತನ್ನ ವೃತ್ತಿಯನ್ನೇ ತೊರೆದು ವೇಮನರನ್ನು ಹುಡುಕುವ ಕಾಯಕದಲ್ಲಿ ತೊಡಗಿದ್ದ. ತಂಜಾವೂರಿನ ಸಮೀಪದಲ್ಲಿ ಯಾರೋ ಒಬ್ಬರು ದಿಗಂಬರ ಯೋಗಿಗಳಿದ್ದಾರೆ. ಅವರ ಪ್ರತಿಯೊಂದು ಮಾತು ದೇವ ವಾಣಿಯಂತೆ, ಅವರ ಹತ್ತಿರ ಹೋದರೆ ವೇಮನ ಎಲ್ಲಿರುವನೆಂದು ಹೇಳುತ್ತಾರೆ. ಅಲ್ಲಿಗೆ ಹೋಗೆಂದರು ಜನ.

ವೇಮನರು ತನ್ನಲ್ಲಿಗೆ ಬರುವ ಜನರ ಕಷ್ಟಗಳಿಗೆ, ಹಾನಿಗಳಿಗೆ, ಅನಾರೋಗ್ಯಕ್ಕೆ ಪರಿಹಾರ ಹೇಳುವುದಲ್ಲದೆ, ಪರಮಶಾಂತಿಯನ್ನು ದರ್ಶಿಸಬೇಕೆಂದು ಬಯಸಿ ಬರುವವರಿಗೆಲ್ಲ **ಧ್ಯಾನದ ಮೂಲಕ ಜ್ಞಾನವನ್ನು ಸಾಧಿಸಲು ಮಾರ್ಗಗಳನ್ನು ಹೇಳುತ್ತಿದ್ದರು.** ತಾವು ಕಂಡುಂಡ ನೋವು, ಶಾಂತಿ, ನೆಮ್ಮದಿ, ಪರಮಾನಂದಗಳ ಅಭಿವ್ಯಕ್ತತೆಗಳನ್ನು ಸಣ್ಣ ಸಣ್ಣ ಪದ್ಯಗಳಲ್ಲಿ ಹೇಳುತ್ತಿದ್ದರು. ಜನರು ಅವುಗಳನ್ನೆಲ್ಲ ನಿತ್ಯ ಪಠಿಸುತ್ತಿದ್ದರು.

ಅಭಿರಾಮ ದಿಗಂಬರ ಯೋಗಿಯ ದರ್ಶನ ಮಾಡಿಕೊಂಡು ವೇಮನರನ್ನು ಹುಡುಕಲು ಸಹಾಯ ಪಡೆಯಲು ಅವರಲ್ಲಿಗೆ ಬಂದ. ಅಭಿರಾಮನನ್ನು ನೋಡಿದ ತಕ್ಷಣ ಬಾ ಅಭಿರಾಮಾ ಎಂದರು ಯೋಗಿಗಳು. ದಿಗಂಬರರಾಗಿರುವ ವೇಮರನ್ನು ನೋಡಿದ ಅಭಿರಾಮ ಗಾಬರಿಯಾಗಿ ನಿಂತು ಬಿಟ್ಟ. "ಗಾಬರಿಯಾಕೋ ಅಭಿರಾಮ, **ಇದು ನಾನು ನೀನು ಬಂದ ಸ್ಥಿತಿಯಲ್ಲವೇ? ಹೋಗುವುದು ಹೀಗೆ ಅಲ್ಲವೇ? ಹೀಗೆ ಬಂದದ್ದು ಹೀಗೆ ಹೋಗಬೇಕಾದರೆ ನಡುವೆ ಇನ್ನೊಂದರ ಆಸರೆ ಏಕೆ?" ಎಂದು ತನ್ನ ಬತ್ತಲೆ ದೇಹದ ಕಡೆಗೆ ಕೈ ಮಾಡಿ ತೋರಿಸಿದರು ವೇಮನರು.**

ನಂತರ ಅಭಿರಾಮ ಅತ್ತಿಗೆ ಮತ್ತು ಸಂಬಂಧಿಗಳ ಸಮಾಚಾರವನ್ನೆಲ್ಲ ವೇಮನರಿಗೆ ಹೇಳಿದ. ಯಾವುದಕ್ಕೂ ಪ್ರತಿಕ್ರಿಯೆ ನೀಡದ ವೇಮನ; ಸತ್ಸಂಗದಲ್ಲಿ ಉಪದೇಶ ಮಾಡಲು ಹಾಡಿದ ಪದ್ಯಗಳನ್ನು ಶಿಷ್ಯರು ತಾಳೆಗರೆಯಲ್ಲಿ ಬರೆದಿದ್ದರು; ಅವುಗಳನ್ನೆಲ್ಲ ಅಭಿರಾಮನ ಕೈಯಲ್ಲಿಟ್ಟು ಬೀಳ್ಕೊಟ್ಟರು. ಅರಮನೆಗೆ ಬಂದ ಅಭಿರಾಮ ವೇಮನರ ವಿಷಯವನ್ನು ಸವಿಸ್ತಾರವಾಗಿ ಅತ್ತಿಗೆಗೆ ವಿವರಿಸಿದ. **ಅತ್ತಿಗೆ**

**ಅತೀ ದುಃಖಿತಳಾಗಿ "ಹಾಳಾದ ಸಾಮ್ರಾಜ್ಯವನ್ನು ಮರುಳಿ ಕಟ್ಟುವನೆಂದು ಕನಸು ಕಂಡಿದ್ದೆ, ಈತ ಬೇರೆ ಸಾಮ್ರಾಜ್ಯವನ್ನೇ ಕಟ್ಟಿದ" ಎಂದಳು. "ಅತ್ತಿಗೆ, ವೇಮನರು ಕಟ್ಟಿರುವುದೇ ನಿಜವಾದ ಸಾಮ್ರಾಜ್ಯ, ಉಳಿದದ್ದೆಲ್ಲವೂ ಹಿಂಸೆ ಮತ್ತು ದುಃಖವೆಂದ" ಅಭಿರಾಮ.**

## ಪವಾಡ ಪುರುಷನಾಗಿ ವೇಮನ

ಮಗನಿಗಿಂತಲೂ ಹೆಚ್ಚಾಗಿ ಸಾಕಿ ಸಲುಹಿದ ವೇಮನ ದಿಗಂಬರನಾಗಿ ಹುಚ್ಚನಂತೆ ತಿರುಗಾಡುವುದನ್ನು ಕೇಳಿದ ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮ ಅತೀ ದುಃಖಿತಳಾದಳು. ಕಾಶಿ ಯಾತ್ರೆ ಮಾಡಿ ವಿಶ್ವನಾಥನ ದರ್ಶನ ಮಾಡಿಸಿದರೆ ಮಗ ಮೊದಲಿನಂತಾಗುವನೆಂದು ಕೆಲವರು ಹೇಳಿದರು. ಮಲ್ಲಮ್ಮ ಅನಿವಾರ್ಯವಾಗಿ ಕುಟುಂಬ ಸಮೇತ ವೇಮನನಿರುವ ಗುಹೆಗೆ ಬಂದಳು. ಅತ್ತಿಗೆಯನ್ನು ನೋಡಿದ ತಕ್ಷಣ ಎಂದಿನಂತೆ ಮುಗುಳು ನಕ್ಕು ಅತ್ತಿಗೆಯ ಕಾಲಿಗೆ ಬಾಗಿ ನಮಸ್ಕರಿಸಲು ಹೋದ, ಅತ್ತಿಗೆ ಹೌಹಾರಿ ದೂರ ಸರಿದು ನಿಂತಳು.

"ಕ್ಷಮಿಸಮ್ಮಾ ನಿನಗೆ ಹೇಳದೆ ಬಂದೆ", ಎಂದರು ವೇಮನರು.

"ಇರಲಪ್ಪ! ಈಗೇನಂತೆ! ನಾವೆಲ್ಲರೂ ಮುಂದಿನ ವಾರ ಕಾಶಿ ಯಾತ್ರೆಗೆ ಹೊರಟಿದ್ದೇವೆ, ನೀನೂ ನಮ್ಮ ಜೊತೆ ಬಂದು ವಿಶ್ವನಾಥನ ದರ್ಶನ ಪಡೆಯಬೇಕೆಂದು ನಮ್ಮೆಲ್ಲರ ಬಲವಾದ ಆಸೆ" ಎಂದಳು ಮಲ್ಲಮ್ಮ. ಹೇಗಾದರೂ ಮಾಡಿ ವೇಮನರನ್ನು ಮರಳಿ ಮನೆಗೆ ಕರೆದುಕೊಂಡು ಹೋಗಬೇಕೆನ್ನುವುದು ಅತ್ತಿಗೆಯ ಉದ್ದೇಶವಾಗಿತ್ತು.

**"ಅಲ್ಲೇನಿರುವುದಮ್ಮ ಇರುವುದೆಲ್ಲ ಇಲ್ಲಿಯೇ"** ಎಂದರು ವೇಮನರು.

"ಇಲ್ಲ ಮಗು; ಅದು ಪುಣ್ಯ ಕ್ಷೇತ್ರ, ಮಾನವರನ್ನು ಮುಕ್ತಿ ಮಾರ್ಗಕ್ಕೆ ಕೊಂಡೊಯ್ಯುವ ಪವಿತ್ರ ಸ್ಥಳವದು" ಎಂದಳು.

"ಇರಲಿ; ಈ ಬಾರಿ ನೀನು ಹೋಗಿ ಬಾರಮ್ಮ. ಈ ತಾಮ್ರದ ದುಡ್ಡನ್ನು ನಿನ್ನ ಕೊರಳ ಸರದಲ್ಲಿ ಕಟ್ಟಿಕೋ. ಇದು ಎಲ್ಲಿ ಬಂಗಾರದ್ದಾಗುವುದೋ ಅದೇ ಪುಣ್ಯಕ್ಷೇತ್ರ" ಎಂದರು ವೇಮನರು. ತಾಮ್ರದ ದುಡ್ಡನ್ನು ಕೊರಳಲ್ಲಿ ಕಟ್ಟಿಕೊಂಡು ಮಲ್ಲಮ್ಮ ಯಾತ್ರೆಗೆ ಹೋದಳು

ಕಾಶಿ ಯಾತ್ರೆ ಮುಗಿಸಿದ ರಾಜ ಪರಿವಾರ ಮೂರು ತಿಂಗಳ ನಂತರ ಕೊಂಡವೀಡುವಿಗೆ ಮರುಳಿತು. ಅಷ್ಟರಲ್ಲಿ ಹಲವಾರು ಗ್ರಾಮಗಳಿಗೆ ಅಲೆದಾಡಿ ವೇಮನರು ಕೊಂಡವೀಡುವಿನ ಹತ್ತಿರವಿರುವ ಗುಹೆಗೆ ಬಂದರು. ಮರುದಿನ ಬೆಳಿಗ್ಗೆ ಅರಮನೆಗೆ ಬಂದು ಅತ್ತಿಗೆಯ ದರ್ಶನ ಪಡೆಯುವುದಾಗಿ ಹೇಳಿ ಕಳುಹಿಸಿದರು. ಅತ್ತಿಗೆಗೆ ಸ್ವರ್ಗವೇ ತನ್ನ ಮನೆಗೆ ಬರುವಂತೆ ಭಾಸವಾಯಿತು. ರಾಜ ಪರಿವಾರದವರು,



ಅರಮನೆಯನ್ನು ಶೃಂಗಾರಗೊಳಿಸಿದರೆ, ಸಾರ್ವಜನಿಕರು ಸಂಪೂರ್ಣ ಗ್ರಾಮವನ್ನೇ ತಳಿರು ತೋರಣಗಳಿಂದ ಶೃಂಗರಿಸಿದರು.

ಸೂರ್ಯೋದಯಕ್ಕೆ ಸರಿಯಾಗಿ ವೇಮನರು ಕೊಂಡವೀಡನ್ನು ಪ್ರವೇಶಿಸಿದರು. ವೇಮನರು ಬರುವ ದಾರಿಯಲ್ಲೆಲ್ಲ ಗ್ರಾಮಸ್ಥರು ಹೂವಿನ ಹಾಸಿಗೆಯನ್ನು ಹಾಸಿ ಸ್ವಾಗತಿಸಿದರು. ಅರಮನೆಗೆ ಬಂದಾಗ ಮಲ್ಲಮ್ಮ ವೇಮನರನ್ನು ಆರತಿ ಬೆಳಗುವುದರ ಮೂಲಕ ಬರಮಾಡಿಕೊಂಡಳು. "ಪ್ರಯಾಗದಲ್ಲಿ ನಿನಗೆ ತುಂಬಾ ಅನಾನುಕೂಲವಾಯಿತಲ್ಲಮ್ಮ" ಎಂದರು? ಆಶ್ಚರ್ಯಚಕಿತಳಾದ ಅತ್ತಿಗೆ "ಅದು ನಿನಗೆ ಹೇಗೆ ಗೊತ್ತಪ್ಪ" ಎಂದಳು.

"......" ಮುಗುಳು ನಕ್ಕರು ವೇಮನರು "ಅಮ್ಮಾ ನಾನೊಂದು ತೂತಿನ ದುಡ್ಡು ಕೊಟ್ಟಿದ್ದೆ. ಅದು ಬಂಗಾರವಾಗಿದೆಯೇ?" ಎಂದರು.

"ಅದು ಹೇಗೆ ಸಾಧ್ಯವೋ ವೇಮನ?" ಎಂದಳು ಅತ್ತಿಗೆ. "ಎಲ್ಲಿದೆ ಆ ತೂತಿನ ತಾಮ್ರದ ದುಡ್ಡು" ಎಂದು ಕೇಳಿ ಪಡೆದರು ವೇಮನರು. ತಮ್ಮ ಕೈಯಲ್ಲಿ ಹಿಡಿದುಕೊಂಡು ಒಂದೆರಡು ನಿಮಿಷ ದಿಟ್ಟಿಸಿ ನೋಡಿದರು ವೇಮನರು. ಕೆಲವೇ ಕ್ಷಣಗಳಲ್ಲಿ ತಾಮ್ರದ ದುಡ್ಡು ಬಂಗಾರವಾಗಿ ಹೊಳೆಯಲಾರಂಭಿಸಿತು. ಮರಳಿ ಅತ್ತಿಗೆಯ ಕೈಗೆ ಕೊಟ್ಟರು. "ಇದೇನಪ್ಪ ಪವಾಡ" ಎಂದು ಅಚ್ಚರಿ ಕಣ್ಣಿನಿಂದ ನೋಡಿದಳು ಅತ್ತಿಗೆ. ಸುತ್ತ ಮುತ್ತ ನೆರೆದಿದ್ದ ಜನರೆಲ್ಲ ಕರತಾಡನ ಮಾಡುತ್ತ ವೇಮನರ ಕಾಲಿಗೆರಗಿದರು.

ಆಗ ವೇಮನರು ಹೇಳಿದರು, "ಅಮ್ಮಾ ನಾನು ನಿನಗೆ ಹೇಳಿರಲಿಲ್ಲವೇ? **ಮನಸ್ಸಿನ ಪರಿವರ್ತನೆ ಎಲ್ಲಿ ಆಗುವುದೋ ಅದೇ ಕಾಶಿ** ಎಂದು ಎಲ್ಲದಕ್ಕೂ ಮನಸ್ಸೇ ಕಾರಣ" ಎಂದರು ವೇಮನರು.

## ಯೋಗಿಯಾದ ನಂತರ ವೇಮನರ ಜೀವನ

ಜ್ಞಾನೋದಯದ ನಂತರ ಹೆಚ್ಚಿನ ಸಮಯ ಏಕಾಂತದಲ್ಲಿಯೇ ಇರುತ್ತಿದ್ದರು. ನೀಲಕಂಠ ಮತ್ತು ರಾಮರೆಡ್ಡಿ ಎಂಬ ಇಬ್ಬರು ಶಿಷ್ಯರು ತಮ್ಮ ಸಂಸಾರವನ್ನು ತೊರೆದು ಸದಾ ವೇಮನರ ಸೇವೆಗಾಗಿಯೇ ತಮ್ಮ ಜೀವನವನ್ನು ಸಮರ್ಪಿಸಿ ಅವರ ಜೊತೆಯಲ್ಲಿಯೇ ಉಳಿದು ಬಿಟ್ಟರು.

ದೇಹದ ಸಂರಕ್ಷಣೆಗಾಗಿ ಅರಣ್ಯದಲ್ಲಿ ದೊರೆಯುವ ಹಣ್ಣು ಹಂಪಲಗಳನ್ನೇ ಹೆಚ್ಚಾಗಿ ಅವಲಂಬಿಸುತ್ತಿದ್ದರು. ತೀರಾ ಅವಶ್ಯವಿರುವಾಗ ನೀಲಕಂಠ ಮತ್ತು ರಾಮರೆಡ್ಡಿ ಊರುಗಳಲ್ಲಿ ಹೋಗಿ ಭಿಕ್ಷೆ ಬೇಡಿ ತರುತ್ತಿದ್ದರು. **"ಮತ್ತೊಬ್ಬರ ಮನೆಮುಂದೆ**

**ಹೋಗಿ ನಿಂತು ಭಿಕ್ಷೆ ಬೇಡಿದಾಗ ಮಾತ್ರ ನಿಮ್ಮಲ್ಲಿಯ ಅಹಂ ಸಂಪೂರ್ಣ ನಾಶವಾಗಿ ವೈರಾಗ್ಯ ಉದಯವಾಗಲು ಸಹಾಯಕವಾಗುತ್ತದೆ" ಎನ್ನುತ್ತಿದ್ದರು ವೇಮನರು.**

ವೇಮನ ಯೋಗಿಗಳ ದಿನನಿತ್ಯದ ಜೀವನ ಕೆಲವೊಂದು ಸಾಮಾನ್ಯ ನಿಯಮಗಳಿಗೆ ಒಳಪಟ್ಟಿತ್ತಾದರೂ, ಸೈನಿಕ ಶಿಸ್ತಿನಂತಿರಲಿಲ್ಲ. ಕೆಲವು ದಿನಗಳವರೆಗೆ ಜಿಜ್ಞಾಸುಗಳ ಜೊತೆಗೆ ಸತ್ಸಂಗಗಳಲ್ಲಿ ಭಾಗವಹಿಸಿದರೆ, ಹಲವು ದಿನಗಳವರೆಗೆ ಯಾರ ಜೊತೆಯೂ ಮಾತನಾಡದೇ ಗುಹೆಗಳಲ್ಲಿ ಧ್ಯಾನಸ್ತರಾಗಿ ಕುಳಿತುಕೊಳ್ಳುತ್ತಿದ್ದರು. ಧ್ಯಾನದ ಸ್ಥಿತಿಯಿಂದ ಹೊರ ಬಂದು ತಾವು ಅನುಭವಿಸಿದ ಪರಮ ಶಾಂತಿಯ ಅನುಭವವನ್ನು ಪದ್ಯಗಳ ಮೂಲಕ ಹೇಳುತ್ತಿದ್ದರು. ನೀಲಕಂಠ ಮತ್ತು ರಾಮರಡ್ಡಿ ಅವುಗಳನ್ನು ದಾಖಲಿಸುತ್ತಿದ್ದರು. ಭಕ್ತರು ಬಂದು ತಮ್ಮ ಸಮಸ್ಯೆಗಳಿಗೆ ಪರಿಹಾರ ಕೇಳಿದರೆ ಅದಕ್ಕೊಂದು ಸೂಕ್ತ ಪರಿಹಾರ ಹೇಳುವುದರೊಂದಿಗೆ, ಕಾಲಾಂತರದಲ್ಲಿ ಈ ಸಮಸ್ಯೆ ಇತರರಿಗೂ ಬಂದರೆ ಏನು ಮಾಡಬೇಕು ಎನ್ನುವುದಕ್ಕೆ ಒಂದು ಪದ್ಯದ ಅಂತಃಸ್ಪುರಣೆಯಾಗುತ್ತಿತ್ತು; ಅದನ್ನು ಆ ಕ್ಷಣದಲ್ಲಿಯೇ ಹೇಳುತ್ತಿದ್ದರು. ಅಲ್ಲಿದ್ದವರೆಲ್ಲ ಅದನ್ನು ಪಠಿಸಲಾರಂಭಿಸುತ್ತಿದ್ದರು. "ಪ್ರತಿ ದಿನ ಇದನ್ನು ಜಪಮಾಡುತ್ತ ನಿಮ್ಮ ಕಾಯಕದಲ್ಲಿ ನಿರತರಾಗಿ" ಎಂದು ಹೇಳುತ್ತಿದ್ದರು ವೇಮನರು.

**ವೇಮನರ ಪದ್ಯಗಳು ಬುದ್ಧಿ ಮತ್ತು ಮನಸ್ಸನ್ನು ಆಧರಿಸಿ ಬಂದವುಗಳಲ್ಲ. ಇವುಗಳನ್ನು ದಾಟಿ ಇರುವ ಪರಮಸತ್ಯದಿಂದ ಸ್ಪುರಣೆಯಾದವುಗಳು.** ಗಂಭೀರವಾದ ವಿಷಯಗಳನ್ನು ಸಹ ತಿಳಿ ಹಾಸ್ಯದ ಮೂಲಕ ಹೇಳುತ್ತಿದ್ದರು. ಆಯಾ ಸಂದರ್ಭಕ್ಕನುಸರಿಸಿ ತೀರಾ ಸೂಕ್ತವೆನಿಸುವ ಪದ್ಯಗಳನ್ನೇ ಸೃಷ್ಟಿಸಿ ಹೇಳುತ್ತಿದ್ದರು.

"ನಿಮ್ಮ ಸಾಧನ ಮಾರ್ಗ ಯಾವುದು?" ಎಂದು ಯಾರಾದರೂ ಜಿಜ್ಞಾಸುಗಳು ಕೇಳಿದರೆ – "ರಾಜಯೋಗ" ಎಂದು ಹೇಳುತ್ತಿದ್ದರು ವೇಮನರು.

**"ನಿಮ್ಮ ಅನುಭವದಲ್ಲಿ "ಯೋಗಿ" ಯಾರು?" ಎಂದರೆ**
**"ಆಸೆಗಳ ಕಡಿದು, ಕಲ್ಪನೆಗಳನು ದಾಟಿ,**
**ದ್ವೇಷವನು ತೊರೆದು, ಕಟ್ಟಿ ಬಿಗಿದ ಚಡ್ಡಿ,**
**ಕೋಪ ತಗ್ಗಿ, ಮೋಹ ತೊರೆದು ಇರುವ**
**ಅವನೇ ಯೋಗಿ ಎನಿಪ, ವಿಶ್ವದಾಭಿರಾಮ**
**ಕೇಳು ವೇಮ"** ಎಂದು ಹಾಡಿದರು ವೇಮನರು.

"ಅಪ್ಪಾ ತಾವು ದೇವರನ್ನು ಕಂಡಿರುವಿರಾ?" ಎಂದು ಒಮ್ಮೆ ಜಿಜ್ಞಾಸು ಕೇಳಿದ.

**"ಕಾಣುವುದು ದೇವರಲ್ಲಪ್ಪ, ಮನಸ್ಸಿನಾಚೆಗೆ ಇರುವ ಸ್ಥಳದಲ್ಲಿ ದೇವರನ್ನು ಅನುಭವಿಸುವುದು"** ಎಂದರು ವೇಮನರು.



ಹೀಗೆ ಜೀವನದ ವಿವಿಧ ಆಯಾಮಗಳಿಗೆ ಸಂಬಂಧಿಸಿದಂತೆ ಸುಮಾರು ಮೂವತ್ತೈದು ವರ್ಷಗಳ ಕಾಲ ನಿರಂತರ ಉಪದೇಶ ಮಾಡಿದರು. ಈ ಸಮಯದಲ್ಲಿ ಸಾವಿರಾರು ಪದ್ಯಗಳನ್ನು ರಚಿಸಿದರೆಂದು ಹೇಳಲಾಗುತ್ತಿದೆ.

## ಮಹಾಯೋಗಿ ವೇಮನರ ದೇಹ ತ್ಯಾಗ

ಮಹಾಯೋಗಿಯೊಬ್ಬ ಈ ಜಗತ್ತಿನಲ್ಲಿ ಅವತರಿಸಿ, ವಿಂಧ್ಯ ಪರ್ವತದಿಂದ ದಕ್ಷಿಣಕ್ಕಿರುವ ಪ್ರದೇಶದಲ್ಲಿಯ ಜನ ಜೀವನವನ್ನು ಆಧ್ಯಾತ್ಮದತ್ತ ತಿರುಗಿಸುವ ಮಹಾ ಕಾರ್ಯವನ್ನು ಆರಂಭಿಸಿದನು. ಶರಣರನ್ನು ಮರಣದಲ್ಲಿ ನೋಡು; ಎಂಬಂತೆ, ಈ ಮಹಾಯೋಗಿಯ ಜೀವನದ ಮಹಿಮೆಯನ್ನು ಅವರ ದೇಹಾವಸಾನದ ನಂತರ ಬಹು ಜನರು ಮನಗಂಡರು.

ಮಹಾಯೋಗಿ ವೇಮನರ ಸ್ಪಷ್ಟ ನುಡಿ ಮೊನಚಾದ ಭಾಷೆ, ಕ್ರಾಂತಿಕಾರಕ ವಿಚಾರಗಳು ಜನಮನದ ಮೇಲೆ ಎಷ್ಟೊಂದು ಪ್ರಭಾವ ಬೀರಿದ್ದವೆಂದರೆ, ಅವರ ನುಡಿಮುತ್ತುಗಳು ಜನಸಾಮಾನ್ಯರ ನಾಲಿಗೆಯ ಮೇಲೆ ನರ್ತಿಸುತ್ತಿದ್ದವು. ಅವರ ವಿಚಾರಗಳು ಎಷ್ಟೊಂದು ಉದ್ಬೋಧಕ ವಾಗಿದ್ದವೆಂದರೆ, ಸಾಧಕರಾಗಿರಲಿ ಸಾಮಾನ್ಯ ಗೃಹಸ್ಥರಾಗಿರಲಿ, ಅವುಗಳನ್ನು ನಾಣ್ಣುಡಿಯಂತೆ ತಮ್ಮ ನಿತ್ಯದ ಆಡುಭಾಷೆಯಲ್ಲಿ ಬಳಸುತ್ತಿದ್ದರು. ಅವರ ತತ್ತ್ವ ಚಿಂತನೆಯು ಎಷ್ಟೊಂದು ಕ್ರಾಂತಿಕಾರಿಯಾಗಿತ್ತೆಂದರೆ, ಅದುವರೆಗೆ ಸತ್ಯಾಂಶಗಳನ್ನು ತಿರುಚಿ, ಜನವರ್ಗವನ್ನು, ತಾತ್ವಿಕ ಚಿಂತನೆಗೆ ಎರವು ಮಾಡಿದ, ಪುರೋಹಿತ ವರ್ಗವು ತಳಮಳಗೊಂಡು ಅವರ ಪದ್ಯದ ಪೋಥಿಗಳನ್ನು, ಜನರಿಗೆ ಸಿಗದಂತೆ, ತಮ್ಮ ತಮ್ಮ ಮನೆಗಳಲ್ಲಿಯೇ ಮರೆಯಾಗಿರಿಸಿದರು. ಆದರೂ ಸಹಿತ ಸಾವಿರಾರು ಪದ್ಯಗಳು ಜೀವಂತವಾಗಿ ಉಳಿದು ಇಂದು ನಮಗೆಲ್ಲರಿಗೂ ಪರಮಶಾಂತಿಯ ಮಾರ್ಗವನ್ನು ತೋರಿಸುತ್ತಿವೆ.

ಅಂದು ಶಾರ್ವರಿ ನಾಮ ಸಂವತ್ಸರ, ಚೈತ್ರ ಮಾಸ, ಶುಕ್ಲ ಪಕ್ಷದ ನವಮಿ ತಿಥಿಯಿತ್ತು, ವೇಮನಯೋಗಿ ಪೂರ್ವ ಸೂಚನೆ ನೀಡಿದಂತೆ, ಆ ದಿನ ಅವರು ದೇಹ ತೊರೆಯುವ ದಿನ. ಅಣು ಮನಸ್ಸಿನ ಪ್ರಕ್ರಿಯೆಯು ಮರಣವನ್ನು ತಿಳಿಯಲಾರದು. ಅವರೇ, ಆ ಮುನ್ನ, ಒಂದು ಬಾರಿ ತಿಳಿಸಿದಂತೆ,

ಹನಿಯು ಬೀಳುವಂದ, ಹರಣ ತೊಲಗುವಂದ,
ತಿಳಿಯಲಾರ ಘನನೆ ಆದೊಡೇನು?
ತಿಳಿದೊಡಾಗ ಕಲಿಯುಗ ಉಳಿಯುವುದು ಎಂತು?
ವಿಶ್ವದಾಭಿರಾಮ ಕೇಳು ವೇಮ– ಎಂದು ಹಾಡಿದರು.

ಯೋಗಿವರ್ಯರು ತಮ್ಮ ದೇಹತ್ಯಾಗದ ವಿಷಯವನ್ನು ಶಿಷ್ಯ ರಾಮರೆಡ್ಡಿಗೆ ತಿಳಿಸಿದ್ದರು. ಅವನ ಮುಖಾಂತರ ಇತರರಿಗೂ ತಿಳಿದಿತ್ತು. ಹೀಗಾಗಿ, ಸಮಾಧಿ ರಚನೆಯು ಆ ಮುನ್ನವೇ ಆಗಿತ್ತು. ಅಂದು ಕಟಾರ್ಲುಪಲ್ಲೆಯ ಹೊರವಲಯದ ದಿನ್ನೆಯ ಮೇಲೆ ಸಾಕಷ್ಟು ಜನ ಸೇರಿದ್ದರು. ಯೋಗಿಯೋರ್ವರ ಜೀವಂತ ಸಮಾಧಿಯ ವಿಚಾರವನ್ನು ಆ ಭಾಗದ ಹಲವು ಜನರು ಗ್ರಂಥಗಳಲ್ಲಿ, ಓದಿದ್ದರೇ ಹೊರತು, ಕಣ್ಣಾರೆ ಕಂಡಿರಲಿಲ್ಲ.

ವೇಮನಯೋಗಿ ತಮ್ಮ ಕುಟೀರದಲ್ಲಿ ಆ ದಿನ ವಿಶೇಷ ಸ್ನಾನ ಮಾಡಿ ನಿತ್ಯದಂತೆ ಧ್ಯಾನಾದಿ ಕ್ರಿಯೆಗಳನ್ನು ತೀರಿಸಿದರು. ರಾಮರೆಡ್ಡಿ ಕೊಟ್ಟ ಒಂದು ಬಟ್ಟಲು ಸಿಹಿ ಹಾಲು ಸೇವಿಸಿದರು. ಹಾಲು ನೀಡುವಾಗ, ಇದೇ ಕೊನೆಯ ಸೇವೆಯೆಂದು ನೆನಪಾಗಿ, ರಾಮರೆಡ್ಡಿಯ ಕಣ್ಣಂಚಿನಲ್ಲಿ ನೀರು ಕಾಣಿಸಿತು. ಹೊರಗೆ ಜನರ ಸದ್ದು ಗದ್ದಲವಿತ್ತು, ವೇಮನ ಯೋಗಿಗಳಿಗೆ ಜಯವಾಗಲಿ! ಪರಂಜ್ಯೋತಿ ವೇಮನ ಚಿರಾಯುವಾಗಲಿ! ಎಂಬ ಉದ್ಘೋಷಗಳು ಕೇಳಿ ಬರುತ್ತಿದ್ದವು, ವೇಮನರು ಹೊರಬಂದರು. ತಮಗಾಗಿ ಸಿದ್ಧಪಡಿಸಿದ ಸಮಾಧಿ ಕಟ್ಟಡದತ್ತ ಹೆಜ್ಜೆ ಹಾಕಹತ್ತಿದರು. ನೆರೆದ ಜನ ಭಾವಾವೇಶಕ್ಕೊಳಗಾದರು.

'ತೊರೆಯದಿರು ತಂದೆ, ನಮ್ಮನ್ನು ತೊರೆಯದಿರು, ನಮ್ಮನ್ನು ಅನಾಥರನ್ನಾಗಿ ಮಾಡದಿರು" ಎಂದು ಬೊಬ್ಬಿಟ್ಟರು. ಆಗ ವೇಮನರು,

"ಹುಟ್ಟುವವರು ಯಾರು? ಹುಟ್ಟದವರು ಯಾರು?
ಹುಟ್ಟಿ ಹುಟ್ಟದಂಥ ಪುರುಷರಾರು?
ಹುಟ್ಟಿ ಹುಟ್ಟದಿಹುದ ಬೋಧಿಸಲು, ಕಾಣಿಭೋ!
ವಿಶ್ವದಾಭಿರಾಮ ಕೇಳು ವೇಮ.

ಬದುಕುವವರು ಯಾರು? ಬದುಕದವರು ಯಾರು?
ಬದುಕಿ ಬದುಕದಂಥ ಪ್ರಾಣಿ ಯಾರು?
ಬದುಕು ಇರದ ಬದುಕು ಭ್ರಮೆಯಳಿದು ಕಾಣಿರೋ?
ವಿಶ್ವದಾಭಿರಾಮ ಕೇಳು ವೇಮ.

ಕಟ್ಟುವವರು ಯಾರು? ಕಟ್ಟದವರು ಯಾರು?
ಕಟ್ಟಿ ಕಟ್ಟದಂಥ ಕರ್ಮಿ ಯಾರು?
ಗಟ್ಟಿ ಹಿಡಿದು ಲೇಸ, ಕಣ್ಣು ಬಿಟ್ಟು ನೋಡಿಕೊ
ವಿಶ್ವದಾಭಿರಾಮ ಕೇಳು ವೇಮ.



ನೀಡುವವರು ಯಾರೊ? ನೀಡದವರು ಯಾರೊ?
ನೀಡಿ ನೀಡದಂಥ ನಿಷ್ಠರಾರೊ?
ಪಟ್ಟು ಹಿಡಿದು ಇದರ ಗುಟ್ಟ ಭಾವಿಸಿಕೊ!
ವಿಶ್ವದಾಭಿರಾಮ ಕೇಳು ವೇಮ"

ಎಂದು ಹಾಡಿದರು ಯೋಗಿಗಳು.

ಯೋಗಿವರ್ಯರು ನೆರೆದ ಜನಸ್ತೋಮದತ್ತ ಕೃಪಾ ದೃಷ್ಟಿ ಹರಿಸಿದರು. ವರದ ಹಸ್ತ ಎತ್ತಿ ಅಭಯ ಮುದ್ರೆ ದಯಪಾಲಿಸಿದರು. ಜನರ ಮಧ್ಯೆ ವಿದ್ಯುತ್ಸಂಚಾರವಾದಂತಾಯಿತು. ಗಂಭೀರತೆ ಪಸರಿಸಿತು. ಯೋಗಿಗಳು ಸಮಾಧಿ ಸ್ಥಳಕ್ಕೆ ಸಾಗಿ ಅಲ್ಲಿ ವೀರಾಸನದಲ್ಲಿ ಕುಳಿತು, ಇನ್ನೊಮ್ಮೆ ಜನತಾ ಜನಾರ್ಧನರಿಗೆ ನಮಿಸಿ ಕಣ್ಣು ಮುಚ್ಚಿಬಿಟ್ಟರು. ಮುಂದೆ ರಾಮರೆಡ್ಡಿ ವಿಧಿ ವಿಧಾನಗಳನ್ನು ಪೂರೈಸಿದನು. ಜನತೆಯೆಲ್ಲ ಏಕ ಕಂಠದಿಂದ,

"ವೇದಾತೀತನು ವೇಮನ ಕಾಣಾ,
ವೇಮನ ಮಾತೇ ವೇದವು ಕಾಣಾ,
ವೇದ ಶಾಸ್ತ್ರಗಳು ವಾದವು ಕಾಣಾ,
ವಾದಿಪ ಬಾಯಿಗ ಬೂದಿಯು ಕಾಣಾ,
ಬೇಸರಿಯದೋದೆ ಬಲು ರುಚಿ ಕಾಣಾ,
ಕೇಳಿದವರು ಮತ್ತೆ ಹೇಳರು ಕಾಣಾ,
ಹೇಳುವರಾರೂ ಮಾಡರು ಕಾಣಾ,
ಸಾಧಿಸಿದವರು ಸಿದ್ಧರು ಕಾಣಾ,
ಜಾತರ ಜಾತರ ಜಾತರ ಕಾಣಾ,
ಜಾತರತೀತನು ವೇಮನ ಕಾಣಾ" ಎಂದು ಪಠಿಸಿದರು.

ಕೊನೆಗೆ ರಾಮರೆಡ್ಡಿ, ಗದ್ಗದಿತನಾಗಿ

**ವೇಮನೆಂಬ ಯೋಗಿ ವಾಸಿಸಿದ ಲೋಕದಿ;**
**ಪೂಜೆ ಸಲಿಸಿರವಗೆ ಪುಣ್ಯ ಪುರುಷರಿರಾ!**
**ಸಲಿಸಿದಷ್ಟು ಪೂಜೆ ಸುಖ ಶ್ರೇಯ ಲಭ್ಯ.**
**ವಿಶ್ವದಾಭಿರಾಮ ಕೇಳು ವೇಮ**

**ಓಂ ಶಾಂತಿಃ ಓಂ ಶಾಂತಿಃ ಓಂ ಶಾಂತಿಃ**

ಎಂಬ ಘೋಷವು ಎಲ್ಲೆಡೆ ಮಾರ್ದನಿಸಿತು.

# ಮಹಾಯೋಗಿ ವೇಮನರ ಸಮಾಧಿ

ಸಾಮಾನ್ಯ ಅರ್ಥದಲ್ಲಿ "ಸಮಾಧಿ" ಎಂದರೆ "ಮಾನವನ ದೇಹ ಸತ್ತ ನಂತರದ ಸ್ಥಿತಿಯಂತೆ ಜೀವಂತ ಇರುವಾಗಲೇ ಇರುವುದು. ಇದೇ ನಿಜವಾದ ಮಾನವನ ಅಂತಿಮ ಸ್ಥಿತಿ. ಇದನ್ನು ಸಾಧಿಸಲಿಕ್ಕಾಗಿಯೇ ಮಾನವ ಜನ್ಮ. ಅಂದರೆ ನಾನು, ನನ್ನದು, ನನ್ನಿಂದೆಲ್ಲ ಎಂಬ ಭಾವನೆ ಇರದ ಸಚ್ಚಿದಾನಂದ ಸ್ವರೂಪ. ಇದು ಮೂಲ ಇರುವಿಕೆ. ಆದರೆ, ಅಜ್ಞಾನದಿಂದಾಗಿ ದೇಹಮಾತ್ರ ನಾನು ಎನ್ನುವ ಅಹಂಕಾರದಿಂದ ನಿರಂತರ ದ್ವೇಷ, ಅಸೂಯೆಯಿಂದಾಗಿ ದುಃಖಪಡುತ್ತಿದ್ದೇವೆ. ಈ ಸತ್ಯವನ್ನು ಅರಿತು ಆಚರಿಸಿ ಸದಾ ಆನಂದವಾಗಿರುವುದೇ **'ಸಮಾಧಿ ಸ್ಥಿತಿ'**. ಮಾನವ ದೇಹದಲ್ಲಿ ತನ್ನಿಷ್ಟದಂತೆ ನಿರಂತರ ಬಂದು ಹೋಗುವ ಉಸಿರು (ಪ್ರಾಣವಾಯು) ತನ್ನ ಬಂದು ಹೋಗುವ ಕಾರ್ಯವನ್ನು ನಿಲ್ಲಿಸಿದಾಗ ಸತ್ತನೆನ್ನುವರು. ಸುಂದರ ಹೆಸರಿನಿಂದ ಕರೆಸಿಕೊಳ್ಳುವ ಮಾನವ ದೇಹ ಉಸಿರು ನಿಂತ ಮರುಕ್ಷಣವೇ ಭಯ ಹುಟ್ಟಿಸುವ ಹೆಣವಾಗಿ ಬಿಡುತ್ತದೆ. ಇಂತಹ ಹೆಣವನ್ನು ಹುಗಿದ ಸ್ಥಳಕ್ಕೆ ಸಾಮಾನ್ಯ ಅರ್ಥದಲ್ಲಿ 'ಸಮಾಧಿ' ಎನ್ನುತ್ತಾರೆ.

ಸಮ+ಆದಿ ಎಂಬ ಎರಡು ಶಬ್ದಗಳು ಸೇರಿ 'ಸಮಾಧಿ' ಎಂಬ ಶಬ್ದವಾಗಿದೆ. ಜಗತ್ತು ಆರಂಭವಾಗುವುದಕ್ಕಿಂತ ಮೊದಲು (ಆದಿಯಲ್ಲಿ) ಯಾವ ಸ್ಥಿತಿ ಇತ್ತೋ ಆ ಸ್ಥಿತಿಯಲ್ಲಿಯೇ ಬದುಕುವ ಸ್ಥಿತಿಗೆ 'ಸಮಾಧಿ' ಎನ್ನುವರು. ಯಾರು ಸುಖ–ದುಃಖ, ಲಾಭ–ಹಾನಿ, ಪಾಪ–ಪುಣ್ಯವೆಂಬ ಭಾವನೆಯನ್ನು ಮೀರಿ ಯಾವುದೇ ಸಂದರ್ಭದಲ್ಲಿಯ ಯಾವುದೇ ಘಟನೆಗೂ ವಿಚಲಿತರಾಗದಂತೆ ಎಲ್ಲವನ್ನೂ ಸಮಚಿತ್ತದಿಂದ ಅನುಭವಿಸುತ್ತ ನಿರಂತರ ಶಾಂತವಾಗಿರುತ್ತಾರೋ ಅಂತವರನ್ನು 'ಸಮಾಧಿ ಸ್ಥಿತಿ'ಯಲ್ಲಿರುವವರು ಎನ್ನಬಹುದು.

'ಸಮತ್ವಂ ಯೋಗ ಮುಚ್ಚತೇ' ಎನ್ನುವ ಹಾಗೆ ಯಾರ ಇರವು ಎಲ್ಲ ಕಾಲ ಮತ್ತು ಸಂದರ್ಭಗಳಲ್ಲಿ ಸಮಚಿತ್ತದಲ್ಲಿರುತ್ತದೆಯೋ ಅದು ಯೋಗವೆನಿಸಿಕೊಳ್ಳುತ್ತದೆ. ಪ್ರಾರಬ್ಧ ಕರ್ಮದಿಂದ ಬರುವ ದೇಹ ಅದಕ್ಕೆ ಅಂಟಿಕೊಂಡಿರುವ ಕುಟುಂಬ, ಸಮಾಜ ಮೊದಲಾದವುಗಳಿಂದಾಗುವ ಸುಖ–ದುಃಖದ ಭಾವನೆಗಳನ್ನು ಸಹಜವಾಗಿ ಅನುಭವಿಸುತ್ತ, ಅವು ನನಗಲ್ಲ ನನ್ನ ಶರೀರಕ್ಕೆ ಮಾತ್ರ ಎಂಬುದನ್ನು ಸ್ಪಷ್ಟವಾಗಿ ಅರಿತು, ತನ್ನ ದೇಹ ಸಹಿತ ಜಗತ್ತಿನ ಪ್ರತಿಯೊಂದು ಆಗುಹೋಗುಗಳನ್ನು ಪರದೆಯ ಮೇಲೆ ಮೂಡುವ ಚಲನಚಿತ್ರವನ್ನು ನೋಡಿದಂತೆ ನೋಡಿ ತನ್ನ ಅಂತರಾತ್ಮದಲ್ಲಿ ಸ್ಫುರಣವಾಗುವ ದೈವಶಕ್ತಿಯನ್ನು ಆನಂದಿಸುತ್ತಾ ಇರುವ ಸ್ಥಿತಿಯೇ ಸಮಾಧಿ. ಈ ಸ್ಥಿತಿಯಲ್ಲಿ ನಿರಂತರ ಉಳಿದವರು ಈ ಸಮಾಜದಿಂದ ಏನನ್ನೂ ಬಯಸದೇ ಅದರ ಸೇವೆಗೋಸ್ಕರ, ದೇಹ ಸಹಿತ ತಮ್ಮ ಪ್ರತಿಯೊಂದು ಕ್ಷಣದ ಇರುವನ್ನು ಸಮರ್ಪಿಸುತ್ತಾರೆ. ಈ ಸಾಲಿಗೆ ಸೇರಿದವರು ಮಹಾಯೋಗಿ ವೇಮನರು.



ಸತ್ತ ಮೇಲೆ ಮಣ್ಣಿನಲ್ಲಿ ಹುಗಿದ ಭೌತಿಕ ದೇಹದ ಮೇಲೆ ಕಲ್ಲು, ಮಣ್ಣು, ಕಟ್ಟಿಗೆ ಮೊದಲಾದ ವಸ್ತುಗಳಿಂದ ಸುಂದರವಾದ ಕಟ್ಟಡವನ್ನು ಕಟ್ಟಿ 'ಸಮಾಧಿ' ಎನ್ನುವುದು ವ್ಯಾಪಾರಿ ಶಬ್ದ. ಜಗತ್ತಿನಲ್ಲಿ ಆಗಿ ಹೋದ ಬಹಳಷ್ಟು ಜನ ಮಹಾತ್ಮರ 'ಸಮಾಧಿ'ಗಳು ಧಾರ್ಮಿಕ ಕೇಂದ್ರಗಳಾಗಿ ಪರಿವರ್ತನೆಯಾಗಿವೆ. ಇಂದು ಹೆಚ್ಚಿನ ಪ್ರಮಾಣದ ಸಮಾಧಿ ಸ್ಥಳಗಳು ಹಣಗಳಿಸುವ, ಕಂದಾಚಾರಗಳನ್ನು, ಅನಾಚಾರಗಳನ್ನು ಪ್ರೇರೇಪಿಸುವ, ಹಿಂಸೆಯನ್ನು ಪ್ರಚೋದಿಸುವ, ಸಾಮಾಜಿಕ, ರಾಜಕೀಯ ಸ್ಥಾನಮಾನಗಳಿಸುವ ಕೇಂದ್ರಗಳಾಗಿ ಮಾರ್ಪಟ್ಟಿವೆ. ಮಹಾಯೋಗಿ ವೇಮನರು ಜೀವಂತ ಸಮಾಧಿಯಾದರು ಎನ್ನುವ ಸ್ಥಳವೂ ಸಹಿತ ಇದಕ್ಕೆ ಹೊರತಾಗಿಲ್ಲ.

ಮಹಾಯೋಗಿ ವೇಮನರ ಸಮಾಧಿ ಎಂದು ನಂಬಲಾಗಿರುವ ಪುರಾತನ ಕಾಲದ ಒಂದು ಗರ್ಭಗುಡಿ ಕಟಾರಪಲ್ಲಿ ಎಂಬ ಗ್ರಾಮದಲ್ಲಿದೆ. ಅದರಲ್ಲಿ ಸುಮಾರು 6–3 ಅಡಿಯ ಸಮಾಧಿಯಂತಹ ಕಟ್ಟೆಯಿದೆ. ಒಂದು ಕಡೆ ಮಾನವನ ಮುಖದ ಆಕೃತಿಯನ್ನು ಮಾಡಿ ಅದು ತಲೆಯ ಭಾಗವೆಂದು ಪೂಜಿಸುತ್ತಾರೆ. ಹಳೆಯದಾದ ಈ ಭಾಗವನ್ನು ಪರಿವರ್ತಿಸಲು ಗ್ರಾಮಸ್ಥರು ಅವಕಾಶ ನೀಡದ ಕಾರಣ ಅದನ್ನು ಹಾಗೆಯೇ ಉಳಿಸಿ ಅದರ ಸುತ್ತಲೂ ಪ್ರದಕ್ಷಿಣೆ ಹಾಕಲು ಜಾಗ ಬಿಟ್ಟು ಪಿರಾಮಿಡ್ ಆಕೃತಿಯಲ್ಲಿ ಕಟ್ಟಡವನ್ನು ನಿರ್ಮಿಸಿ ಸಮಾಧಿಯನ್ನು ಸುಂದರಗೊಳಿಸಲು ಪ್ರಯತ್ನಿಸಿದ್ದಾರೆ.

ಇದು ವೇಮನರ ಸಾಹಿತ್ಯವನ್ನು ಮತ್ತು ಅವರ ಜೀವನವನ್ನು ಅಧ್ಯಯನ ಮಾಡಿದ ಬಹಳಷ್ಟು ಜನ ಪಾಶ್ಚಾತ್ಯ ಮತ್ತು ಭಾರತೀಯ ಸಂಶೋಧಕರು ಉಲ್ಲೇಖ ಮಾಡಿದ ಸ್ಥಳ. ಈ ಸ್ಥಳಕ್ಕೆ ನಾನು ದಿನಾಂಕ 1.12.2010 ರಂದು ಭೇಟಿಕೊಟ್ಟಾಗಿನ ಸ್ಥಿತಿ.

**ಈ ಕಟಾರಪಲ್ಲಿ ಗ್ರಾಮವು ಆಂಧ್ರ ರಾಜ್ಯದ ಅನಂತಪುರ ಜಿಲ್ಲೆಯ ಗಂಡಾಲಪೆಂಟಾ ಎಂಬ ಮಂಡಲದಲ್ಲಿದೆ. ಇದು ಕದರಿ ನಗರದ ಸಮೀಪದಲ್ಲಿದ್ದು, ಕದರಿ ರಾಚೋಟಿ ಬಸ್ಸಿನಲ್ಲಿ 10 ಕಿ.ಮೀ. ಪ್ರಯಾಣ ಮಾಡಿ ಕಟಾರಪಲ್ಲಿ ಗ್ರಾಮದ ಕ್ರಾಸಿಗೆ ಇಳಿದು ಸುಮಾರು ಎರಡು ಕಿಲೋಮೀಟರ ನಡೆದು ಈ ಗ್ರಾಮಕ್ಕೆ ಹೋಗಬೇಕು.**

ಮಹಾಯೋಗಿ ವೇಮನರ ಸಮಾಧಿಯನ್ನು ಪೂಜಿಸುವವರು "ತುಂಗ ವಂಶಸ್ಥರಂತೆ". ಅವರ ಹಿರಿಯರ ಕಾಲದಿಂದಲೂ ಪೂಜಾ ಕಾರ್ಯವನ್ನು ನಡೆಸಿಕೊಂಡು ಬಂದಿದ್ದಾರಂತೆ. ಆ ಸ್ಥಳದ ಮಹಿಮೆಯನ್ನು ಅರಿತು ಆಂಧ್ರ ಪ್ರದೇಶ ಸರಕಾರ 1.5 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಸುತ್ತಲಿನ ಸ್ಥಳವನ್ನು ಸುಂದರವಾಗಿ ಅಭಿವೃದ್ಧಿಗೊಳಿಸಿದ್ದಾರೆ. ವೇಮನರ ಆಯ್ದ ಪದ್ಯಗಳನ್ನು ಕಲ್ಲಿನಲ್ಲಿ ಕೆತ್ತಿಸಿ ಸುತ್ತಲೂ ಸುಂದರವಾಗಿ ಜೋಡಿಸಿದ್ದಾರೆ. ಪ್ರವಾಸಿಗರ ಅನುಕೂಲಕ್ಕಾಗಿ ವಸತಿಗೃಹ, ಉಪಹಾರಗೃಹ, ಹೂಗಿಡಗಳು ಮತ್ತು ಹುಲ್ಲನ್ನು ಬೆಳೆಸಿ ಪರಿಸರವನ್ನು ಸುಂದರಗೊಳಿಸಿದ್ದಾರೆ.

ಆಧುನಿಕತೆಯ ಸ್ಪರ್ಶಕಾಣದ ಈ ಗ್ರಾಮವು ಅತ್ಯಂತ ಶಾಂತವಾದ ಪರಿಸರದಲ್ಲಿದೆ. ಇಲ್ಲಿಯವರೆಗೆ ಈ ಗ್ರಾಮಕ್ಕೆ ಬಸ್ಸಿನ ಸೌಕರ್ಯವಿಲ್ಲ. ದೊಡ್ಡ ದೊಡ್ಡ ಕಲ್ಲು ಬಂಡೆಗಳಿಂದ ನಿರ್ಮಾಣವಾದ ಬೆಟ್ಟಗಳಿಂದ ಸುತ್ತುವರೆದ ಈ ಗ್ರಾಮವು ಫಲವತ್ತಾದ ವ್ಯವಸಾಯ ಭೂಮಿಯನ್ನು ಹೊಂದಿದೆ. ಕುರುಚಲ ಗಿಡಗಳಿರುವ ಬೆಟ್ಟಗಳಲ್ಲಿ ದೊಡ್ಡ ದೊಡ್ಡ ಗುಹೆಗಳು, ವನಸ್ಪತಿ ಸಸ್ಯಗಳು ಆಧ್ಯಾತ್ಮಿಕ ಸ್ಪಂದನಕ್ಕೆ ಪ್ರಶಸ್ತವಾದ ಸ್ಥಳದಂತಿದೆ. ಗ್ರಾಮದ ಜನರು ವ್ಯವಸಾಯ, ಕುರಿಸಾಗಾಣಿಕೆ ಮತ್ತು ಅರಣ್ಯದ ವಸ್ತುಗಳನ್ನು ಸಂಗ್ರಹಿಸುವ ವೃತ್ತಿಯಲ್ಲಿದ್ದಾರೆ. ಫಲವತ್ತಾದ ಭೂಮಿಯಲ್ಲಿ ಹುಲುಸಾದ ಭತ್ತ, ತೊಗರಿ ಮತ್ತು ಶೇಂಗಾ ಬೆಳೆಗಳನ್ನು ಬೆಳೆಯುತ್ತಾರೆ. ಆಧುನೀಕರಣದ ಪ್ರಕ್ರಿಯೆಯಿಂದ ನಿರ್ಮಾಣವಾದ ಕೆಲವು ವಸ್ತುಗಳ ಪರಿಚಯ ಈ ಗ್ರಾಮಸ್ಥರಿಗಿದ್ದರೂ, ಸಾಮಾಜಿಕ ಮತ್ತು ಧಾರ್ಮಿಕ ಜೀವನವು ಪುರಾತನ ಬುಡಕಟ್ಟು ಜನರಂತಿದೆ. ಇಂದಿಗೂ ರಸ್ತೆಯ ಮೇಲೆ ಮೂರು ಕಲ್ಲನ್ನಿಟ್ಟು ಕಟ್ಟಿಗೆಯಿಂದ ಬೆಂಕಿ ಉರಿಸಿ "ಚಿಲೇ" ಎಂಬ ಅಕ್ಕಿ ದೊಸೆಯನ್ನು ತಯಾರಿಸಿ ಮಾರುತ್ತಾರೆ. ಒಂದು ದೋಸೆಯ ಬೆಲೆ ಒಂದು ರೂಪಾಯಿ. ಇದನ್ನು ಗಮನಿಸಿದರೆ ಆ ಜನರ ಜೀವನ ಮಟ್ಟವನ್ನು ಅರ್ಥೈಸಬಹುದು.

**ದೇವರು ತನ್ನೊಳಗೇ ಇದ್ದಾನೆ. ಅವನು ಅಮೂರ್ತ. ಅವನು ಮೂರ್ತಿಗಳಲ್ಲಿ ಇಲ್ಲ. ಅವನು ಭಾವಾತೀತ ಬಯಲು; ಮಂದಿರಗಳ ಕತ್ತಲೆ ಕೋಣೆಯಲ್ಲಿ ಅವನಿಲ್ಲ. ಅವನು ಒಬ್ಬನೇ, ರಾಮ, ಶಿವ, ವಿಷ್ಣು ವಿಭಿನ್ನ ಹೆಸರುಗಳಷ್ಟೇ ಎಂದು ಪ್ರಪಂಚದ ಪ್ರಜೆಗಳಿಗೆ ದಿವ್ಯ ಜ್ಞಾನವನ್ನು ನೀಡಿದ ಮಹಾಯೋಗಿ ವೇಮನರು ಭೌತಿಕವಾಗಿ ಕಣ್ಮರೆಯಾಗಿದ್ದರೂ ಅವರ ಪದ್ಯಗಳ ಮೂಲಕ ಸದಾ ಉಪಸ್ಥಿತರಾಗಿದ್ದಾರೆ. ಶುದ್ಧ ಮನಸ್ಸಿನಿಂದ ಶ್ರದ್ಧಾ ಭಾವದಿಂದ, ಸೇವಾ ಪ್ರವೃತ್ತಿಯಿಂದ ಸ್ಮರಿಸಿದರೆ ವೇಮನರು ನಮ್ಮೊಳಗಿಂದಲೇ ಪ್ರಕಟವಾಗುತ್ತಾರೆ.**

## ವೇಮನರ ಸಾಹಿತ್ಯ

ಮಹಾಯೋಗಿ ವೇಮನರು ಬುದ್ದಿ ಉಪಯೋಗಿಸಿ ಯಾವುದೇ ಗ್ರಂಥಗಳನ್ನು ರಚಿಸಿಲ್ಲ. ಏಕಾಂತದಲ್ಲಿರುವಾಗ, ಧ್ಯಾನಿಸುವಾಗ, ಸಮಾಜದ ಆಗು ಹೋಗುಗಳನ್ನು ಗಮನಿಸುವಾಗ ಅವರೊಳಗೊಂದು ಅಂತಃಸ್ಫುರಣೆಯಾಗುತ್ತಿತ್ತು. ಆಗ ಅವರು ಸಹಜವಾಗಿ ಉದ್ಘೋಷ ಮಾಡಿದ ಶಬ್ದಗಳ ಸಾಲುಗಳೇ ವೇಮನರ ಪದ್ಯಗಳು. ಅವರ ಶಿಷ್ಯ ವರ್ಗದವರು ಅವುಗಳನ್ನು ಕೇಳಿ ಬರೆದುಕೊಂಡು ಅವುಗಳನ್ನು ನಿರಂತರವಾಗಿ ಪಠಣ ಮಾಡಲಾರಂಭಿಸಿದರು. ಹಾಗೆಯೇ ಅವುಗಳು ಒಬ್ಬರ ಬಾಯಿಂದ ಮತ್ತೊಬ್ಬರ ಬಾಯಿಗೆ ಹರಿಯುತ್ತ ಬಂದವು. ನಂತರ ಅವರು ನಡೆದಾಡಿದ ಸ್ಥಳಗಳಲ್ಲೆಲ್ಲ ತಾಳೆಯ ಗರಿಯ ಮೇಲೆ ಬರೆಯಲ್ಪಟ್ಟವು. ಕ್ರಿ.ಶ. 1824 ರಲ್ಲಿ



ಬ್ರಿಟಿಷ ಅಧಿಕಾರಿ ಸಿ.ಪಿ.ಬ್ರೌನ್‌ರವರಿಂದ ಗ್ರಂಥ ರೂಪದಲ್ಲಿ ಪ್ರಕಟಿಸುವ ಕಾರ್ಯ ಪ್ರಾರಂಭವಾಯಿತು.

ಕನ್ನಡ ಭಾಷೆಗೆ ಈ ಸಾಹಿತ್ಯವು 20ನೇ ಶತಮಾನದಲ್ಲಿ ಪ್ರವೇಶ ಪಡೆಯಿತು. ಕ್ರಿ.ಶ. 1920 ರಲ್ಲಿ ಶ್ರೀ ಭೀಮರಾಜು ಎನ್ನುವವರು ವೇಮನರ ಕೆಲವು ಪದ್ಯಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿದರು. ಬಳ್ಳಾರಿ ಜಿಲ್ಲೆಯ ದುಗ್ಗವತ್ತಿಯ ಕಾಯಕದ ಸಿದ್ಧವೀರಪ್ಪನವರು ಹಲವಾರು ಪದ್ಯಗಳನ್ನು ಸಂಗ್ರಹಿಸಿ ಡಾ. ಫ.ಗು.ಹಳಕಟ್ಟಿಯವರಿಗೆ ನೀಡಿದರು. ಅವರು ಅದರಲ್ಲಿಯ ಮಹತ್ವದ 507 ಪದ್ಯಗಳನ್ನು ಆಯ್ದುಕೊಂಡು **"ವೇಮಣ್ಣ ಯೋಗಿಯ ವಚನಗಳು"** ಎಂಬ ಗ್ರಂಥವನ್ನು ದಿನಾಂಕ 29.6.1951 ರಲ್ಲಿ ಪ್ರಕಟಿಸಿದರು.

ವೇಮನರ ಸಮಗ್ರ ಸಾಹಿತ್ಯ ಕನ್ನಡಕ್ಕೆ ತರ್ಜುಮೆಯಾದದ್ದು 1960 ರಿಂದ 2000ದ ವರೆಗೆ ಈ ಶ್ರೇಷ್ಠ ಕಾರ್ಯವನ್ನು ಮಾಡಿದವರು. ಹುಲಕೋಟಿಯ ಪೂಜ್ಯ ಶ್ರೀ ಎಸ್.ಆರ್.ಪಾಟೀಲರು

## ಶ್ರೀ ಎಸ್. ಆರ್. ಪಾಟೀಲರು

ನಾಡು ಮೆಚ್ಚಿದ ಜನನಾಯಕ, ಹುಲಕೋಟಿಯ ಹುಲಿ, ಸಹಕಾರಿ ರಂಗದ ಭೀಷ್ಮರೆಂದೇ ಪ್ರಸಿದ್ಧರಾದ ದಿ. ಕೆ.ಎಚ್.ಪಾಟೀಲರ ಸಹೋದರರಾದ ಶ್ರೀ ಎಸ್. ಆರ್. ಪಾಟೀಲರು ವೃತ್ತಿಯಿಂದ ಅಭಿಯಂತರರಾಗಿ ಸರಕಾರಿ ಸೇವೆಯನ್ನಾರಂಭಿಸಿ, ಅಧೀಕ್ಷಕ ಅಭಿಯಂತರರಾಗಿ ನಿವೃತ್ತಿಯಾದವರು. ಪ್ರವೃತ್ತಿಯಿಂದ ಲೇಖಕರು, ಬಾಲ್ಯದಿಂದಲೇ ಆಧ್ಯಾತ್ಮಿಕ ಹಸಿವನ್ನು ಬೆಳೆಸಿಕೊಂಡವರು. ಆಧ್ಯಾತ್ಮಿಕ ಚಿಂತನೆಗಾಗಿ "ಪ್ರಜ್ಞಾನೋದಯ" ಆಶ್ರಮವನ್ನು ಸ್ಥಾಪಿಸಿದ ಮಹಾನ್ ಸಾಧಕರು. ಅನೇಕ ಸಾಧು–ಸಂತರ, ಸಿದ್ಧಿ ಪುರುಷರ ಒಡನಾಟದಿಂದ ವಿಶೇಷ ಸಿದ್ಧಿಯನ್ನು ಪಡೆದ ಶ್ರೀ ಎಸ್.ಆರ್.ಪಾಟೀಲರು ಮಹಾಯೋಗಿ ವೇಮನರಿಂದ ಆಕರ್ಷಣೆಗೆ ಒಳಗಾಗಿ ವೇಮನರ ಸಾಹಿತ್ಯವನ್ನು ಕನ್ನಡ ಜನತೆಗೆ ತಲುಪಿಸಲು ತಮ್ಮ ಜೀವನವನ್ನೇ ಸಮರ್ಪಿಸಿದರು.

ಇಳಿ ವಯಸ್ಸಿನಲ್ಲಿ ಸಣ್ಣ ಮಗುವಿನಂತೆ ತೆಲುಗು ಭಾಷೆಯನ್ನು ಕಲಿತು, ಹಲವಾರು ತೆಲುಗು ಸಾಹಿತಿಗಳ ಸಂಪರ್ಕ ಸಾಧಿಸಿ ಅವರಿಂದ ತೆಲುಗು ಭಾಷೆಯಲ್ಲಿರುವ ವೇಮನ ಸಾಹಿತ್ಯವನ್ನೆಲ್ಲ ಸಂಗ್ರಹಿಸಿ, ಅವುಗಳ ಜೊತೆ ಚಿಂತನ ಮಂಥನ ಮಾಡಿ ಸುಮಾರು ನಾಲ್ಕು ಸಾವಿರ ಪದ್ಯಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿದರು. ವೇಮನರ ಪದ್ಯಗಳನ್ನು ಹಲವಾರು ವಿಭಾಗಗಳನ್ನಾಗಿ ಮಾಡಿ ಜನ ಸಾಮಾನ್ಯರಿಗೆ ತಿಳಿಯುವಂತೆ ವಿಂಗಡಿಸಿದರು. ಅವರು **ವೇಮನ ವಿಶ್ವಗೀತೆ, ವೇಮನ ಯೋಗ ಮೀಮಾಂಸೆ ಭಾಗ–1, ಮತ್ತು 2, ಅವರಿವರು ಕಂಡಂತೆ ವೇಮನ,**

**ವೇಮನ ಮತ್ತು ಒಮ್ಮನದ ಹಕ್ಕಿಗಳು, ವೇಮನ ಮತ್ತಿನ ಹಾರ** ಎಂಬ ಹಲವಾರು ಕೃತಿಗಳನ್ನು ರಚಿಸಿದ್ದಾರೆ.

ಮಹಾಯೋಗಿ ವೇಮನರ ತತ್ವ ಸಿದ್ಧಾಂತಗಳು ಮಾನವ ಕಲ್ಯಾಣಕ್ಕೆ ಅತಿ ಉಪಯುಕ್ತವಾದಂತವುಗಳು. ಅವುಗಳು ಸರ್ವ ಜನ ಸಮುದಾಯಕ್ಕೂ ತಲುಪುವಂತಾಗಲು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಮಹಾಯೋಗಿ ವೇಮನ ಪೀಠವನ್ನು ಸ್ಥಾಪಿಸಲು ಸಂಕಲ್ಪಿಸಿದರು. ಅದಕ್ಕೆ ತನು–ಮನ–ಧನವನ್ನು ಒದಗಿಸಿದ ಶ್ರೀ ಎಚ್.ಕೆ.ಪಾಟೀಲರು 1983 ರಲ್ಲಿ ಇದನ್ನು ಸಾಕಾರಗೊಳಿಸಿದರು. ಅಂದಿನಿಂದ ಇಂದಿನವರೆಗೆ ಮಹಾಯೋಗಿ ವೇಮನ ಪೀಠವು ಹಲವಾರು ವಿದಾಯಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ.

**ಮಹಾಯೋಗಿ ವೇಮನರನ್ನು ಅರಿಯಬೇಕಾದವರು ಮಾಡಬೇಕಾದ ಕಾರ್ಯ:**

* ಸ್ವಯಂಅನ್ನು ಅರಿತು ಸಾಕ್ಷಾತ್ ದೈವಶಕ್ತಿಯನ್ನೇ ದೇಹದಲ್ಲಿ ಧರಿಸಿ ಬಾಳಿಹೋದ ವೇಮನರನ್ನು ಅವರು ರಚಿಸಿದ ಸಾಹಿತ್ಯವನ್ನು ಪ್ರಜ್ಞಾಪೂರ್ವಕವಾಗಿ ಭಕ್ತಿಯಿಂದ ಅಧ್ಯಯನ ಮಾಡಬೇಕು.
* ಅವರ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿ, ಧ್ಯಾನಿಸಿದರೆ ವೇಮನರ ದರ್ಶನದ ಅನುಭವವಾಗುವುದು. ಆತನ ಕಣ್ಣುಗಳಲ್ಲಿ ಇಣುಕಬಹುದು. ಆತನ ಕೈಗಳ ಸ್ಪರ್ಶವನ್ನು ಅನುಭವಿಸಬಹುದು. ಆತನ ಮೌನವನ್ನು ಆಲಿಸುತ್ತ ಆತನನ್ನು ನಮ್ಮ ಅಂತರಂಗದಲ್ಲಿ ಅನುಭವಿಸಬಹುದು. ಇದು ನಿಜವಾದ "ದರ್ಶನ".
* ಪ್ರಾರಬ್ಧ ಕರ್ಮಕ್ಕನುಸಾರ ನಿರ್ಧರಿತವಾದ ಕರ್ಮವನ್ನು ಅರಿತು, ಅನುಭವಿಸಬೇಕು. ಅನುಭವಿಸದ ಹೊರತು ಮುಕ್ತಿಯಾಗಲಾರದು. ಮುಕ್ತಿ ಸತ್ತ ಮೇಲಲ್ಲ, ಈಗಲೇ, ಇಲ್ಲಿಯೇ ಈ ಕ್ಷಣದಲ್ಲಿಯೇ ಇರುವಂತಹುದು.
* ಮಾನವನು ಇಂದ್ರಿಯ ಭೋಗಗಳನ್ನು ಅರಿತು ಅನುಭವಿಸಬೇಕು. ಎಷ್ಟೊಂದು ಸಂಪೂರ್ಣವಾಗಿ ಅನುಭವಿಸಬೇಕೆಂದರೆ ಅದರ ನಿರರ್ಥಕತೆ ಅವನಿಗೆ ಸ್ಪಷ್ಟವಾಗುವವರೆಗೆ, ಆಗಲೇ ನಿಜವಾದ 'ಯೋಗಿ' ತನ ಹುಟ್ಟಬಲ್ಲದು. ಮುಕ್ತರಾಗಿ ಬದುಕಬೇಕೆನ್ನುವವರಿಗೆ ಕಾಮನೆಗಳ ಸಂಪೂರ್ಣ ಅನುಭವವಿರಬೇಕು.
* ನಿಜವಾದ ಮಾಲಿಕತ್ವ ತನ್ನ ಮೇಲೆ ಮಾತ್ರ ಸಾಧ್ಯ. ಯಾರು ನಿಜವಾಗಿ ಮಾಲಿಕನೋ ಆತನು ಜಗತ್ತಿನ ಕಣ್ಣಲ್ಲಿ ಭಿಕ್ಷುಕ, ರಾಜನಿಗಿಂತ ಭಿಕ್ಷುಕ ಶ್ರೇಷ್ಠ ಎನ್ನುವುದನ್ನು ಅರಿತವ ಮಾತ್ರ ಸತ್ಯವನ್ನು ಗ್ರಹಿಸಬಲ್ಲ.
* ನಿಮ್ಮೊಳಗೆ ಪರಮಾತ್ಮನ ಸಾಮ್ರಾಜ್ಯವಿದೆ. ನಿಮ್ಮೊಳಗಿಂದಲೇ ಸಮಗ್ರ ಸೃಷ್ಟಿ ಉದಯವಾಗಿ ವಿಕಾಸವಾಗುತ್ತಿದೆ. ನೀವೇ ಅದರ ಮಾಲಿಕರು. ನೀವು ಮಾತ್ರ ಅದರ ಮಾಲಿಕತ್ವ ಸಾಧಿಸಬಹುದು.



ಬ್ರಿಟಿಷ ಅಧಿಕಾರಿಯಾಗಿದ್ದ ಜೆ.ಖ.ಗ್ರಿಬ್ಬಲ್‌ರವರು ಕ್ರಿ.ಶ. 1875 ರಲ್ಲಿ "ಕಡ್ಡಪ್ಪ ಜಿಲ್ಲೆಯ ಕೈಪಿಡಿ"ಯನ್ನು ತಯಾರಿಸಿದರು. ಅವರು ಕ್ರಿ.ಶ. 1816 ರಲ್ಲಿ ವೇಮನರ ಸಾಹಿತ್ಯದ ಸಂಗ್ರಹ ಮತ್ತು ಸಂಶೋಧನೆಗಳನ್ನೆಲ್ಲ ಕ್ರೋಢೀಕರಿಸಿ ನಮ್ಮೆಲ್ಲರ ಜೀವನವು ಸುಂದರವೂ, ಆನಂದಮಯವೂ ಆಗಬೇಕಾದರೆ ವೇಮನ ಪದ್ಯಗಳಲ್ಲಿಯ ಸಂದೇಶಗಳನ್ನು, ಒಟ್ಟು ಸಾಹಿತ್ಯದ ಸಾರಾಂಶವನ್ನು ಸಪ್ತ ಸೂತ್ರಗಳಲ್ಲಿ ಪ್ರಕಟಿಸಿದ್ದಾರೆ. ಅವುಗಳೆಂದರೆ –

1. ದೇಹವೇ 'ನಾ'ನಲ್ಲ ಎಂಬ ಸತ್ಯವನ್ನು ಅರಿ, ದೇವರಾಗು.
2. ಸರ್ವ ಸೃಷ್ಟಿ ಮತ್ತು ಜೀವಿಗಳಲ್ಲಿ ಕರುಣೆಯಿಂದಿರು.
3. ಹಿಂಸೆ, ದ್ವೇಷ, ಅಸೂಯೆಗಳನ್ನು ತೊರೆ, ಶಾಂತನಾಗಿರು.
4. ಮತ್ತೊಬ್ಬರ ಭಾವನೆಗಳನ್ನು ತಿರಸ್ಕರಿಸಬೇಡ.
5. ನೀನು ಕಂಡ (ದರ್ಶಿಸಿದ) ವಾಸ್ತವಿಕ ಸತ್ಯವನ್ನು ಪ್ರತಿಪಾದಿಸುವಲ್ಲಿ, ಪ್ರಕಟಿಸುವುದರಲ್ಲಿ ಯಾರಿಗೂ, ಯಾವುದಕ್ಕೂ ಹೆದರಬೇಡ.
6. ನಿರಂತರ ವಾಸ್ತವಿಕ ಸತ್ಯದ ಅನ್ವೇಷಣೆಯಲ್ಲಿರು.
7. ಜೀವನದ ಅಂತಿಮ ಉಸಿರಿರುವವರೆಗೆ ನಿರಂತರ ಕಾಯಕದಲ್ಲಿರು, ಪ್ರತಿಯೊಂದು ಕೆಲಸವೂ ದೈವನಿಯಮಿತ.

ಈ ಮೇಲಿನ ಸಪ್ತ ಸೂತ್ರಗಳನ್ನು ನಮ್ಮ ದಿನ ನಿತ್ಯದ ಜೀವನದಲ್ಲಿ ಅಳವಡಿಸಿಕೊಂಡರೆ ನಮ್ಮ ಜೀವನ ಆನಂದಮಯವಾಗುವುದರಲ್ಲಿ ಸಂದೇಹವಿಲ್ಲ.

# ವೇಮನರ ಆಯ್ದ ಪದ್ಯಗಳು

## ವೇಮನರ ದೇಶ, ಕಾಲ

ನಂದನ ಸಂವತ್ಸರದಲಿ,
ಹೊಂದುವ ಕಾರ್ತೀಕ ಶುದ್ಧ ಹುಣ್ಣಿಮೆ ದಿನದೋಳ್
ವಿಂಧ್ಯಾದ್ರಿ ಸೇತು ಬಂಧನ
ಸಂದಿಯನೋರ್ವ ವೀರನಾಳ್ವ; ಸಾರೆಲೊ ವೇಮಾ

ಊರು ಕೊಂಡವೀಡು ವಾಸ ಪಶ್ಚಿಮ ಬೀದಿ,
ಮೂಗಚಿಂತಪಲ್ಲಿ ಮೊದಲ ಮನೆಯು,
ಮಡ್ಡ ರೆಡ್ಡಿ ಕುಲವು ಮತ್ತೆ ಹೇಳಲೇನು? ವಿಶ್ವ

ಪಾಕನಾಟಿರೆಡ್ಡಿ ಪೊಳೆವ ಮೋಟಾರೆಡ್ಡಿ
ಖ್ಯಾತ ತೋಟ – ಹಿರಿಯ ಕೆಂಪು ರೆಡ್ಡಿ
ಮೂಢರೆಲ್ಲ ಜಗದಿ ಮಿನ್ನ ಜೀವಿಸಿಪ್ಪ
ಪ್ರತಿಭೆಗೇರಿದಂತೆ ಪೊಳೆಯೊ ವೇಮ

ಕಲಿಯುಗದೊಳು ಮುನ್ನ ಒಕ್ಕಲಿಗರ ಕುಲಕೆ,
ಘನತೆಗಾಗಿ ವೇಮನ ಕೀರ್ತಿಯಿತ್ತ
ಭುವಿಯ ಸಕಲ ಧರ್ಮವನೆ ಸಾರಿ ಹರಡಿದ ವಿಶ್ವ

ಕದಿರಿ ಪೂರ್ವ ದಿಶೆಗೆ ಘನತೆಯಿಂ ಶೋಭಿಪ
ಬೆಳಗುತಿಹ ಕಟಾರುಪಲ್ಲೆ ಖ್ಯಾತ;
ಆಚಲ ನಿಷ್ಠೆಗೂಡಿ ಅಂದದಿದ್ದ ರಯ್ಯ
ಬಾಲ ಚಕ್ರ ವೇಮ ಭವ್ಯ ನಾಮ

ಶ್ರೀಕರ ಶಿವತತ್ತ್ವ ಶೀಲನೈ ವೇಮನನ
ಹದಿನೈದು ಸಾಸಿರ ಪದ್ಯಗಳನು
ಲೋಕದಲ್ಲಿ ಪಠಿಸೆ ಪಾಕೃತರು ದಡ ಸೇರಲ್ಕೆ ವಿಶ್ವ

ಸಾಸಿರ ಪದ್ಯಗಳ ಶುದ್ಧ ಭಕ್ತಿಯಿಂದ,
ಪಠನ ಗೆಯ್ಯುವಂಥ ಭಕ್ತ ಜನಕೆ,
ತಪ್ಪದೇ ಮೋಕ್ಷ ಪದವಿ ಅಂಗೈಲಿಹುದು ವಿಶ್ವ

* ಪದ್ಯದ ಕೊನೆಗೆ ಇರುವ 'ವಿಶ್ವ' ಎಂಬುದನ್ನು : ವಿಶ್ವದಾಭಿರಾಮ ಕೇಳು ವೇಮ ಎಂದು ಓದಿಕೊಳ್ಳಬೇಕು



## ದೇವರು

ಧ್ವಜವನೆತ್ತಿ ಸಾರು ದೇವನೊಬ್ಬನೆಂದು
ನಿಜವಿದಿಹುದು ಒಳಗೆ ನಿಂತಿರುವನು
ಚೊಕ್ಕ ನೋಡಲವನ ಸಂತಸದಿ ಮುಳುಗುವೆ ವಿಶ್ವ

ಕಿವಿಯ ಗೂಡು ಗೈದು, ಕೂಗಿದನು ವೇಮನ;
ಬಟ್ಟ ಬಯಲೊಳುಂಟು ಬ್ರಹ್ಮವೆಂದು;
ಹೊಳೆಯೆ ಬುದ್ಧಿಗದನೆ, ಹೊಂದಿ ಸುಖಿಸಬಹುದು ವಿಶ್ವ

ಏಕ ಬ್ರಹ್ಮವು ನಿತ್ಯವು;
ವೈಕಲ್ಪಿತವಾದಂಥಹ ವಸ್ತುಗಳೆಲ್ಲಂ
ಏಕತ್ವದೊಳಗೆ ಅರಿತೊಡೆ,
ಶೋಕವಿರದಂಥ ಮುಕ್ತಿಯು, ಸುಲಭವು, ವೇಮಾ

ದೇವನೆನಲು ಬೇರೆ ದೇಶದಲ್ಲಿ ಇಹನೆ?
ದೇಹಿಯೊಡನೆ ಸತತ ದೇಹದಲ್ಲಿ
ಹತ್ತಿ ವಾಹನಗಳ ಹೊಡೆದುಕೊಂಡು ಹೋಗುವವ ವಿಶ್ವ

ವಿಶ್ವ ನಡೆಸುವವನು ವಿಶ್ವೇಶ್ವರನಿರಲು,
ಪ್ರಭುವು ನಾನು ಎಂದು ಪೇಳಲೇಕೆ?
ವನದೊಳಗಿಹ ಕೋತಿ ವಸುಧೆ ನಡೆಸಬಹುದೆ? ವಿಶ್ವ

ಬ್ರಹ್ಮಾಂಡವೇ ದೇಹ, ಪ್ರಾಣವೆನಲು ಗಾಳಿ,
ಕಣ್ಣುಗಳು ರವಿ ಚಂದ್ರ, ಗೌರವವಿದು
ಇದರಕಿಂತ ಬ್ರಹ್ಮ ಇರುವುದೇನು ಬೇರೆ? ವಿಶ್ವ

ಭಗವಂತನಾದ ದೇವನು
ಜಗಗಳ ತನ್ನೊಳಗೆ ಬೆಳೆಸಿ, ಜಾಲವ ತೋರ್ಪಂ,
ಮಿಗೆ ಪರಿಯಲಿ ತಾನೆಲ್ಲೆಡೆ,
ಅಗಣಿತನಾಗಿ ಬೆಳಗುತಿಹನನುವಿನಲಿ, ವೇಮಾ

## ಮೂರ್ತಿ ಪೂಜೆ

ಶಿವನು ಇರುವನೆನುತೆ, ಶಿಲೆಗಳಿಗೆ ಮಣಿಯುವ,
ಮೂರ್ಖ ಜೀವಿಗಳೇ ಮೋಹ ಬಿಡಿರಿ
ಜೀವಿಯಲ್ಲೆ ಹೊರತು, ಶಿಲೆಯೊಳೇನುಂಟು? ವಿಶ್ವ

ಗಟ್ಟಿ ಕಲ್ಲು ತಂದು, ಕಾಲು ಬೆರಳಿನಿಂದ
ಒತ್ತಿ, ಉಳಿಯ ಬಳಸಿ ಗಾಸಿಗೊಳಿಸಿ,
ಬಂಡೆಗಲ್ಲಿಗೆರಗುತಿಪ್ಪನೆಂಥ ಮೂರ್ಖ! ವಿಶ್ವ

ಶಿಲೆಯ ನೋಡಿ ನರರು ಶಿವನೆಂದು ಭಾವಿಪರು
ಶಿಲೆಯು ಶಿಲೆಯೆ ಹೊರತು ಶಿವನು ಅಲ್ಲ
ತನ್ನೊಳಿರುವ ಶಿವನ ತಾನು ತಿಳಿಯನೇಕೊ? ವಿಶ್ವ

ಶಿಲೆಯ ದೇವತೆಗಳ, ಸ್ಥಿರವಾಗಿ ರೂಪಿಸಿ,
ಮಣ್ಣು ಪಾಲಾದರು; ಮನುಜರೆಲ್ಲ
ಮಣ್ಣಿನಲ್ಲಿ ಕಲ್ಲು; ಮನದೊಳಗೆ ತಿಳಿಯರು ವಿಶ್ವ

ಪ್ರಾಣ ಪ್ರತಿಷ್ಠೆಯು ಪ್ರಪಂಚವೇ ಹೊರತು,
ಬೇರೆಯಲ್ಲ ಜಗದಿ ಪರಿಕಿಸಿದೊಡೆ
ಪ್ರಾಣ ಪ್ರತಿಷ್ಠೆಯಿಂ ಪ್ರತಿಮೆ ನುಡಿವುದೇನು? ವಿಶ್ವ

ಕಲ್ಲು ಬೊಮ್ಮಗೇಕೆ ಕೆಲ ಬಣ್ಣದ ವಸ್ತ್ರ?
ಗುಡಿಗೋಪುರವೆಲ್ಲ ಕಲ್ಲುಮಣ್ಣುಗಳು
ಬಟ್ಟೆ ಅನ್ನ ತಾನು ಬಯಸುತಿಹನು ದೇವ ಬಯಸುವನೆ? ವಿಶ್ವ

ದೇಹದೊಳಗೆ ಇಪ್ಪ ದೇಹಿ ದೇವನನ್ನು,
ಕಂಡು ಕೊಂಡವರು ತೀರ್ಥಯಾತ್ರೆ
ಗೆಯ್ಯರಯ್ಯ ಜಗದಿ; ಆತ್ಮ ರೂಪ ತಿಳಿದು; ವಿಶ್ವ



## ಮತಗಳು

ಓದನೋದಲೇಕೆ? ಸನ್ಯಾಸವು ಏಕೆ?
ಷಣ್ಮತದಲಿ ಸಿಕ್ಕು ಸಾಯಲೇಕೆ?
ಹರನ ಭಜನೆ ಗೈದು ಆತ್ಮದಿರುವನು ತಿಳಿ ವಿಶ್ವ

ಓದನೋದದಿರಲು ಸೌಖ್ಯವೆಂಬುದಿಲ್ಲ
ಓದನೋದಿ ತಾನು ಒಪ್ಪವಿರಲು,
ಓದಿನರ್ಥವರಿತು ಓದಿನಾಚೆ ಓದು ವಿಶ್ವ

ಮೊದಲ ಕ್ರಿಯೆಯು ತಪ್ಪಿ,, ಮೋಸವನು ಮಾಡುತ,
ಹೊಟ್ಟೆಗಾಗಿ ಮನಸು ಗಟ್ಟಿಗೊಳಿಸಿ,
ಬಿಡಾಡಿ ನಾಯಿ ತೆರ ಬೆಳೆಯುವರು ಮನುಜರು ವಿಶ್ವ

ವಿಷ್ಣು ಭಕ್ತರೆಲ್ಲ ಕೊನೆಗೆ ಬೂದಿ ಪಾಲು;
ವಾದವೇಕೆ? ಮತ ವಿಭೇದವೇಕೆ?
ಲಿಂಗಧಾರಿ ಮರಳಿ ಆದ ಮಣ್ಣು ಪಾಲು ವಿಶ್ವ

ಅಂಗದಲ್ಲಿ ಲಿಂಗ ಅತಿಶಯಾಗಿ ಕಟ್ಟಿ,
ತೀರ್ಥಗಳಿಗೆ ಹೋಗಿ ತಿರುಗುವವರು,
ಬೆಣ್ಣೆ ಕೈಯೊಳಿದ್ದು ತುಪ್ಪಕಳುವ ರೀತಿ; ವಿಶ್ವ

ಬಂಡೆಗಲ್ಲು ತಂದು ಬಂಧಿಸುತ ಕಟ್ಟಲು,
ಲಿಂಗವೇನು ಕಳವು ಲಂಪಟಾಯ್ತೆ?
ಆತ್ಮಲಿಂಗವನ್ನು ಅರ್ಚಿಸದಿಹರೇಕೊ? ವಿಶ್ವ

ಜೀವ ಲಿಂಗ ಪೂಜೆ ಜನರು ಮಾಡುತಿರಲು,
ಶಿಲೆಯ ರೂಪ ಕುರಿತು ಚಿಂತೆಯುಂಟೆ?
ಸಿಹಿ ಮಧು ಸೇವಿಸಲು, ಕಹಿಯು ರುಚಿಸುವುದೆ? ವಿಶ್ವ

ಭೂಮಿಯೆಂದರೇನು? ಪೊಡವಿಯೆಂದರೇನು?
ಧರಣಿಯೆಂದರೇನು? ಪುರುಷರವರೇ !
ಇಷ್ಟು ಒಂದೆ ಇರಲು, ಇನ್ನು ಮತಗಳೇಕೆ? ವಿಶ್ವ

## ಗೃಹಸ್ಥನ ಬಾಳು

ತಾಯಿ ತಂದೆ ತಿಳಿಯೆ ಮೊದಲ ಗುರುವು,
ಪಾರ್ವತಿ ಭವರೆಲ್ಲ ಪರಮ ಗುರುವು
ಕೂಲಿ ಕೊಳ್ಳುವವನ ಗುರುವೆನಲು ದ್ರೋಹವು ವಿಶ್ವ

ತಾಯಿ ತಂದೆ ಹಿತರು ಬಂಧು ಬಳಗವೆಲ್ಲ,
ಒಳಿತು ಕೋರಿ ವರನ ಇರವ ನೋಡಿ,
ಕನ್ನೆ ಕೊಡುವರಷ್ಟೆ? ಭಾಗ್ಯ ಕೊಡಲರಿಯರು ವಿಶ್ವ

ಒಂದಾದ ದಂಪತಿ ಚಂದದ ಸಂಸಾರ,
ನಂದನನ ನಡೆನುಡಿ ನಂದಿನಿಯೊಳು;
ಸತಿಗಿತ್ತ ರಕ್ಷಣೆಯು ಸ್ವಂತಕ್ಕೆ ರಕ್ಷಣೆ ವಿಶ್ವ

ಹೆಂಡತಿಯೆನೆ ಆತ್ಮಕಾಣಾ!
ಹೆಂಡತಿಯೆನೆ ತಾಯಿ, ಕಾಣಾ ಅರಿತೊಡೆ ಮನದೊಳ್
ಹೆಂಡತಿ ತಾಯಿಯೆನಲಾರು?
ಕಂಡರಿಯಬೇಕಿದನೆ ತಪ್ಪದಂತೆ ವೇಮಾ,

ಪತ್ನಿ, ಪುತ್ರ, ಧನವ, ಪಡೆದು ತೊರೆಯದವನು,
ಮೋಹ ರಾಶಿಯೊಳಗೆ ಮುಳುಗುತಿಪ್ಪ;
ಮೋಕ್ಷ ಸೌಖ್ಯವೆಂತು ದೊರೆಯುವುದು? ವಿಶ್ವ

ಅಂದಗೇಡಿ ಹೆಣ್ಣ ತಂದು ಕೂಡೆ ಕೇಡು;
ಕೆಲಸವಿಲ್ಲದ ಪತಿಗೆ ಕೂಳು ಕೇಡು
ಕೆಲಸಗೇಡಿ ದಾಸಿಯ, ಕೂಲಿಯೆಲ್ಲ ಕೇಡು ವಿಶ್ವ

ಮಾತು ಕೇಳದ ಸತಿ, ತಾ ಮೃತ್ಯು ದೇವತೆ;
ಮಣಿ ಹೊತ್ತ ನಾಗಿಣಿ; ಗೃಹ ಪಿಶಾಚಿ;
ತನಗೊಲಿಯದ ಮಡದಿ ಕಡು ರಕ್ಕಸಿ ಜಗದಿ; ವಿಶ್ವ



## ಮಡದಿ ಮಕ್ಕಳು

ಗುಣವತಿಯಿರೆ ಯುವತಿ ಗೃಹವು ಚೊಕ್ಕಟಯ್ಯ;
ಬೀಳು ಮನೆಯ ದೀಪ ಬೆಳಗಿದಂತೆ
ದೇವಿಯಿಪ್ಪ ಗೃಹವು ದೇವಾಲಯವಯ್ಯ ವಿಶ್ವ

ಸುಗಣವಂತೆ ಕಾಂತೆ ಸುಮತಿಯಾಗಿರ್ದೊಡೆ,
ಮಿಗಿಲು ಬುದ್ಧಿವಂತ ಮಕ್ಕಳಿರಲು?
ಸ್ವರ್ಗವೇಕಯ್ಯ? ಸಂಸಾರ ಸಾಲದೆ? ವಿಶ್ವ

ಆಪತ್ತಿರುವಾಗ ನೋಡು, ಬಂಧುಭಾವ;
ಭಯದ ವೇಳೆ ನೋಡು, ಬಂಟ ಗುಣವ,
ಬಡತನ ಬಂದಾಗ, ಮಡದಿಯ ಗತಿ ನೋಡು ವಿಶ್ವ

ತುಪ್ಪವಿರದ ಊಟ ತೃಣದ ಪರಿಯ ಕಸವು;
ಸಾರುಯಿರದ ಊಟ ಶ್ವಾನ ಯೋಗ್ಯ
ಪ್ರೀತಿಯಿರದ ಊಟ ಪಿಂಡಕಿಟ್ಟ ಊಟ ವಿಶ್ವ

ಹಂದಿ ಈಯುತಿಹುದು ಹದಿನೈದು ಕುನ್ನಿ
ಆನೆ ಈಯ್ತು ಮರಿಯ ತಾನು ಒಂದೆ
ಉತ್ತಮ ಪುರುಷನಿರಲು ಓರ್ವ ಸಾಲನೇನು? ವಿಶ್ವ

ಉತ್ತಮರ ಉದರದಿ ಉಢಾಫೆ ಜನಿಸಿದೊಡೆ,
ಅವನು ಕೆಡಿಸುತಿಹನು ಅಖಿಲ ವಂಶ
ಕಬ್ಬು ತೆನೆಯು ಹುಟ್ಟಿ ಕೆಡಿಸದೆ ಸಿಹಿಯೆಲ್ಲ? ವಿಶ್ವ

ಅಡವಿಯೊಳಗೊಂದು ಒಣ ಗಿಡ
ಗಡನೆ ಉರಿ ಜನಿಸಿ, ವೃಕ್ಷರಾಶಿಯೆಲ್ಲ ಕಡುಗುಂ
ಕಡು ಪೆಸರಾಂತಿಹ ವಂಶವ
ಕೆಡಿಸುವನೋರ್ವನೆ ಚಂಡಾಲ ಪುಟ್ಟಿ, ವೇಮಾ

ಗೊಡ್ಡು ಹಸು ಹಿಂಡಲು ಗಡಿಗೆ ದೂರ ಬಿದ್ದು,
ಹಲ್ಲು ಮುರಿವ ಒದೆತ; ಹಾಲು ಇಲ್ಲ
ಲೋಭಿ ನರನ ಕೇಳೆ, ಲಾಭವೇನು ಇಲ್ಲ ವಿಶ್ವ

## ಕರ್ಮ–ಕರ್ಮಫಲ

ಬೇಕು ಎನಲು ಬರದು; ಬೇಡವೆನಲು ಬಿಡದು
ಪೂರ್ವ ಕರ್ಮಕಂಟಿ ಫಲವು ಉಂಟು
ಹೃದಯಲ್ಲಿ ದುಃಖ ಪಡದಿರುವುದೆ ಧರ್ಮ ವಿಶ್ವ

ಕರ್ಮ ಗುಣಗಳೆಲ್ಲ ಕಡೆಗಣಿಸಿ, ನಡೆದರೆ,
ತತ್ತ್ವವೆಂತು ತನಗೆ ತಗಲಿ ಇಹುದು?
ಎಣ್ಣೆ ಇರದೆ ದೀಪ ಎಳ್ಳಿನಿಂದುರಿವುದೆ? ವಿಶ್ವ

ನರಜನ್ಮವ ತಾನೆತ್ತಿಯು,
ಪರಮಾತ್ಮನನರಿಯದಿರಲು, ಪಾಪಾತ್ಮನಲಾ!
ಬರಿ ದುರಿತ ಕರ್ಮ ಗೆಯ್ದೊಡೆ,
ಮರಳಿ ಅಧೋಗತಿ ಪಡೆವನು, ಅರಿಯ್ಯೆ, ವೇಮಾ

ಕರ್ಮವು ಜ್ಞಾನಿಗೆ ದೂರವು;
ಕರ್ಮಗಳಿಗೆ ಜ್ಞಾನಿ ದೂರನಿಹ, ನಿಜವಿದು, ತಾ
ಕರ್ಮ ಜ್ಞಾನಗಳುಡುಗಿದ
ನಿರ್ಮಲನಿಗೆ ಉಂಟು ಮುಕ್ತಿ, ನಿಜವಿದು, ವೇಮಾ

ಪೂರ್ವ ಜನ್ಮದಲ್ಲಿ ಪುಣ್ಯಮಾಡದಿಪ್ಪ
ಪಾಪಿ ಹೊನ್ನಿಗಾಶೆ ಪಡುವುದೆಲ್ಲ
ಬಿತ್ತಲು ಮರೆತವನು, ಬೆಳೆಯನಾಶಿಪಂತೆ ವಿಶ್ವ

ಪಾಪವೇನು ಅನ್ಯ ಲೋಕದ ಫಲವಲ್ಲ;
ತನ್ನ ಪಾಪ ಕರ್ಮಕಂಟಿ ಗೈವ,
ಕರ್ಮ ಶುದ್ಧಿಗಿಂತ ಪಾಪ ತೊರೆಯೆ ಲೇಸು ವಿಶ್ವ

ಎಷ್ಟೋ ತಪವ ಗೆಯ್ಯೆ, ಎಷ್ಟೊ ವ್ರತವ ಮಾಡೆ,
ಎಷ್ಟೊ ಕಷ್ಟ ಪಡಲು ಏನು ಫಲವು?
ಕರ್ಮ ಫಲವೆ ಹೊರತು ಕಾಣಲಾರ ಮುಕ್ತಿ ವಿಶ್ವ



## ಜಾತಿ

ಜಾತಿಯಲ್ಲಿ ಯಾವ ಜಾತಿ ಮುಖ್ಯ ನೋಡು,
ತಿಳಿದುಕೊಳದೆ ತಿರುಗು–ತಿದ್ದರೇನು?
ತಿಳಿವು ಉಳ್ಳ ಮನುಜ ತಾನಾವ ಜಾತಿಯವ? ವಿಶ್ವ

ಯೋನಿಯಲ್ಲಿ ಹುಟ್ಟಿ ಉತ್ತಮ ಕುಲಜನಿರೆ,
ಬ್ರಹ್ಮ ಕುಲದ ಒಳಗೆ ಬದುಕಬೇಕು,
ಬ್ರಹ್ಮವರಿಯದಿರಲು ಬಿದ್ದು ಸತ್ತ ರೀತಿ. ವಿಶ್ವ

ಅಭಿಜಾತ್ಯನೆಂದು ಆಯುಷ್ಯದ ತನಕ
ತಿರುಗುತಿಪ್ಪ ಭ್ರಮಿಸಿ ತಾನರಿಯದೆ;
ಮುಸುರೆ ಭಾಂಡೆಯನ್ನು ಮುತ್ತುವ ನೊಣದಂತೆ ವಿಶ್ವ

ತಾಯಿ–ಹಡೆದ ತಾಯಿ, ತನ್ನ ತಾಯಿ, ಕಕ್ಕಿ,
ತಂದೆ–ಹಡೆದ ತಾಯಿ, ತಾತ–ತಾಯಿ,
ಎಲ್ಲ ಶೂದ್ರರಿರಲು, ಎಂತು ಬ್ರಾಹ್ಮಣನಿಹ? ವಿಶ್ವ

ಹೊಲೆಯ ಹೊಲೆಯನಲ್ಲ ಜಗದಿ ಜನುಮದಿಂದ,
ಮಾತು ಬದಲಿಸುವನೆ ಹೊಲೆಯ,
ಹೊಲೆಯರೆಂದು ನರರ ಕರೆಯುವವನೆ ಹೊಲೆಯ, ವಿಶ್ವ

ಉಚ್ಚಿಗೆ ದಾರಿಯಹ ತಾಣ,
ಕಚ್ಚಾಡಲು, ಜಗ ಹುಟ್ಟಿತು, ತಾತ ಸಮಯದೋಳ್,
ಹೆಚ್ಚಿನ ಕುಲಜರು ಆರ್ಯೆ?
ಮೆಚ್ಚುತ ಮನದಲಿ ತಿಳಿವುದೆ, ಮಾನ್ಯತೆ ವೇಮಾ.

ಜಪವ, ಬಾಹ್ಯ ಪೂಜೆ ಸಾಕಷ್ಟು ಮಾಡಿಯೂ
ಕಪಟವ ಬಿಡದಿರಲು ಕಷ್ಟ ಜನಕೆ,
ಮುಕ್ತಿ ಪಡೆದುಕೊಳದೆ ಮುಳುಗಿದರು ತಮದೊಳು, ವಿಶ್ವ

## ಮಡಿ–ಮೈಲಿಗೆ

ಮುಟ್ಟು ಮುಟ್ಟು ಎನುತ ಮುಟ್ಟಬೇಡೆನುವರು,
ಮುಟ್ಟಿಗೆ ಪಥವೇನು? ಮೂಲವೇನು?
ನವ ಬಿಲದಲಿ ಹೊಲೆಯು ನರರೆಲ್ಲರಿಗೂ
ಹುಟ್ಟಿನಲಿ ಹುಟ್ಟಿತು ಮುಟ್ಟು ವೇಮಾ

ಹೊಲೆಯನ ಮುಟ್ಟಿದೊಡನೆ ನೀರೊಳು ಮುಳುಗುವಿರಿ
ಮನುಜ ಪೂರ್ವ ಕರ್ಮದಿಂದ ಹೊಲೆಯ!
ಏಕೆ ತಿಳಿಯಲೊಲ್ಲರೀ ನರ ಪಶುಗಳಿದ! ವಿಶ್ವ

ಮಾದಿಗನ ಸ್ಪರ್ಶ; ನೀರು ಮುಳುಗುತಿಹನು,
ಮಸಣಕೊಯ್ಯೆ ಸುಡಲು ಮಾದಿಗನೇ.
ಆಗ ಅಂಟುವಂಟು ಈಗ ಎಲ್ಲಿ ಹೋಯ್ತೊ? ವಿಶ್ವ

ಮುಟ್ಟಿನೊಳಗೆ ಹುಟ್ಟಿ, ಮುಟ್ಟಿನೊಳಗೆ ಬೆಳೆದು,
ವ್ಯರ್ಥ ತೀರ್ಥ ಗೆಯ್ಯುವವರೆ ಒಟ್ಟು,
ಮುಟ್ಟು ನೀರಿನೊಳಗೆ ಮುಳುಗೆ ಹೋಗುವುದೇ? ವಿಶ್ವ

ಮುಟ್ಟಿನೊಳಗೆ ಹುಟ್ಟಿ ಮೂರು ಮೂರ್ತಿಗಳಾ
ಮುಟ್ಟು ರಕ್ತವಾಯ್ತು ಮೊದಲ ಪ್ರಕೃತಿ;
ಮುಟ್ಟಿನೊಳಿಹ ಗುಟ್ಟು ಮೂಲ ಗುರುವು ಅರಿವ. ವಿಶ್ವ

'ಮುಟ್ಟು' 'ಮುಟ್ಟು' ಎಂದು, ಮೂಲೆ ಹಿಡಿವುದೇಕೆ?
ಮುಟ್ಟಿನೊಳಗೆ ಹುಟ್ಟಿ, ಮೂಢ ಜನರು,
'ಮುಟ್ಟು' ಗುಟ್ಟು ತಿಳಿದು, ಮುಂಚೆ ಮೌನ ತಳೆದ ವಿಶ್ವ

ಹೊಲಸು ನವಬಿಲದಲ್ಲಿ ಹೊರಹೊರಡುತ್ತಲಿರೆ,
ಪರಮ ಪಾವನೆಂದು ಪೇಳಲೆಂತು?
ತೊಗಲು ಬೊಂಬೆಯಾಟ, ತಿಳಿಯದಲ್ಲ ಮರ್ಮ. ವಿಶ್ವ



## ಬ್ರಾಹ್ಮಣತ್ವ

ಬ್ರಾಹ್ಮಣರಿಗೆ ಸಕಲ ಭಾಗ್ಯ ನೀಡಬಹುದು,
ಗೌರವವೀಯಬಹುದು, ಕೂಡಬಹುದು,
ಜ್ಞಾನ ತಿಳಿಸಿ ಜನರ ಸೇರಿಸಲು ಆ ದಡಕೆ, ವಿಶ್ವ

ಬ್ರಾಹ್ಮಣನಿಗೆ ನಮಿಸೆ, ಬಹಳ ಹರಸುತಿರುವ
ಆತ್ಮ ಶುದ್ಧಿ ಹೊಂದಿ ಆತನಿರಲು,
ಹೊಂದದಿರಲು ಅವನು, ಹಾಳು ಕಂಠ ಶೋಷ, ವಿಶ್ವ

ದ್ವಿಜರ ಖೇದ ಪಡಿಸಿ ತೊಡಗಲು ನಿಂದೆಯಲಿ,
ಸಾವು ಹೊಂದಿ ತಾನು ಸಂಕಟ ಪಡುವ,
ಹಿಡಿವ ಯಮನ ದಾರಿ, ಕಡೆಯ ಸೇರಲಾರ, ವಿಶ್ವ

ಬ್ರಾಹ್ಮಣರಿಗೆ ಕೊಡಲು ಫಲವು ಉಂಟೆನುವರು,
ನಾಯಿಗಳಿಗೆ ಇಡಲು, ನಷ್ಟವೇನು?
ಇಲ್ಲಿ ಅಲ್ಲಿ ಶಿವನು ಏಕವಾಗಿ ಉಂಟು; ವಿಶ್ವ

ತನ್ನ ತಾಯಿ ವೇಶ್ಯೆ, ಮಡದಿ ಮಾದಿಗ ಕನ್ಯೆ
ಇರುವ ವಸಿಷ್ಠಮುನಿ ಗುರು ಶ್ರೀಪತಿಗೆ
ಅರಿತೊಡೆ, ತಪದಿಂದ ದ್ವಿಜ, ಜಾತಿಯೆಲ್ಲಿ? ವಿಶ್ವ

ಬ್ರಹ್ಮವೇತ್ತರೆಂದು ಬಿಮ್ಮದಿಂದಿಪ್ಪರು,
ಬ್ರಹ್ಮವೇನೊ? ಅದರ ಭಾವವೇನೊ?
ಬಿಳಿಪೊ? ಕೆಂಪೊ ಕಪ್ಪೊ? ತಿಳಿದಿದ್ದರೆ ಹೇಳು, ವಿಶ್ವ

ಓದಿದಾತಗಿಂತ ಒಗೆವ ಅಗಸ ಮೇಲು,
ಮನೆಯ ದೇವಿಗಿಂತ ಮಹಿಷ ಮೇಲು,
ಬ್ರಾಹ್ಮಣಾರ್ಯಗಿಂತ ಬಡವ ಹೊಲೆಯ ಮೇಲು, ವಿಶ್ವ

ಉಚ್ಚೆಯಲಿ ಪುಟ್ಟಿದ ತನುವು
ಹೆಚ್ಚೇನು? ಕೊಂದವರೇನು? ಸರಿಯಾಗಿ ತಿಳಿಯಲ್;
ಮಚ್ಚರವ ತೊಡೆದು, ಸತ್ಯವ
ಅಚ್ಚೊತ್ತಿದಂತೆ ನಿಲಿಸದವ ಬ್ರಹ್ಮ, ವೇಮಾ

## ಮನೋಶುದ್ಧಿ

ಕೇಳು ವಿವೇಕಂಬ ಕೊಡಲಿ ಕೈಲಿ ಹಿಡಿದು,
ಘನ ಅವಿದ್ಯೆಯೆಂಬ ಅಡವಿ ತರಿದು,
ತಿಳಿವು ಎಂಬ ಒಪ್ಪ ದೀಪ ಕೈಲಿ ಹಿಡಿದು,
ಮತಿಗಾಣಬಹುದು, ಚೊಕ್ಕ ವೇಮ.

ಅಜ್ಞಾನವೆ ಶೂದ್ರತ್ವವು ;
ಸುಜ್ಞಾನವೆ ಬ್ರಹ್ಮವೆನುವ ಶ್ರುತಿಗಳ ಕೇಳಾ,
ಅಜ್ಞಾನ ಹಿಂಗಿ, ವಾಲ್ಮೀಕಿ
ಸುಜ್ಞಾನವೆಂಬ ಬ್ರಹ್ಮವ ಹೊಂದಿದ ವೇಮಾ

ಮಾತನಾಲ್ಪನೊಂದು, ಮನಸಿನೊಳಗೆ ಒಂದು,
ಒಡಲು ಗುಣವದೊಂದು, ನಡತೆಯೊಂದು,
ಎಂತು ಬಹುದು ಮುಕ್ತಿ ? ಇಂತು ಇರಲು ತಾನು, ವಿಶ್ವ

ಆಶೆ ಬಿಡದೆ ಇರಲು ಪಾಶ ಮುಕ್ತನಲ್ಲ,
ಮುಕ್ತನಾದರೂನು ಮುನಿಯು ಅಲ್ಲ,
ಮುನಿಯು ಆದರೂನು ಮೋಹವ ಬಿಡಲಿಲ್ಲ, ವಿಶ್ವ

ಆಶೆಗಿಂತ ದುಃಖ ಅತಿಶಯವಾಗಿಲ್ಲ,
ಸಮೀಕ್ಷಿಸದೆ ಇರಲು ಸುಖವೆ ಇಲ್ಲ,
ಮನಸು ನಿಲಿಸದಿರಲು ಮತ್ತೆ ಮುಕ್ತಿಯಿಲ್ಲ, ವಿಶ್ವ

ಚಿತ್ತಶುದ್ಧಿ ಹೊಂದಿ ಗೈದ ಪುಣ್ಯ ಕಾರ್ಯ,
ಕೊಂಚವಾದರೇನು ಕ್ಷುಲ್ಲಕಲ್ಲ,
ಆಲದ ಮರವೆಷ್ಟು ? ಅದರ ಬೀಜವೆಷ್ಟು ? ವಿಶ್ವ

ದಾನ ಕೊಡುವದಕ್ಕಿಂತ ಧ್ಯಾನ ಮತ್ತೆ ಮೇಲು,
ಧ್ಯಾನ ಮಾಳ್ಪಕಿಂತ ಇರುವ ಅರಿವು ಮೇಲು,
ಅರಿವಿಗಿಂತ ಆಸೆ ತೊರೆಯುತಿಹುದೆ ಮೇಲು, ವಿಶ್ವ

ದೇಹಾಭಿಮಾನವಿರುತಿರೆ,
ಮೋಹಾದಿಯ ಬಿಡುವುದೆಂತು ಮುನಿಗಳೆ ಇರಲುಂ ?
ಸಾಹಸದಿಂದದ ಬಿಡುತಿರೆ,
ಸೋಹಂಮ್ಮೆಂಬುದನರಿಯುವೆ ಕಾಣಾ ವೇಮಾ.



## ಜೀವನದ ಸಾರ್ಥಕತೆ

ಮನದಿ ಹುಟ್ಟುತಿಹವು, ಮತ್ತೆ ಕೊರಿಕೆಗಳು ;
ಕೋರಿಕೆಯಲಿ ಮುಕ್ತಿ ಕುದರದಲ್ಲ !
ಮನವು ಬ್ರಹ್ಮವೆಂದು ಮನವ ತಿಳಿದುಕೊಳರು, ವಿಶ್ವ

ಮನಸೇ ಲೋಕಾಲೋಕವು,
ಮನಸೇ ತೋರೆದೊಡೆ ಮೆಚ್ಚು, ಅದು ಮಾಯೆ,
ಮನಸೇ ಮುಕ್ತಿಗೆ, ಭುಕ್ತಿಗೆ,
ಮನವನು ಬಿಡುತಿಹುದೆ ಮೇಲು, ವಿಶ್ವ

ನರಜನ್ಮವ ತಾನೆತ್ತಿಯು
ಪರಮಾತ್ಮನರಿಯದಿರಲು ಪಾಪಾತ್ಮನಲಾ,
ಬರಿ ದುರಿತ ಕರ್ಮ ಗೆಯ್ದೊಡೆ,
ಮರಳಿ ಅಧೋಗತಿ ಪಡೆವನು ಅರಿಯೈ ವೇಮಾ,

ಜನನ ಮರಣಗಳಿಗೆ ಸಲೆ ಸ್ವತಂತ್ರನಲ್ಲ,
ಮೊದಲು ಕರ್ತನಲ್ಲ, ತುದಿಗೂ ಅಲ್ಲ,
ನಡುವೆ ಕರ್ತನೆನಲು ನಗೆಪಾಟಲಲ್ಲವೇ ? ವಿಶ್ವ

ತನುವು ಅಸ್ಥಿರವೆಂದು, ಧನವು ಅಸ್ಥಿರವೆಂದು,
ತಿಳಿವು ಹೊಂದಿ ತನ್ನ ತಿಳಿದುಕೊಂಡು,
ಇರುವವನು ಯೋಗಿ ಪರಮಾತ್ಮನೇ ಕಾಣು, ವಿಶ್ವ

ಅರಿವಿನೊಳುದಿಸಿವೆ ತನುಗಳು,
ಬರಿ ಹೊಲಸಿನಲಿ ಕೊಳೆಯುವವು ಸಹಿಸುತಲದನೇ,
ಅರಿವಿಹ ತನುವನು ಹೊಂದಿರೆ,
ಮರುಜನ್ಮ ಬರುವುದು ಎಂತು ? ಮಹಿಯಲಿ ? ವೇಮಾ.

ಮಣ್ಣು ಗಡಿಗೆಯಂಥ ಮಾಯದೀ ಶರೀರ,
ಸಾವುದೇನೆ ಇರಲಿ, ಸಾಯದಾತ್ಮ ;
ಘಟಗಳೆಷ್ಟೆ ಇರಲಿ, ಗಗನ ಒಂದಲ್ಲವೇ ? ವಿಶ್ವ

ತನ್ನಯ ಒಳಗೇ ಸಕಲವು,
ತನುವೇ ತಾನೆಂದು ಅರಿತು ತಾರಕವಾತ್ಮಂ,
ತಾನೇಯೆಂದು ಪರಿಣಮಿಸಿರ್ಪ,
ಮನುಜರ್ಗೆ ಮುಕ್ತಿಯುಂಟೈ, ಮಹಿಯಲಿ, ವೇಮಾ,

## ಜೀವ–ಶಿವೈಕ್ಯ

ನಿಮಿಷವಾದರೂ ಮನ ನಿಲಿಸಿ ನಿರ್ಮಲಾಗಿ,
ಲಿಂಗ ಜೀವೇಶ್ವರ ಕಂಡು ಭಂಗ ಪಡದೆ,
ಪೂಜಿಸಿ ಮನದಲ್ಲಿ, ಸೇರುವುದು ಪೂರ್ಣ ಪದವಿ,
ಪರಮನ ಕೋರುತ ಇದ ಮಾಡಿ ಬೆಳಗು ವೇಮ !

ಆತ್ಮವ ತನ್ನೊಳು ಗಮನಿಸಿ, ಅನುದಿನವೂ
ನಿರ್ಗುಣಾತ್ಮಾರ್ಚನೆಯ ಗೆಯ್ದು, ನಿತ್ಯ ಅಮರ,
ಪ್ರತ್ಯಗಾತ್ಮನೊಳು ನೆನೆಯೆ ಪ್ರಬಲ ಯೋಗಿ,
ಸಚ್ಚಿದಾನಂದ ಪದದಲ್ಲಿ ಸತ್ಯ ವೇಮ.

ಸಗುಣವೆ ಲೋಕಗಳೆಲ್ಲವು,
ಸಗುಣಂ ತ್ರಿಮೂರ್ತಿ ತಿಳಿವೊಡೆ ಸಕಲ ಸುರೇಶ್ವರ್
ಸಗುಣವೆ ಜ್ಞಪ್ತಿಗೆ ಮೂಲವು,
ಸಗುಣವೆ ನಿರ್ಗುಣಕೆ ದಾರಿಯಪ್ಪುದು ವೇಮಾ !

ಬ್ರಹ್ಮ ತಿಳಿಯದಯ್ಯ ಭಾವಕಂಟಿ ಇರಲು,
ತನುವ ಗುಡಿಯ ಮಾಡಿ, ತನ್ನ ನಿಲಿಸಿ,
ಲೋಕ ಬುದ್ಧಿ ಬಿಟ್ಟು, ಒಳನೋಟದಿ ನೋಡು, ವಿಶ್ವ

ಬ್ರಹ್ಮಾಂಡವೆನಲುಬಹುದು ಈ ಶರೀರ,
ಪರ ಬ್ರಹ್ಮವರಿಯೊ, ಬ್ರಾಹ್ಮಣಿರಲು,
ತನ್ನ ಮನಸು ತಿಳಿಯೆ, ತಾನೆ ಹೋಗು ಬ್ರಹ್ಮ ವಿಶ್ವ

ಬ್ರಹ್ಮವೆನಲು ಬೇರೆ ಪರ ದೇಶದಿ ಇಲ್ಲ,
ಬ್ರಹ್ಮವೆನಲು ತಾನೆ ಬಟ್ಟ ಬಯಲು,
ತನ್ನ ತಾನರಿತೊಡೆ ತಾನೆ ಹೋಗು ಬ್ರಹ್ಮ, ವಿಶ್ವ

ಊರ್ಧ್ವ ಲೋಕದಲ್ಲಿ ಉಚಿತ ಕ್ರಮದಿಂದ,
ರೂಪವೇನು ಇರದ, ರೀತಿಯಲ್ಲಿ,
ಪರಮ ಯೋಗಿ ನೋಲ್ವ ಪರಮಾತ್ಮನಿರವನು, ವಿಶ್ವ

ಬಯಲು ಮಾಡಿ ಒಳಗೆ ಲಯಗೊಳಿಸಿ ಲೋಕವ,
ಕುಲವ ಸುಟ್ಟು ಹಾಕಿ ಗುಣವ ತೊರೆದು,
ಚಿಂತನದೊಳು ಚಿಂತನ ಸೇರಿದರೆ ಯೋಗಿಯಯ್ಯ, ವಿಶ್ವ



# 2
# ಹೇಮರಡ್ಡಿ ಮಲ್ಲಮ್ಮ

ಮಹಾಸಾಧ್ವಿ, ಪರಮ ಪತಿವ್ರತೆ, ದೇವಾಂಶ ಸಂಭೂತೆ, ಜಗತ್ತಿನ ಮಾತೆ, ಅನ್ನಪೂರ್ಣೇಶ್ವರಿ, ಶಿವಶರಣೆ, ಸಂಸಾರ ಯೋಗಿನಿ ಎಂಬೆಲ್ಲ ಬಿರುದುಗಳಿಂದ ಹೊಗಳಿಸಿಕೊಳ್ಳುತ್ತಿರುವ ಹೇಮರಡ್ಡಿ ಮಲ್ಲಮ್ಮ ರಡ್ಡಿ ಜನಾಂಗದ ಕುಲಮಾತೆ. "ಸ್ತ್ರೀ", ದೇವತೆ ಎಂದು ನಂಬಿರುವ ಭಾರತೀಯ ಸಂಸ್ಕೃತಿಗೆ ಆದರ್ಶವಾಗಿ ಬದುಕಿ ಭೌತಿಕವಾಗಿ ಕಣ್ಮರೆಯಾದರೂ ಸದಾ ನಮ್ಮೊಳಗೆ ಜಾಗೃತವಾಗಿರುವಂತವಳು. ಯಾವುದೇ ಸಾಹಿತ್ಯವನ್ನಾಗಲಿ, ಸಂಪ್ರದಾಯವನ್ನಾಗಲಿ, ಅಥವಾ ಶಿಷ್ಯ ಪರಂಪರೆಯನ್ನಾಗಲಿ ಸ್ಥಾಪಿಸದ ಹೇಮರಡ್ಡಿ ಮಲ್ಲಮ್ಮ ಜನಸಾಮಾನ್ಯರ ಹೃದಯದಲ್ಲಿ ಭಕ್ತಿಯ ಸ್ಪಂದನವಾಗಿ ಮಿಡಿಯುತ್ತಿದ್ದಾಳೆ. ಕರ್ನಾಟಕ, ತೆಲಂಗಾಣ ಮತ್ತು ಆಂಧ್ರರಾಜ್ಯಗಳಲ್ಲಿ ಪುರಾಣ ಮತ್ತು ನಾಟಕಗಳ ಮೂಲಕ ಪ್ರಸಿದ್ಧವಾಗಿರುವ ಈ ಮಹಾಮಾತೆಯ ಜೀವನ ಸಹನೆ, ತಾಳ್ಮೆ ಮತ್ತು ಕ್ಷಮಾಗುಣಕ್ಕೆ ಆದರ್ಶಪ್ರಾಯವಾದದ್ದು.

ಹೇಮರಡ್ಡಿ ಮಲ್ಲಮ್ಮನಂಥವರು ಭೂಮಿಯ ಮೇಲೆ ಉದಯಿಸಿರುವುದರಿಂದಲೇ, ಭಾರತೀಯ ಸಂಸ್ಕೃತಿಯ ಸಂಪತ್ತಿನ ಅಧಿದೇವತೆಯನ್ನಾಗಿ ಲಕ್ಷ್ಮೀಯನ್ನೂ ವಿದ್ಯೆಯ ಅಧಿದೇವತೆಯನ್ನಾಗಿ ಸರಸ್ವತಿಯನ್ನೂ, ಶಕ್ತಿಯ ಅಧಿದೇವತೆಯನ್ನಾಗಿ ಕಾಳಿಯನ್ನೂ ಪೂಜಿಸುತ್ತಿದೆ. ಪುರುಷ ಶ್ರೇಷ್ಠತೆಯ ಜೊತೆಗೆ ಪ್ರಕೃತಿಯೂ ಅಷ್ಟೇ ಶ್ರೇಷ್ಠ. ಅದು 'ಸ್ತ್ರೀ'ಯಲ್ಲಿ ಅವಿರ್ಭಾವವಾಗುವುದನ್ನು ಗಮನಿಸಿದ ರಾಮಕೃಷ್ಣ ಪರಮಹಂಸರು ತಮ್ಮ ಧರ್ಮಪತ್ನಿ ಶ್ರೀಮತಿ ಶಾರದಾ ದೇವಿಯನ್ನು ಸಾಕ್ಷಾತ್ ಆದಿಶಕ್ತಿಯ ಪೀಠದಲ್ಲಿ ಕುಳ್ಳಿರಿಸಿ ಪೂಜೆ ಮಾಡಿದ್ದು ಮಾನವ ಇತಿಹಾಸದ ಅವಿಸ್ಮರಣೀಯ ಘಟನೆ.

ಭಾರತೀಯ ಋಷಿ ಪರಂಪರೆಯನ್ನು ಸಮಗ್ರವಾಗಿ ಕ್ರೋಢೀಕರಿಸಿ; ಪರಮ ಸತ್ಯದ ಸ್ಪಂದನದಿಂದ ಕಂಪಿಸುವ ಅಖಂಡ ಭಾರತದ ಕಲ್ಪನೆಯನ್ನು ಕಂಡು, ಮಾನವ ಜನಾಂಗಕ್ಕೆ ಪ್ರಪ್ರಥಮದಲ್ಲಿ ನೀತಿ ಶಾಸ್ತ್ರವನ್ನು ಒದಗಿಸಿದ ಆಚಾರ್ಯ ಚಾಣಕ್ಯ ಸ್ತ್ರೀಯರ ಜೊತೆ ಮಾತನಾಡುವ ಸಂದರ್ಭ ಬಂದಾಗಲೆಲ್ಲ "ದೇವಿ" ಎಂದೇ ಸಂಭೋದಿಸುತ್ತಿದ್ದ. ಈ ಮಣ್ಣಿನ ಕಣಕಣದಲ್ಲೂ ತಾಯ್ತನದ ಸ್ಪಂದನ ಇರುವುದರಿಂದ ಈ ದೇಶವನ್ನು "ಮಾ ಭಾರತಿ" ಎಂದು ಉಚ್ಚರಿಸುತ್ತಿದ್ದ. ಇದಕ್ಕೆಲ್ಲ ಕಾರಣ ಸ್ತ್ರೀಯರಲ್ಲಿರುವ ದೈವೀ ಭಾವ. ಇದಕ್ಕೆ ಆದರ್ಶವಾಗಿದ್ದವಳು ಹೇಮರಡ್ಡಿ ಮಲ್ಲಮ್ಮ.

## ಜನನ ಮತ್ತು ಕಾಲ

ಹೇಮರಡ್ಡಿ ಮಲ್ಲಮ್ಮನಂತಹ ಮಹಾತ್ಮರು, ಯೋಗಿಗಳು, ದಾರ್ಶನಿಕರು ಜನನ–ಮರಣಗಳನ್ನು ಮೀರಿರುವವರು. ನಿಜವಾದ 'ನಾ' ನುವಿಗೆ ಜನನ ಮರಣಗಳಿಲ್ಲ ಎಂಬುದನ್ನು ಅರಿತವರು. ಆದ್ದರಿಂದಲೇ ಜನಮಾನಸದಲ್ಲಿ ಸದಾ ವಿಜೃಂಭಿಸುತ್ತಿರುತ್ತಾರೆ. ಸಾಮಾನ್ಯರು ಸತ್ತನಂತರ ಅವರ ಹೆಸರನ್ನು ಬರೆಯುವಾಗ "ದಿವಂಗತ" (ಸತ್ತವರು) ಎಂದು ಆರಂಭಿಸುತ್ತಾರೆ. ಆದರೆ, ಮಹಾತ್ಮರು, ಯೋಗಿಗಳು, ದಾರ್ಶನಿಕರ ಹೆಸರನ್ನು ಬರೆಯುವಾಗ 'ಪೂಜ್ಯರು' ಎಂಬ ಶಬ್ದದಿಂದ ಆರಂಭಿಸುತ್ತಾರೆ. ಕಾರಣ ಅವರೆಲ್ಲ ಜನನ–ಮರಣಗಳ ಚಕ್ರವನ್ನು ಮೀರಿರುವವರು. ಮಾನವ ಜನಾಂಗವು ಈ ಭೂಮಿಯ ಮೇಲೆ ಇರುವವರೆಗೆ ಅವರ ಹೆಸರು ವಿರಾಜಿಸುತ್ತಿರುತ್ತದೆ. ಅಂತಹ ಕೆಲವೇ ಕೆಲವು ಮಹಾತ್ಮರುಗಳಲ್ಲಿ ಹೇಮರಡ್ಡಿ ಮಲ್ಲಮ್ಮಳೂ ಒಬ್ಬಳು.

ವಾಸ್ತವದಲ್ಲಿ ಹುಟ್ಟು–ಸಾವು ಎನ್ನುವುದು ಇಲ್ಲವೇ ಇಲ್ಲ. ಇದೊಂದು ಮಾನವನ ಕಲ್ಪನೆಯಷ್ಟೇ. ಇಲ್ಲಿರುವುದು ಅವ್ಯಕ್ತ ಮತ್ತು ವ್ಯಕ್ತಗಳಷ್ಟೇ. ಆಲದ ಮರದ ಬೀಜ ಒಂದು ಜೋಳದ ಕಾಳಿಗಿಂತಲೂ ಅತ್ಯಂತ ಚಿಕ್ಕದಾಗಿರುತ್ತದೆ. ಆದರೆ ಅದರಲ್ಲಿ ನೂರಾರು ಮೀಟರ್ ಎತ್ತರ, ಸಾವಿರಾರು ಮೀಟರ್ ವಿಸ್ತಾರವಾಗಿ ಬೆಳೆಯುವ ಅವ್ಯಕ್ತವಾದ ಆಲದ ಮರವಿರುತ್ತದೆ. ವ್ಯಕ್ತ ಬೀಜ ಭೂಮಿಯ ಗರ್ಭವನ್ನು ಸೇರಿದಾಗ, ಅವ್ಯಕ್ತ ಮರ ಸಸಿಯಾಗಿ ಪ್ರಕಟವಾದಾಗ, ಬೀಜ ಆ ಸಸಿಯಲ್ಲಿ ಲಯವಾಗಿರುತ್ತದೆ. ಬೀಜ ಸಸಿಯಾಗಿ, ಸಸಿ ಗಿಡವಾಗಿ, ಗಿಡ ಮರವಾಗಿ, ಹೂವಾಗಿ, ಕಾಯಿಯಾಗಿ, ಹಣ್ಣಾಗಿ ಮತ್ತೆ ಬೀಜವಾಗಿ ತನ್ನ ಯಾತ್ರೆಯನ್ನು ಮುಂದುವರೆಸುತ್ತದೆ. ಇದರಲ್ಲಿ ಯಾವುದು ಹುಟ್ಟು? ಯಾವುದು ಸಾವು? ಇರುವುದು ನಿರಂತರವಾಗಿ ಪರಿವರ್ತನೆಯಾಗುತ್ತಿರುವ ಪ್ರಕೃತಿಯಲ್ಲವೇ?

ಪ್ರಕೃತಿಯ ಈ ಮೂಲ ಸತ್ಯವನ್ನು ಅರಿಯುವುದೇ ಪಾರಮಾರ್ಥ, ಆತ್ಮಜ್ಞಾನ ಮತ್ತು ಧರ್ಮ. ಈ ಪರಮ ಸತ್ಯದ ಅನುಸಂಧಾನದಲ್ಲಿರುವ ಮಾನವ ಜೀವಿಗಳಿಗೆ ತಮ್ಮ ದೇಹ ಸಹಿತ ತಮಗೆ ತೋರುವ ಸಮಸ್ತ ಪ್ರಪಂಚವು ಅಶಾಶ್ವತವಾದದ್ದು, ಅಸ್ಥಿರವಾದದ್ದು ಎನ್ನುವ ಅರಿವಾಗುತ್ತದೆ. ಪ್ರಕೃತಿಯ ವಿಲಾಸದಿಂದ ತೋರುವ ಈ ಶರೀರ ನಾನಲ್ಲ, ನನ್ನದಲ್ಲ. ಇದು ತನ್ನಷ್ಟಕ್ಕೆ ತಾನೇ ತೋರಿ ಅಡಗುವ ಪರಮ ಸತ್ಯದ ಮೂಲವನ್ನರಿಯುವ ಸಾಧನವೆನ್ನುವುದು ದೃಢವಾಗುತ್ತದೆ. ಆಗ ದೇಹ ಸಹಿತ ಸುತ್ತಲಿನ ಪ್ರಪಂಚದ ಆಗು ಹೋಗುಗಳಿಗೆ ನಾನು ಕಾರಣವಲ್ಲ. ಅವುಗಳು ತಮ್ಮಷ್ಟಕ್ಕೆ ತಾವೇ ನಡೆಯುತ್ತಿವೆ. ಈ ಆಗು ಹೋಗುವ ಕ್ರಿಯೆಗಳನ್ನು ನೋಡುವವನು, 'ನಾ'ನು, ಅರಿಯುವವನು 'ನಾ'ನು; ಇಲ್ಲಿ ಹುಟ್ಟು ಸಾವುಗಳಿಲ್ಲ, ಎನ್ನುವುದು



ಅಂತರಾತ್ಮದಲ್ಲಿ ಸ್ಥಿರವಾಗುತ್ತದೆ. ಇದನ್ನೇ "ಸಾಕ್ಷಿ" ಯಾಗಿರುವಿಕೆ ಎಂದು ವೇದಾಂತ ಹೇಳುತ್ತದೆ. ಇದನ್ನೇ ಬುದ್ಧ "ನಿರ್ವಾಣ" ಎಂದ, ಶಂಕರ "ಮುಕ್ತಿ" ಎಂದ, ಮಹಮ್ಮದ "ಅಲ್ಲಾ" ಎಂದ, ಜೀಸಸ್ "ಯಹೋವಾ" ಎಂದ, ಅಲ್ಲಮ "ಬಯಲು" ಎಂದ, ಸೂಫಿಗಳು "ಅನಲ್‌ಹಕ್" ಎಂದರು, ಮಹಾಯೋಗಿ ವೇಮನ "ಅಚಲ" ಎಂದ. ಇವರೆಲ್ಲರ ತತ್ವ–ಸಿದ್ಧಾಂತಗಳನ್ನು ತನ್ನ ನಿತ್ಯ ಜೀವನದಲ್ಲಿ ಅಳವಡಿಸಿಕೊಂಡು ಸರಳವಾಗಿ ಸಹಜವಾಗಿ ಸಂಸಾರದಲ್ಲಿದ್ದವಳು ಹೇಮರಡ್ಡಿ ಮಲ್ಲಮ್ಮ. ಸಂಸಾರದ ಕಡು ಕಷ್ಟಗಳನ್ನು ನುಂಗಿ ಸರ್ವರಿಗೂ ಸದಾ ಒಳಿತನ್ನೇ ಬಯಸಿ ಸೇವೆ ಮಾಡಿದವಳು. ಕ್ಷಮಾಗುಣದ ಸಾಕಾರ ಮೂರ್ತಿ.

ಇಂತಹ ಸಂಸಾರ ಯೋಗಿನಿಯು ದೇಹ ಸಹಿತ ತೋರಿದ್ದು ಇಂದಿನ ಆಂಧ್ರಪ್ರದೇಶದ ಶ್ರೀಶೈಲದ ಹತ್ತಿರದ ರಾಮಾಪೂರ ಗ್ರಾಮದಲ್ಲಿ ಎಂದು ಹಲವಾರು ಸಂಶೋಧಕರು ಉಲ್ಲೇಖಿಸಿದ್ದಾರೆ. "ಶಿವಶರಣೆ ಹೇಮರಡ್ಡಿ ಮಲ್ಲಮ್ಮ" ಎಂಬ ಸಂಶೋಧನಾ ಪ್ರಬಂಧದಲ್ಲಿ ಶ್ರೀಮತಿ ಡಾ. ಸುಮಂಗಲಾ ಎನ್.ರಡ್ಡಿ ಅವರು ಹೇಮರಡ್ಡಿ ಮಲ್ಲಮ್ಮಳ ಜನನ ಆಂಧ್ರಪ್ರದೇಶದ ಶ್ರೀಶೈಲದ ದಕ್ಷಿಣಕ್ಕಿರುವ ಕರ್ನೂಲ್ ಜಿಲ್ಲೆಯ ಆತ್ಮಕೂರ ತಾಲೂಕಿನ "ರಾಮಾಪುರವೆಂದು" ಉಲ್ಲೇಖಿಸಿದ್ದಾರೆ. ಈಗ ಆ ಊರು ಹಾಳು ಬಿದ್ದಿದ್ದು ಆ ಸ್ಥಳ ತೋಟವಾಗಿ ಮಾರ್ಪಟ್ಟಿದೆ ಎಂದಿದ್ದಾರೆ. ಪ್ರೊ. ಎಸ್.ಎಸ್.ಪಾಟೀಲರವರ ಅಭಿಪ್ರಾಯದಂತೆ ಹೇಮರಡ್ಡಿ ಮಲ್ಲಮ್ಮಳ ಜನನ ಕ್ರಿ.ಶ. 1422. ಕರ್ನಾಟಕ ಸರಕಾರವು ಪ್ರತಿವರ್ಷ ಮೇ ತಿಂಗಳ 10ನೇ ತಾರೀಖಿನಂದು ಹೇಮರಡ್ಡಿ ಮಲ್ಲಮ್ಮಳ ಜಯಂತ್ಯುತ್ಸವವನ್ನು ಆಚರಿಸಲಾರಂಭಿಸಿದೆ.

ನಿಖರವಾದ ದಿನಾಂಕ ಉಲ್ಲೇಖವಾಗದಿದ್ದರೂ ರಡ್ಡಿ ರಾಜ ಮನೆತನದ ಯುವ ರಾಜ ವೇಮನರ ಜ್ಞಾನೋದಯಕ್ಕೆ ಕಾರಣವೆಂದು ನಂಬಲಾಗಿರುವುದರಿಂದ, ರಡ್ಡಿ ರಾಜರ ಆಳ್ವಿಕೆ ನಡೆದದ್ದು ಕ್ರಿ.ಶ. 15ನೆಯ ಶತಮಾನದಲ್ಲಿ, ತೆಲುಗು ಭಾಷಿಕರ ನಾಡಿನಲ್ಲಿ. ಆದ್ದರಿಂದ ಹೇಮರಡ್ಡಿ ಮಲ್ಲಮ್ಮಳ ಕಾಲ ಕ್ರಿ.ಶ. 15ನೇ ಶತಮಾನ ಮತ್ತು ತೆಲುಗು ನಾಡಿನಲ್ಲಿ ಅನ್ನುವುದಂತೂ ನಿರ್ವಿವಾದವಾದದ್ದು.

## ಕೌಟುಂಬಿಕ ಹಿನ್ನೆಲೆ

ಇಲ್ಲಿಯವರೆಗೆ ದೊರೆತಿರುವ ಸಾಹಿತ್ಯದಲ್ಲಿ ಉಲ್ಲೇಖವಾಗಿರುವಂತೆ ಹೇಮರಡ್ಡಿ ಮಲ್ಲಮ್ಮ ನಾಗರಡ್ಡಿ–ಗೌರಮ್ಮ ದಂಪತಿಗಳ ಮಗಳು. ಊರು ಆತ್ಮಕೂರದ ಹತ್ತಿರವಿರುವ "ರಾಮಾಪೂರ". ಶ್ರೀಶೈಲ ಚನ್ನಮಲ್ಲಿಕಾರ್ಜುನನ ಭಕ್ತರಾದ ಈ ಕುಟುಂಬದ ಮೂಲ ವೃತ್ತಿ ಕೃಷಿ ಮತ್ತು ಗೋವುಗಳ ಸಾಕಾಣಿಕೆ. ಮಕ್ಕಳಿಲ್ಲದ ನಾಗರಡ್ಡಿ – ಗೌರಮ್ಮಳ ಭಕ್ತಿ ಮತ್ತು ಸೇವೆಗೆ ಮೆಚ್ಚಿದ ಚನ್ನಮಲ್ಲಿಕಾರ್ಜುನ ಹೆಣ್ಣು ಮಗುವನ್ನು ಕರುಣಿಸಿದ್ದರಿಂದ "ಮಲ್ಲಮ್ಮ" ಎಂದು ನಾಮಕರಣ ಮಾಡಿದರೆಂದು ಪುರಾಣಕಾರರು ಹೇಳಿದ್ದರಿಂದ, ಅದನ್ನೇ ನಂಬಲಾಗಿದೆ.

ಆದರೆ, ಈ ನಂಬಿಕೆಯಲ್ಲಿ ಹಲವಾರು ಸಂಶಯಗಳಿವೆ. ರಡ್ಡಿ ರಾಜ ಮನೆತನವಿದ್ದದ್ದು ಇಂದಿನ ಆಂಧ್ರಪ್ರದೇಶ ರಾಜ್ಯದ ಗುಂಟೂರು ಜಿಲ್ಲೆಯ ಕೊಂಡವೀಡುವಿನಲ್ಲಿ. ಜನಪದರು ನಂಬಿರುವಂತೆ ಹೇಮರಡ್ಡಿ ಮಲ್ಲಮ್ಮಳ ಊರು ಕರ್ನೂಲ ಜಿಲ್ಲೆಯ ರಾಮಾಪೂರ. ಎರಡೂ ಸ್ಥಳಗಳ ಅಂತರ ಸುಮಾರು 200 ಕಿ.ಮೀ. ಹಾಗೂ ಕುಮಾರಗಿರಿರಡ್ಡಿಯವರದು ರಾಜ ಮನೆತನ, ನಾಗರಡ್ಡಿಯವರದು ಕೃಷಿಯನ್ನೇ ನಂಬಿರುವ ಸಾಮಾನ್ಯ ಮನೆತನ; ಇಂತವರ ನಡುವೆ ಸಂಬಂಧವೇರ್ಪಡುವುದು ಸಾಧ್ಯವೇ? ನಾಟಕಗಳಲ್ಲಿ, ಪುರಾಣಗಳಲ್ಲಿ ಪಾತ್ರವನ್ನು ಸೃಷ್ಟಿಸಿದಂತೆ; ಒಂದು ರಾಜ ಮನೆತನದ ಸೊಸೆ ಆಕಳು ಕಾಯುವುದನ್ನು, ಅವುಗಳ ಸೆಗಣಿಯಿಂದ ಕುಳ್ಳುಗಳನ್ನು ಬಡಿದು ಜೀವನ ಸಾಗಿಸುವುದು ನಂಬಲರ್ಹವಾದುದೇ?

ಆದರೆ, ಹೇಮರಡ್ಡಿ ಮಲ್ಲಮ್ಮ ಎಂಬ ವ್ಯಕ್ತಿತ್ವವನ್ನು ಆಧಾರವಾಗಿಟ್ಟುಕೊಂಡು ಸೃಷ್ಟಿಸಿರುವ ಪುರಾಣಗಳು, ನಾಟಕಗಳು, ಜನಪದ ಹಾಡುಗಳು ಆ ಕಾಲದ ಜನಸಮುದಾಯದ ಮೇಲೆ ತೀವ್ರ ಪ್ರಭಾವವನ್ನು ಬೀರಿರುವುದಂತು ಸತ್ಯ.

ಸಮಾಜದಲ್ಲಿ ಶಾಂತಿ, ಸಹನೆ, ತಾಳ್ಮೆ, ತ್ಯಾಗ ಮತ್ತು ಸೇವಾ ಭಾವನೆಯನ್ನು ಸೃಷ್ಟಿಸಲು ಜ್ಞಾನಿಗಳು **"ಪುರಾಣ"** ವೆಂಬ ಸಾಹಿತ್ಯವನ್ನು ರಚಿಸಿದರು. ಇವುಗಳನ್ನೇ ಆಧರಿಸಿ ನಾಟಕಗಳನ್ನು ತಯಾರಿಸಿದರು. ಇಲ್ಲಿ ಮಹತ್ವವಾದದ್ದು ಸಮಾಜಕ್ಕೆ ಕೊಡಬಹುದಾದ ಸಂದೇಶವೇ ವಿನಃ ಅಲ್ಲಿರುವ ವ್ಯಕ್ತಿಗಳ ಭೌತಿಕ ಹಿನ್ನೆಲೆಯಲ್ಲ. ಈ ಕಾರ್ಯಕ್ಕೆ ಬುದ್ಧಿವಂತರು ಹೇಮರಡ್ಡಿ ಮಲ್ಲಮ್ಮಳ ವ್ಯಕ್ತಿತ್ವವನ್ನು ಸಮರ್ಥವಾಗಿ ಬಳಸಿಕೊಂಡರು.

ಜನಪದ ಹಾಡುಗಾರರು ಹೇಮರಡ್ಡಿ ಮಲ್ಲಮ್ಮಳ ವ್ಯಕ್ತಿತ್ವವನ್ನು ಆಧಾರವಾಗಿಟ್ಟುಕೊಂಡು ಹಲವಾರು ಭಕ್ತಿಯ, ನೀತಿಯ ಹಾಗೂ ಮುಕ್ತಿಗೆ ಮಾರ್ಗ ತೋರಿಸುವ ಹಲವಾರು ಜನಪದ ಹಾಡುಗಳನ್ನು ಸೃಷ್ಟಿಸಿದರು.

1) ಮಂಗಲ ಬೇಡುವೆವು ನಾವು
ಆನಂದದಲಿ
ಮಂಗಲ ಪಾಡುವೆವು ನಾವು
ಆನಂದದಲಿ

ಹೇಮರಡ್ಡಿಯ ಸೊಸೆಗೆ
ಭರಮರಡ್ಡಿಯ ಹೆಂಡತಿಗೆ
ಮಲ್ಲಿಕಾರ್ಜುನನ ಮಗಳು
ಮಲ್ಲಾಂಬಿಕಾ ದೇವಿಗೆ



ಸಗಣಿಯ ರಾಶಿಯನ್ನೇ
ಬಂಗಾರವ ಮಾಡಿ
ಬಂಗಾರದ ಗುಡಿ ಕಟ್ಟಿ
ಮಲ್ಲಿಕಾರ್ಜುನನ ಮೆರೆಸಿದ ತಾಯೆ

2) ಹೇಮರಡ್ಡಿ ಮಲ್ಲಮ್ಮ
ರಡ್ಡಿ ಕುಲಧರ್ಮ ಉದ್ಧಾರ ಮಾಡಿದೆಯಮ್ಮಾ ॥ಪ॥
ನಿನ್ನ ಭಕ್ತಿ ಭಾಗ್ಯದ ನೇಮ
ಮಲ್ಲಯ್ಯನ ಕಟ್ಟಿದ ಪ್ರೇಮ
ಶ್ರೇಷ್ಠವಾಗಿ ತೋರುವುದು ರಡ್ಡಿ ಕುಲಧರ್ಮ
ಶ್ರೀಶೈಲ ನಿನಗಾಗಿದೆ ಕಾಯವು ॥ಅ.ಪ॥

ನಿನ್ನ ಕಷ್ಟ ದುಃಖ ಹೇಳಲಾರೆನಮ್ಮಾ
ಗಂಡನ ಮೇಲೆ ಪ್ರೇಮ
ಹೊತ್ತಿಗಂಬಲಿ ಸಿಗಲಿಲ್ಲವಮ್ಮಾ
ಮಣ್ಣು ಪಾತ್ರೆ ಮಜ್ಜಿಗೆ ನೇಮ
ಮಲ್ಲಯ್ಯಗ ಪಾಲಗಾರನಮ್ಮ
ಉಂಡು ಹೋದ ಉಳಿಲಿಲ್ಲವಮ್ಮ । ॥1॥

ನೀ ಬೀಸುದು ನೇಮ ದಿನ ದಿನ ಕಾಯಮ್ಮ
ಕೈಯಲ್ಲಿ ಗುರುಳೆಮ್ಮ
ಬೀಸಿ ಹೋದ ಭಕ್ತಳಮ್ಮ
ಭಕ್ತಿಗೊಲಿದು ಬಂದನು ಜಂಗಮ
ಭಿಕ್ಷೆ ಬೇಡಿ ನಿಂತ ನೋಡಮ್ಮ
ಬಿಡದ ನುಚ್ಚ ನೇಗವರಮ್ಮ ॥2॥

ನಿನ್ನ ಮೂಗುತಿ ಮರ್ಮ
ತಿಳಿಲಿಲ್ಲ ವೇಮ ಬೇಡಿ ಒಯ್ದನಮ್ಮ
ಶಿಶುನಾಳ ಊರು ಗ್ರಾಮ
ಗುರು ಗೋವಿಂದನ ನಾಮ
ಆತನ ಪಾದ ಸೇವೆ
ನೆಂಬಿ ನಾನು ಮಾಡಿದೆನಮ್ಮ ॥3॥

3) ಶರಣೆಂಬೆ ಶಿವಶರಣೆ ಹೇಮರಡ್ಡಿ ಮಲ್ಲಮ್ಮ
ಕರುಣಿಸಿ ಕಾಪಾಡು ವರ ನೀಡಿ ನಮ್ಮಮ್ಮ ॥ಪ॥

ಮಲ್ಲಿಕಾರ್ಜುನನ ವರ ಪುತ್ರಿ ಧರಣಿಯಲಿ
ಬಾಲ್ಯದಲಿ ಭಕ್ತಿನ ಸುಜ್ಞಾನಿ ಪೂರ್ಣೆ
ಮಲ್ಲಿನಾಥನ ಧ್ಯಾನ ನಿತ್ಯಕಾಯಕದಲ್ಲಿ
ಸಲ್ಲಿಸುತ್ತ ಇಹದಲ್ಲಿ ಮಹಾಗುಣ ಸಂಪನ್ನೆ ॥1॥

ಹುಚ್ಚಗಂಡನ ಪಡೆದು ಸಹಿಸುತ್ತ ಕಡುಕಷ್ಟ
ಅಚ್ಚ ಗಂಡನ ಪಡೆದು ಲೋಕದಿ ಪ್ರಖ್ಯಾತೆ
ಗೋವುಗಳ ಕಾಯ್ದು ಪ್ರಾಣಿದಯಾಮಯಿ
ಕಾನನದಿ ಶಿವಪೂಜೆ ಪರಮ ಪವಿತ್ರೆ ॥2॥

ಅತ್ತೆ ನಾದಿನಿಕಾಟ ಅನುದಿಸಿ ಅತೀನಿಂದೆ
ತೊತ್ತಾಗಿ ನಡೆದು ಶಾಂತಿ ಖನಿಯಾದೆ
ದಾನಧರ್ಮದಲ್ಲಿ ಸತ್ಯ ನಿತ್ಯಾನಂದ
ಘನಪರ ಜೀವನ ಸದ್ಗತಿ ಗೊಲಿದೆ ॥3॥

ಮೈದುನ ವೇಮನು ಗುಣಹೀನನಾಗಿರಲು
ಅಡಿಗಡಿಗೆ ಭೋಧಿಸಿ ದಾರ್ಶನಿಕಳಾದೆ
ಗುರು ನೀನಾಗಿ ವೇಮನ ಕೀರ್ತಿಗೆ
ವರಯೋಗಿಯಾಗಲು ಕಾರಣಳಾದೆ ॥4॥

4) ಗುರುವಿನ ಮಠದಾಗ ತಿರುಗಿ ಬಂದವರ್‍ಯಾರ
ಗುರುವಿನ ತಾಯಿ ಗುರುತಾಯಿ ಮಲ್ಲಮ್ಮ
ಹೇಮರಡ್ಡ್ಯಾರ ಸೊಸಿಯ ।ಪಪ॥

ಹೇಮರಡ್ಡ್ಯಾರ ಸೊಸೆಯು ಸೋಮನಾಥನ ಮಗಳು
ಮಲ್ಲಿಕಾರ್ಜುನನ ಶಿಶುಮಗಳು ಮಲ್ಲಮ್ಮ
ಹೇಮರಡ್ಡ್ಯಾರ ಸೊಸಿಯ ॥1॥



ಮಲ್ಲಮ್ಮನ ಪಾಲಿಗೆ ಏಳುಗಳಿಗೆಯ ಜ್ವಾಳ
ಬಡಬಗ್ಗರಿಗೆ ಹಂಚಿ ತಿನ್ನುವಳು ಮಲ್ಲಮ್ಮ
ಹೇಮರಡ್ಡ್ಯಾರ ಸೊಸಿಯ ॥2॥

ಮಲ್ಲಮ್ಮನ ಭಕುತಿಗೆ ಬೀಸೋನೊ ಮಲ್ಲಯ್ಯ
(ಒಂದು)ಗಳಿಗ್ಯಾನ ಜ್ವಾಳಾ ತೀರಸ್ಯಾನೋ ಮಲ್ಲಯ್ಯ
ಹೇಮರಡ್ಡ್ಯಾರ ಸೊಸಿಯ ॥3॥

ದಟ್ಟ ಅರಣ್ಯದಾಗ ಯಾರಿಲ್ಲ ಜನ
ಆಕಳ ಕಾಯುದಕ ಹೋಗ್ಯಾಳು ಮಲ್ಲಮ್ಮ
ಹೇಮರಡ್ಡ್ಯಾರ ಸೊಸಿಯ ॥4॥

ಆಕಳ ಕಾಯುದಕ ಹೋಗ್ಯಾಳೊ ಮಲ್ಮಮ್ಮ
ಗೋಪಾಲನಾಗಿ ಕಾಯ್ದಾನೊ ಮಲ್ಲಯ್ಯಾ
ಹೇಮರಡ್ಡ್ಯಾರ ಸೊಸಿಯ ॥5॥

ಗುಡ್ಡಗಂವ್ವಾರದಾಗ ಗುಗ್ಗಳದನಾಕ ಜೋರ
ಅಲ್ಲೆ ಮಲ್ಲಯ್ಯನ ಶಿಶುಪೂಜೆ ಮಲ್ಲಮ್ಮ
ಹೇಮರಡ್ಡ್ಯಾರ ಸೊಸಿಯ ॥6॥

ಬಸಮ್ಮ ಮಲ್ಲಮ್ಮ ಹೊತ್ತಿದಂಬಲಿಕಾಸಿ
ಉತ್ತಮ ಶಿವಗ ಎಡಿಮಾಡಿ ಮಲ್ಲಮ್ಮ
ಹೇಮರಡ್ಡ್ಯಾರ ಸೊಸಿಯ ॥7॥

ಉತ್ತಮ ಆ ಶಿವನೆ ಎಡಿ ಹಿಡಿದ ಬೇಡಿಕೊಂಡ
ಮುತ್ತೈದಿತನವ ಬೇಡ್ಯಾಳೋ ಮಲ್ಲಮ್ಮ
ಹೇಮರಡ್ಡ್ಯಾರ ಸೊಸಿಯ ॥8॥

ಈ ರೀತಿಯ ಜನಪದ ಹಾಡುಗಳಲ್ಲಿ ಹೇಮರಡ್ಡಿ ಮಲ್ಲಮ್ಮ ಆದರ್ಶ ಗೃಹಣಿಯಾಗಿ, ದೈವೀ ಶಕ್ತಿಯಾಗಿ, ಮಹಾಸಾಧ್ವಿಯಾಗಿ ನಿರಂತರವಾಗಿ ಹರಿಯುತ್ತಿದ್ದಾಳೆ.

## ಸಾಹಿತ್ಯ

ಹೇಮರಡ್ಡಿ ಮಲ್ಲಮ್ಮ ಯಾವುದೇ ಸಾಹಿತ್ಯವನ್ನು ಸೃಷ್ಠಿ ಮಾಡಿದವಳಲ್ಲ. ಶಿಷ್ಯ ಪರಂಪರೆಯನ್ನು ಬೆಳೆಸಿದವಳಲ್ಲ. ಯಾವುದಾದರೊಂದು ಬಾಹ್ಯ ಆಚರಣೆಯನ್ನು ಹೇಳಿದ್ದಳೆಂದರೆ ಅದೇ ಮುಂದೆ ಅಜ್ಞಾನದ ಆಚರಣೆಯಾಗಿ ಮುಂದುವರೆಯುತ್ತಿತ್ತು. ಆದರೆ ಅದನ್ನು ಮಾಡದ ಆ ಮಹಾಮಾತೆ ಸಂಸಾರದ ಅಪಾರವಾದ ಕಷ್ಟನಷ್ಟಗಳನ್ನು ಸಹಿಸಿ, ಸಹಜವಾಗಿ ಸರಳವಾಗಿ ಬದುಕಿದ ಸಂಸಾರ ಯೋಗಿನಿ. ಸಂಸಾರ ಮತ್ತು ಪಾರಮಾರ್ಥವನ್ನು ಸಮನ್ವಯಗೊಳಿಸಿ ತನ್ನ ನಿತ್ಯ ಜೀವನದಲ್ಲಿ ಅಳವಡಿಸಿಕೊಂಡವಳು.

ಭಾರತೀಯ ಶ್ರೇಷ್ಠ ಋಷಿ ಪರಂಪರೆಯಂತೆ 15ನೇ ಶತಮಾನದಲ್ಲಿ ಬದುಕಿದ ಹೇಮರಡ್ಡಿ ಮಲ್ಲಮ್ಮಳ ಬಗೆಗೆ 18ನೇ ಶತಮಾನದವರೆಗೂ, ಅಂದರೆ ಮೂರು ನೂರು ವರ್ಷಗಳವರೆಗೆ ಯಾವುದೇ ಸಾಹಿತ್ಯ ಸೃಷ್ಟಿಯಾಗಲಿಲ್ಲ; ದೇವಸ್ಥಾನ ನಿರ್ಮಾಣವಾಗಲಿಲ್ಲ. ಆದರೆ ಜಾನಪದ ಹಾಡುಗಳು, ಗರತಿಯ ಹಾಡುಗಳು, ಭಕ್ತಿಯ ಹಾಡುಗಳ ಮೂಲಕ ಜನಮಾನಸದಲ್ಲಿ ಭಕ್ತಿಯ ಸೆಲೆಯಾಗಿ ಹರಿದಾಡುತ್ತಿದ್ದಳು. ಯಾವುದೇ ತಂತ್ರಜ್ಞಾನವಿಲ್ಲದ ಆ ಕಾಲದಲ್ಲಿ ಜನರ ಬಾಯಿಂದ ಬಾಯಿಗೆ ಹರಿದು ಬಂದಳು ಮಲ್ಲಮ್ಮ. ದೇವಸ್ಥಾನಗಳಲ್ಲಿ, ಭಜನಾ ಪದಗಳಲ್ಲಿ, ಕುಟುಂಬಗಳಲ್ಲಿ ನಡೆಯುವ ಶುಭ ಕಾರ್ಯಗಳಲ್ಲಿ ಮಂಗಳಾರತಿಯ ಪದಗಳ ಮೂಲಕ ಮಲ್ಲಮ್ಮ ಉಪಸ್ಥಿತಳಾಗುತ್ತಿದ್ದಳು.

ಹದಿನೆಂಟನೆಯ ಶತಮಾನದವರೆಗೆ ಹೇಮರಡ್ಡಿ ಮಲ್ಲಮ್ಮನ ಕುರಿತು ಯಾವುದೇ ಕೃತಿಗಳು ರಚಿತವಾದಂತಿಲ್ಲ. ಹದಿನೆಂಟನೆ ಶತಮಾನದ ಕೊನೆಯ ಘಟ್ಟದಲ್ಲಿ ಜೈನಾಪುರದ ರುದ್ರ ಕವಿಗಳು ಬರೆದ "ಹೇಮರಡ್ಡಿ ಮಲ್ಲಮ್ಮ ಪುರಾಣ" ಎಂಬ ಸಾಂಗತ್ಯ ರೂಪದ ಗ್ರಂಥವೇ ಮೊದಲನೆಯದು ಎನ್ನಲಾಗಿದೆ. ನಂತರ ಕ್ರಿ.ಶ. 1926 ರಲ್ಲಿ ದ್ಯಾಂಪುರ ಚನ್ನಕವಿಗಳು ರಚಿಸಿದ ಷಟ್ಪದಿಯ "ಹೇಮರಡ್ಡಿ ಮಲ್ಲಮ್ಮನ ಚರಿತ್ರೆ" ನಂತರ 1998 ರಲ್ಲಿ ಪ್ರಕಟವಾದದ್ದು (ರಚಿಸಿದ ಕಾಲ – 1934) ಹನುಮಪ್ಪಾ ರಂಗಪ್ಪಾ ಮುಳ್ಳೂರ (ರೆಡ್ಡಿ) ಅವರು ರಚಿಸಿದ "ಶ್ರೀ ಹೇಮರೆಡ್ಡಿ ಮಲ್ಲಾಮಾಂಬೆಯ ಪುರಾಣಂ". ನಂತರ ನಲವಡಿಯ ಶ್ರೀಕಂಠಶಾಸ್ತ್ರಿಗಳು ಬರೆದ "ಹೇಮರಡ್ಡಿ ಮಲ್ಲಮ್ಮ" ಎಂಬ ನಾಟಕವನ್ನು ಗದಗಿನ ಪಂಚಾಕ್ಷರಿ ಗವಾಯಿಗಳು ತಮ್ಮ ಕಂಪನಿಯ ಮೂಲಕ ರಾಜ್ಯದ ವಿವಿಧ ಭಾಗಗಳಲ್ಲಿ ಅದ್ಭುತವಾಗಿ ಪ್ರಸ್ತುತಪಡಿಸಿದರು. ನಂತರ ಅತ್ಯಂತ ಪ್ರಸಿದ್ಧವಾದದ್ದು ಡಾ.(ಶ್ರೀಮತಿ) ಶಾಂತಾದೇವಿ ಸಣ್ಣೆಲ್ಲಪ್ಪನವರ ಅವರ 'ಹೇಮರಡ್ಡಿ ಮಲ್ಲಮ್ಮ' ಎಂಬ ಸಂಶೋಧನಾ ಗ್ರಂಥ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದ ಇವರು ವೇಮನ ಮತ್ತು



ಹೇಮರಡ್ಡಿ ಮಲ್ಲಮ್ಮಳ ಬಗೆಗೆ ಆಳವಾಗಿ ಅಧ್ಯಯನ ಮಾಡಿದವರು. ಇಲ್ಲಿಯವರೆಗೆ ಇವರ 'ಹೇಮರಡ್ಡಿ ಮಲ್ಲಮ್ಮ' ಎನ್ನುವ ಸಂಶೋಧನಾ ಗ್ರಂಥ ಎಂಟು ಮರುಮುದ್ರಣಗಳನ್ನು ಕಂಡಿದೆ.

## ಪುರಾಣ ಎಂದರೇನು?

'ಪುರಾಣ' ಎಂದರೆ "ಪುರಾತನವಾದದ್ದು" ಎಂದರ್ಥ. ಅಧಿಕೃತ ದಾಖಲೆ ಇರುವುದನ್ನು ಇತಿಹಾಸ ಎನ್ನುತ್ತೇವೆ. ಅಧಿಕೃತವಾದ ದಾಖಲೆ ಇಲ್ಲದ್ದು, ತಲೆಮಾರುಗಳಿಂದ ಹೇಳುತ್ತ ಮತ್ತು ನಂಬುತ್ತಾ ಬಂದಿರುವ ಧಾರ್ಮಿಕ ಮತ್ತು ಆಧ್ಯಾತ್ಮಿಕ ಹಿನ್ನೆಲೆಯುಳ್ಳ ಕಥೆಗಳನ್ನು ಪುರಾಣವೆನ್ನುತ್ತಾರೆ. ಮಾನವನ ಆಧ್ಯಾತ್ಮಿಕ ಚಿಂತನೆಗಳನ್ನು, ದರ್ಶನಗಳನ್ನು ಕಲ್ಪನೆಗಳ ಮೂಲಕ ಕತೆಗಳನ್ನಾಗಿ ಸೃಷ್ಟಿಸಿ ಜನಸಾಮಾನ್ಯರಿಗೆ ಆಧ್ಯಾತ್ಮಿಕ ದರ್ಶನಗಳನ್ನು ತಿಳಿಸಲು ಮಾಡುವ ಪ್ರಯತ್ನ. ಇವುಗಳು ಸಂಪೂರ್ಣವಾಗಿ ಕಾಲ್ಪನಿಕವಾದವುಗಳು. ಯಾವುದೇ ಐತಿಹಾಸಿಕ ದಾಖಲೆಗಳಿರುವುದಿಲ್ಲ. ವಾಸ್ತವಿಕ ಸತ್ಯಕ್ಕೆ ಪ್ರಮಾಣಗಳಲ್ಲ. ವೇದಗಳಲ್ಲಿ, ಬ್ರಹ್ಮಸೂತ್ರಗಳಲ್ಲಿ ಮತ್ತು ಭಗವದ್ಗೀತೆಯಲ್ಲಿ ಯಾವ ತತ್ವಗಳಿವೆಯೋ ಅವುಗಳನ್ನು ಜನಸಾಮಾನ್ಯರಿಗೆ ಸರಳವಾಗಿ ತಿಳಿಯುವಂತೆ ಹೇಳಲು ಕತೆಯ ರೂಪದಲ್ಲಿ ಪುರಾಣಗಳು ಹುಟ್ಟಿಕೊಂಡವು. ಇವುಗಳ ಉದ್ದೇಶ ಆಯಾ ಸಂದರ್ಭ ಮತ್ತು ಸಮಯಕ್ಕನುಸರಿಸಿ ಮಹಾನ್ ವ್ಯಕ್ತಿಗಳನ್ನಾಧರಿಸಿ ಕಥೆಗಳನ್ನು ಸೃಷ್ಟಿಸಿ ನೀತಿಯನ್ನು ಬೋಧಿಸುವುದು.

ಹೇಮರಡ್ಡಿ ಮಲ್ಲಮ್ಮಳ ಪುರಾಣವನ್ನಾಧರಿಸಿ ಬರೆದು ಪ್ರಸ್ತುತಪಡಿಸಿದ ನಾಟಕಗಳು 18ನೇ ಶತಮಾನದ ಅಂತಿಮ ಕಾಲಘಟ್ಟ ಮತ್ತು 19ನೇ ಶತಮಾನದ ಆರಂಭದ ಕಾಲ ಘಟ್ಟದಲ್ಲಿರುವ ಕುಟುಂಬ ವ್ಯವಸ್ಥೆಯನ್ನಾಧರಿಸಿದವುಗಳು. ಒಂದು ಕುಟುಂಬದಲ್ಲಿ ಅತ್ತೆ ಮತ್ತು ಸೊಸೆಯದು ಅತ್ಯಂತ ಮಹತ್ವದ ಪಾತ್ರ. ಒಂದು ಮನೆಯ ಕೇಂದ್ರ ಬಿಂದುವಾಗಿರುವ ತಾಯಿ, ತನ್ನ ಮಗನಿಗೆ ಮದುವೆ ಮಾಡಿದಾಗ ಇನ್ನೊಂದು ಮನೆಯಿಂದ ಬರುವ ಆ ಮನೆಯ ಮಗಳು ಗಂಡನ ಮನೆಗೆ ಬಂದಾಗ ಸೊಸೆಯಾಗುತ್ತಾಳೆ, ಗಂಡನ ತಾಯಿ ಸೊಸೆಗೆ ಅತ್ತೆಯಾಗುತ್ತಾಳೆ. ವಿಭಿನ್ನ ಸಂಸ್ಕಾರಗಳ ತಾಕಲಾಟ; ಮಗನಿಗೆ ತಾಯಿಯಾಗಿದ್ದವಳು ಸೊಸೆ ಬಂದ ತಕ್ಷಣ ಅತ್ತೆಯಾಗಿ ಪರಿವರ್ತನೆಯಾಗಿ ಅಧಿಕಾರ ಚಲಾಯಿಸುವ ಮನೋಭಾವ ಒಂದೆಡೆಯಾದರೆ; ನಾನೇನು ಕಡಿಮೆ ನಾನೂ ಈ ಮನೆಯ ಹಕ್ಕುದಾರಳಾಗಿ ಬಂದಿದ್ದೇನೆ ಎಂದು ತನ್ನ ಸ್ಥಾನ ಮಾನಕ್ಕಾಗಿ ಪ್ರಯತ್ನಿಸುವ ಸೊಸೆಯ ಮನೋಭಾವದ ಭಿನ್ನಾಭಿಪ್ರಾಯಗಳು ಆ ಕಾಲದ ಕುಟುಂಬಗಳ ವಿಶಿಷ್ಟ ಸಮಸ್ಯೆ.

ಈ ಸಮಸ್ಯೆಯನ್ನಾಧರಿಸಿ ಆದರ್ಶ ಸೊಸೆ, ಗ್ರಹಿಣಿ ಹೇಗಿರಬೇಕೆನ್ನುವ, ನಾಟಕವನ್ನು ಹೇಮರಡ್ಡಿ ಮಲ್ಲಮ್ಮಳ ಜೀವನವನ್ನಾಧರಿಸಿ ಸೃಷ್ಟಿಸಿದರು. ಅತ್ತೆ ಮನೆಗೆ ಬರುವ ಹೇಮರಡ್ಡಿ ಮಲ್ಲಮ್ಮಳಿಗೆ ಅತ್ತೆ ಪದ್ಮಾವತಿ ಮತ್ತು ನಾದಿನಿಯರು ಕೊಡುವ ಕಷ್ಟ. ಆ ಕಷ್ಟಗಳೆಲ್ಲವನ್ನು ಸಹಿಸಿಕೊಂಡು ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮ, ಚನ್ನಮಲ್ಲಿಕಾರ್ಜುನನ ಪ್ರೀತಿಗೆ ಪಾತ್ರಳಾಗುತ್ತಾಳೆ. ಮಲ್ಲಮ್ಮಳ ಭಕ್ತಿಗೆ ಮೆಚ್ಚಿ ದರ್ಶನ ಕೊಡುವ ಚನ್ನಮಲ್ಲಿಕಾರ್ಜುನ, ನಿನಗೆ ಹಿಂಸೆ ಕೊಟ್ಟವರಿಗೆ ನಾನು ಶಿಕ್ಷೆ ಕೊಡುತ್ತೇನೆ. ಎಂದಾಗ, ದೇವರಾದ ನೀನು ತಪ್ಪು ಮಾಡಿದವರನ್ನು ಕ್ಷಮಿಸಬೇಕೆ ವಿನಃ ಶಿಕ್ಷಿಸಬಾರದೆಂದು ಬೇಡಿಕೊಳ್ಳುವ ಮೂಲಕ ಅವರೆಲ್ಲರ ಶಾಪ ವಿಮೋಚನೆ ಮಾಡಿಸುತ್ತಾಳೆ ಎನ್ನುವುದು ನಾಟಕದ ಸಾರಾಂಶ.

ಅತ್ತೆ-ಸೊಸೆಯ ಜಗಳವನ್ನು ರಂಜನೀಯಗೊಳಿಸಲು, ಭಕ್ತಿಯನ್ನು ವೈಭವೀಕರಣಗೊಳಿಸುವ ಭರಾಟೆಯಲ್ಲಿ ರಾಜ ಮನೆತನದ ಕುಲಮಾತೆಯಾಗಿದ್ದ ಶ್ರೇಷ್ಠ ಸಂಸಾರ ಯೋಗಿನಿ, ದೈವ ಶಕ್ತಿಯ ವ್ಯಕ್ತರೂಪವಾಗಿದ್ದ ಹೇಮರಡ್ಡಿ ಮಲ್ಲಮ್ಮಳನ್ನು ಸೆಗಣಿ ಸಂಗ್ರಹಿಸುವ, ಅದರಿಂದ ಕುಳ್ಳು ಬಡಿಯುವ, ಆಕಳು ಕಾಯುವ ಕೆಲಸಕ್ಕೆ ಸೀಮಿತಗೊಳಿಸಿದರು. ಈಕೆಯ ಪ್ರೀತಿ, ಕರುಣೆ, ತ್ಯಾಗದಿಂದ ಯುವರಾಜನಾಗಿದ್ದ ವೇಮನ ಮಹಾಯೋಗಿಯಾದ ಘಟನೆಯನ್ನು ಅಶ್ಲೀಲಗೊಳಿಸಿದರು. ಸಾಮಾನ್ಯ ಮಾನವ ಮನಸ್ಸಿನಿಂದ ಮಹಾತ್ಮನಾಗುವ ತಾಕಲಾಟದ ಘಟನೆಯನ್ನು ವಿಷಯ ಲಂಪಟನೆಂದು ಹುಚ್ಚನೆಂದು ಪ್ರಸ್ತುತಪಡಿಸಲಾಯಿತು. ಮಹಾಯೋಗಿ ವೇಮನ-ಹೇಮರಡ್ಡಿ ಮಲ್ಲಮ್ಮ-ದೇವದಾಸಿ ಸ್ತ್ರೀ ವಿಶ್ವಧಾಳ ನಡುವೆ ನಡೆದ ಮೂಗುತಿ ಘಟನೆ; ತ್ಯಾಗ, ಸಹನೆ, ತಾಳ್ಮೆ, ಮುಕ್ತಿಯ ಮಾರ್ಗವಾಗಿ ಪ್ರಕಟವಾಗಬೇಕಾದದ್ದು. ಆದರೆ ಅದನ್ನು ಅಶ್ಲೀಲವಾಗಿ, ಅಮಾನವೀಯವಾಗಿ ಚಿತ್ರಿಸಲಾಯಿತು.

ಆ ಕಾಲದ ಅವಶ್ಯಕತೆಗನುಸಾರವಾಗಿ ಜಾರಿಯಲ್ಲಿದ್ದ ದೇವದಾಸಿ ಪರಂಪರೆಯು, ಅಂದಿನ ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ಪರಂಪರೆಯಲ್ಲಿ ಮಹತ್ವದ ಪಾತ್ರವಹಿಸಿತ್ತು. ದೇವರ ಹೆಸರಿನಲ್ಲಿ ಸಂಗೀತ, ನೃತ್ಯ ಮಾಡುವ ಮೂಲಕ ಜನಸಾಮಾನ್ಯರಿಗೆ ಮನರಂಜನೆ ನೀಡುವ ವ್ಯವಸ್ಥೆಯಾಗಿತ್ತು. ಲೈಂಗಿಕ ಕ್ರಿಯೆಯ ಮೂಲಕ ಅಲೌಕಿಕ ದರ್ಶನ ಮಾಡಿಸುವುದು, ಮದುವೆಯಾಗುವ ಸ್ತ್ರೀಯರಿಗೆ ಲೈಂಗಿಕ ಕ್ರಿಯೆಯ ತರಬೇತಿ, ಸುಚಿತ್ವ, ದೇಹದ ಸಂರಕ್ಷಣೆ, ಸೌಂದರ್ಯವನ್ನು ಕಾಪಾಡಿಕೊಂಡು ಗಂಡನ ಜೊತೆಗಿನ ಸಂಬಂಧವನ್ನು ಗಟ್ಟಿಗೊಳಿಸಿಕೊಂಡು; ಪರಸ್ತ್ರೀಯರ ಕಡೆಗೆ ಆತ ಆಕರ್ಷಿತವಾಗದಂತೆ ಪ್ರೀತಿಸುವ ಕಲೆಯನ್ನು ದೇವದಾಸಿ ಮಹಿಳೆಯರು ಕಲಿಸುತ್ತಿದ್ದರು. ಇವರು ಅನಧೀಕೃತ ಲೈಂಗಿಕ ಶಿಕ್ಷಣದ ಶಿಕ್ಷಕಿಯರಾಗಿದ್ದರು. ಸಂಗೀತ, ನೃತ್ಯ, ಸಾಹಿತ್ಯ, ಆಯುರ್ವೇದ ವಿದ್ಯೆಯಲ್ಲಿ



ಪರಿಣಿತರಾಗಿರುತ್ತಿದ್ದ ದೇವದಾಸಿಯರು ಸಾಮಾನ್ಯವಾಗಿ ದೇವಾಲಯಗಳಲ್ಲಿ ವಾಸವಾಗಿರುತ್ತಿದ್ದರು. ರಾಜ-ಮಹಾರಾಜರುಗಳ ವಿಶ್ರಾಂತಿ ಮತ್ತು ಮನರಂಜನೆಯ ಸ್ಥಳಗಳಾಗಿಯೂ; ರಾಜರ ಗೂಡಚಾರರ ಕೇಂದ್ರಗಳಾಗಿ ದೇವದಾಸಿಯರ ಗೃಹಗಳು ಕಾರ್ಯನಿರ್ವಹಿಸುತ್ತಿದ್ದವು.

ದೇವದಾಸಿ ಪರಂಪರೆಯಲ್ಲಿದ್ದ "ಲಕುಮಾ ದೇವಿಯ" ಮಗಳು "ವಿಶ್ವದಾ" ಶ್ರೇಷ್ಠ ನೃತ್ಯಗಾರ್ತಿ. ಆ ಕಾಲದ ಪರಂಪರೆಯಂತೆ ಯುವರಾಜ ವೇಮನರಿಗೂ ವಿಶ್ವದಾಳಿಗೂ ಪರಿಚಯವಾಯಿತು. ವೇಮನನ ಜ್ಞಾನ, ಆತನ ಸಮತ್ವಭಾವ, ಅಸಹಾಯಕರು - ಬಡವರ ಮೇಲಿನ ಆತನ ಪ್ರೀತಿ ಮತ್ತು ಕರುಣೆ ವಿಶ್ವದಾಳನ್ನು ಆಕರ್ಷಿಸಿತು. ಆದರೆ ಆಕೆಯ ತಾಯಿ ಲಕುಮಾದೇವಿಗೆ ತನ್ನಂತೆ ರಾಜ ನರ್ತಕಿಯಾಗಿ ಅವಶ್ಯಕತೆಗೆ ಮಾತ್ರ ಉಪಯೋಗಿಸುವಂತಹ ಬಾಳು ತನ್ನ ಮಗಳದಾಗಬಾರದು. ಆಕೆ ಮದುವೆಯಾಗುವುದಿದ್ದರೆ ವೇಮನನ ಧರ್ಮಪತ್ನಿಯಾಗಿ, ರಾಜ ಮಾತೆಯಾಗಿ ಅರಮನೆಯಲ್ಲಿರಬೇಕು ಎನ್ನುವ ಹಠ ಹಿಡಿದಳು. ನಿಜವಾಗಲೂ ವೇಮನ ನಿನ್ನನ್ನು ಪ್ರೀತಿಸುವುದಾಗಿದ್ದರೆ ಆತನ ಅತ್ತಿಗೆಯ ಮೂಗಿನಲ್ಲಿರುವ, ರಾಜ ಮಾತೆಯ ಸಂಕೇತವಾಗಿರುವ ಮೂಗುತಿಯನ್ನು ತಂದುಕೊಡಲು ಹೇಳು ಎಂದಳು.

ತನ್ನ ಸ್ಥಾನಮಾನದ ಅರಿವಿದ್ದ ವಿಶ್ವದಾ, ಈ ಮಾತನ್ನು ಕೇಳಿ ಆಘಾತಕ್ಕೊಳಗಾದಳು. ವೇಮನನ ಮೂಲಕ ಮಹಾಮಾತೆಯಾದ ಆತನ ಅತ್ತಿಗೆಯ ಬಗೆಗೆ ತಿಳಿದುಕೊಂಡಿದ್ದ ವಿಶ್ವದಾ ಮಹಾಸಾಧ್ವಿ, ಶ್ರೇಷ್ಠ ದೈವ ಭಕ್ತಳಾದ ಆಕೆಯ ಮೂಗುತಿಯನ್ನು ನಾನು ಧರಿಸಿ ಯಾವ ಪಾಪಕ್ಕೆ ಗುರಿಯಾಗಲೆಂದು ರೋಧಿಸಲಾರಂಭಿಸಿದಳು. ಇದನ್ನು ಗಮನಿಸಿದ ವೇಮನ ಸಂಸಾರದ ಸ್ಥಾನಮಾನಗಳಿಗಾಗಿ ಹೋರಾಟ, ಇದಕ್ಕಾಗಿಯೇ ಜೀವನ ಪೂರ್ತಿ ಪ್ರಯತ್ನಿಸುವ ಮಾನವರ ಮನಸ್ಸನ್ನು ನೋಡಿ ವಿಚಲಿತನಾದ. ಅತ್ಯಂತ ದುಃಖಿತ ಮನಸ್ಸಿನಿಂದ ಅರಮನೆಗೆ ಮರಳಿದ್ದ.. ವೇಮನನ ಸ್ನೇಹಿತ ಅಭಿರಾಮನ ಮೂಲಕ ವಿಷಯ ತಿಳಿದ ಸಾಧ್ವಿಶಿರೋಮಣಿ ಹೇಮರಡ್ಡಿ ಮಲ್ಲಮ್ಮ ವೇಮನನನ್ನು ಮಗುವಿನಂತೆ ಸಂತೈಸಿದಳು. ತಲೆಯ ಮೇಲೆ ಕೈಯಾಡಿಸುತ್ತಿದ್ದ ಮಹಾಮಾತೆ ಹೇಮರಡ್ಡಿ ಮಲ್ಲಮ್ಮಳ ಮುಖವನ್ನು ನೋಡಿ ವೇಮನ ದುಃಖಿಸಲಾರಂಭಿಸಿದ. ರಾಜ ಕುಲಮಾತೆಯಾಗಿದ್ದ ಮಲ್ಲಮ್ಮಳ ಮೂಗುತಿ, ರಾಜ ಮನೆತನದ ಗೌರವ ಮತ್ತು ಭಕ್ತಿಯ ಸಂಕೇತ. ಅದನ್ನು ಧರಿಸಿದ ಆಕೆಯ ಮುಖ ಜೀವಂತ ದೇವಿಯ ಸ್ವರೂಪದಲ್ಲಿ ಕಂಗೊಳಿಸುತ್ತಿತ್ತು.

ಸರ್ವರನ್ನು ಸಮಾನ ದೃಷ್ಟಿಯಿಂದ ನೋಡುವವರು ಮಾತ್ರ ಮಹಾತ್ಮರಾಗಲು ಸಾಧ್ಯ. ಅಂತಹ ಮಹಾತ್ಮಳಾಗಿದ್ದ ಮಲ್ಲಮ್ಮ ಮೂಗುತಿಯನ್ನು

ವೇಮನನ ಕೈಯಲ್ಲಿಟ್ಟು, ಹೋಗು ಆಕೆಯನ್ನು ದೇವದಾಸಿ ಪಟ್ಟದಿಂದ ಮುಕ್ತ ಮಾಡಿ ರಾಣಿಯನ್ನಾಗಿ ಮನೆಗೆ ಕರೆದುಕೊಂಡು ಬಾ ಎಂದಳು. ನಿನ್ನಿಂದ ಆ ಅನಿಷ್ಟ ಸಂಪ್ರದಾಯ ಕೊನೆಯಾಗಲಿ ಎಂದಳು. ವೇಮನ ಗಾಬರಿಯಾಗಿ ಏನನ್ನೋ ಹೇಳಲು ಪ್ರಯತ್ನಿಸಿದ; ಆತನ ಮಾತನ್ನು ತಡೆದ ಮಲ್ಲಮ್ಮ ಇಲ್ಲಿ ಯಾವುದೇ ಮಾತಿಗೆ ಅವಕಾಶವಿಲ್ಲ, ಇದು ರಾಜಮಾತೆಯ ಆದೇಶವೆಂದಳು.

ಒಂದೆಡೆ ಸರ್ವವನ್ನೂ ತ್ಯಾಗ ಮಾಡಿ ಇನ್ನೊಬ್ಬರ ಜೀವನವನ್ನು ಉನ್ನತೀಕರಿಸುವ ದೈವೀ ಸ್ವರೂಪ; ಇನ್ನೊಂದೆಡೆ ಏನನ್ನಾದರೂ ಪಡೆದುಕೊಂಡು ಸ್ಥಾನಮಾನವನ್ನು ಹೆಚ್ಚಿಸಿಕೊಳ್ಳಬೇಕೆಂಬ ಬಯಕೆ. ಇದನ್ನೇ ಚಿಂತಿಸುತ್ತ ಅರಮನೆಯಿಂದ ಹೊರಟ ವೇಮನರಿಗೆ ವಿಶ್ವದಾಳ ಮನೆ ಮುಟ್ಟುವಷ್ಟರಲ್ಲಿ ವೈರಾಗ್ಯ ಜಾಗೃತವಾಗಿತ್ತು. ವಿಶ್ವದಾಳ ಕೈಗೆ ಮೂಗುತಿಯನ್ನಿತ್ತ ವೇಮನ; ಇಂದಿನಿಂದ ನೀನು ನಿನ್ನ ತಾಯಿಯ ಇಚ್ಛೆಯಂತೆ ದೇವದಾಸಿ ಪದ್ಧತಿಯಿಂದ ಮುಕ್ತಳಾಗಿರುವೆ; ಇದು ನನ್ನ ಅತ್ತಿಗೆ ಮಹಾಮಾತೆ ಹೇಮರಡ್ಡಿ ಮಲ್ಲಮ್ಮಳ ಸಂಕಲ್ಪ ಮತ್ತು ಆಶೀರ್ವಾದವೆಂದು ಹೇಳಿ ಅಲ್ಲಿಂದ ಹೊರ ನಡೆದ. ಆತನಿಗೆ ಅರಿವಿಲ್ಲದಂತೆ ವೇಮನ ಅರಣ್ಯವನ್ನು ಪ್ರವೇಶಿಸಿದ್ದ. ದೂರದ ಗುಹೆಯಲ್ಲಿ ಓಂಕಾರ ನಾದ ಕೇಳಲಾರಂಬಿಸಿತು. ಅದನ್ನೇ ಅನುಸರಿಸಿ ಗುಹೆಯನ್ನು ಪ್ರವೇಶಿಸಿದ ವೇಮನರಿಗೆ ಲಂಬಿಕಾಯೋಗಿಗಳು ಪ್ರತ್ಯಕ್ಷವಾದರು. "ಸಂಸಾರ ಬಂಧನ ಕಳಚಿತೆ ವೇಮನ?" ಎಂದರು ಗುರುಗಳು. "ನನ್ನ ಹೆಸರು ತಮಗೆ ಹೇಗೆ ಗೊತ್ತು?" ಎಂದನು, ವೇಮನ. ಎಲ್ಲವೂ "ನನಗೆ ಗೊತ್ತು ಬಾ ಮಗು" ಎಂದು ವೇಮನನ ತಲೆಯ ಮೇಲೆ ಕೈಯನ್ನಿಟ್ಟು "ಹಸ್ತಮಸ್ತಕ" ಸಂಯೋಗದಿಂದ ತಮ್ಮ ಶಕ್ತಿಯನ್ನೆಲ್ಲ ವೇಮನನಿಗೆ ವರ್ಗಾಯಿಸಿ ಅದೃಶ್ಯರಾದರು ಯೋಗಿಗಳು.

ಸಂಸಾರದ ಪೊರೆಯನ್ನು ಕಳಚಿದ ವೇಮನ, ಮಹಾಯೋಗಿಯಾಗಿದ್ದ. ಹಲವಾರು ತಿಂಗಳುಗಳ ಕಾಲ ದೇಹದ ಪರಿವೆ ಇಲ್ಲದೆ ಧ್ಯಾನಸ್ಥನಾದ. ಮರಳಿ ಸಹಜ ಸ್ಥಿತಿಗೆ ಬಂದಾಗ ದೇಹ ಭಾವ ಸಂಪೂರ್ಣವಾಗಿ ಕಳಚಿತ್ತು. ದೇಹ ಬತ್ತಲೆಯಾಗಿತ್ತು. ಜೀವ ಭಾವ ಬ್ರಹ್ಮ ಭಾವವಾಗಿ ಸೀಮಾತೀತವಾಗಿತ್ತು. ದೈವ ಶಕ್ತಿ ವೇಮನರ ದೇಹವನ್ನು ಕೇಂದ್ರವನ್ನಾಗಿಸಿ ಜನ ಕಲ್ಯಾಣದ ಕಾರ್ಯವನ್ನಾರಂಬಿಸಿತ್ತು. ಮಾತುಗಳು ವೇದ ವಾಕ್ಯಗಳಾದವು, ಮುಟ್ಟುವ ಅನ್ನ ಪ್ರಸಾದವಾಯಿತು. ರೋಗಗಳು ಗುಣಮುಖವಾಗಲೆಂದು ಆಶೀರ್ವಾದಕ್ಕಾಗಿ ಬಂದವರಿಗೆಲ್ಲ ಕೊಡುವ ಎಲೆಗಳು ಹೂವುಗಳು ಔಷಧಿಗಳಾದವು. ಪರಮ ಸತ್ಯವನ್ನು ಅರಸಿ ಬಂದವರಿಗೆ ಹೇಳಿದ ನುಡಿಗಳು ಸಾವಿರಾರು ಪದ್ಯಗಳಾದವು. ಜ್ಞಾನೋದಯದ ನಂತರ 50 ವರ್ಷಗಳ ಕಾಲ ನಿರಂತರವಾಗಿ ಜ್ಞಾನೋಪದೇಶ ಮಾಡಿದ ನುಡಿಗಳು ಪದ್ಯಗಳಾಗಿ ಜನಮಾನಸದಲ್ಲಿ ಹರಿದಾಡಲಾರಂಭಿಸಿದವು. ಹಲವಾರು ಜನ ವಿದ್ವಾಂಸರು, ಸಾಹಿತಿಗಳು ಅವುಗಳನ್ನು ತಾಳೆಗರಿಗಳಲ್ಲಿ ಬರೆದಿಟ್ಟರು.



ಕ್ರಿ.ಶ. 1824 ರಲ್ಲಿ ಕಡಪಾ ಜಿಲ್ಲೆಯ ಜಿಲ್ಲಾಧಿಕಾರಿಯಾಗಿ ಬಂದ, ಬ್ರಿಟಿಷ ಕಂಪನಿ ಸರ್ಕಾರದ ಅಧಿಕಾರಿ ಸಿ.ಪಿ.ಬ್ರೌನ ವೇಮನ ಪದ್ಯಗಳಿಂದ ಪ್ರಭಾವಿತನಾಗಿ ತಾನೂ ತೆಲುಗು ಭಾಷೆಯನ್ನು ಕಲಿತು, ತೆಲುಗು ಪಂಡಿತರಿಗೆ ಇಂಗ್ಲೀಷ ಭಾಷೆಯನ್ನು ಕಲಿಸಿ ವೇಮನರ ಸಮಗ್ರ ಸಾಹಿತ್ಯವನ್ನು ಅಧ್ಯಯನ ಮಾಡಿದ. ವೇಮನರ ತತ್ವ–ಸಿದ್ಧಾಂತಗಳಿಗೆ ಮಾರುಹೋದ ಬ್ರೌನ, ತನ್ನ ಕರ್ತವ್ಯವನ್ನು ಮರೆತನೆಂದು ಕಂಪನಿ ಸರ್ಕಾರವು ಆತನನ್ನು ನೌಕರಿಯಿಂದ ವಜಾಗೊಳಿಸಿತು. ಇದನ್ನು ಲಕ್ಷಿಸದ ಬ್ರೌನರವರು ಕ್ರಿ.ಶ. 1829 ರಲ್ಲಿ ವೇಮನರ 1215 ಪದ್ಯಗಳನ್ನು ಪ್ರಪ್ರಥಮವಾಗಿ ಇಂಗ್ಲೀಷ ಭಾಷಾಂತರದೊಂದಿಗೆ ಪ್ರಕಟಿಸಿದರು. ಸಿ.ಪಿ.ಬ್ರೌನರವರಿಗೆ ವೇಮನರ ಪದ್ಯಗಳಲ್ಲಿರುವ ಸಂದೇಶಗಳೂ ಏಸು ಮಹಾಸ್ವಾಮಿಯ (ಬೈಬಲ್ಲಿನಲ್ಲಿರುವ) ಸಂದೇಶಗಳೂ ಒಂದೇ ಎನ್ನುವುದು ಮನದಟ್ಟಾಗಿ, ವೇಮನರು ಏಸು ಮಹಾಸ್ವಾಮಿಯ ಪುನರಾವತಾರವೆಂದು ನಂಬಿದ್ದರು. ಈ ಪುನರಾವತಾರಕ್ಕೆ ಕಾರಣವಾದವರು ಹೇಮರಡ್ಡಿ ಮಲ್ಲಮ್ಮ.

ತನಗೆ ಮೂಗುತಿ ನೀಡಿ ಅರಮನೆ ತೊರೆದ ವೇಮನ ಯೋಗಿಯಾದದ್ದನ್ನು ತಿಳಿದ ವಿಶ್ವದಾ ಮೂಗುತಿ ಸಮೇತ ಮಲ್ಲಮ್ಮಳ ದರ್ಶನಕ್ಕೆ ಬಂದಳು. ಜೊತೆಗೆ ವೇಮನ ಆಕೆಯ ಸಾಮಿಪ್ಯದಲ್ಲಿರುವಾಗ ಹೇಳಿದ ಪರಮ ಸತ್ಯದ ಪದ್ಯಗಳನ್ನು ಆನಂದದಿಂದ ಅನುಭವಿಸಿ ಅವುಗಳನ್ನೆಲ್ಲ ತಾಳೆ ಗರಿಗಳಲ್ಲಿ ಬರೆದಿಟ್ಟಿದ್ದಳು. ಅವುಗಳನ್ನೆಲ್ಲ ಹೊತ್ತುಕೊಂಡು, ದೇವದಾಸಿ ವೃತ್ತಿಯನ್ನು ತೊರೆದು ಬಂದಿದ್ದಳು. ಆಕೆಯ ಸಾತ್ವಿಕ ಕಳೆ, ಧನ್ಯತಾ ಭಾವ, ವೇಮನನ ತತ್ವ–ಸಿದ್ಧಾಂತಗಳಿಂದ ದೃಢಗೊಂಡ ಆಕೆಯ ಮನಸ್ಥಿತಿಯನ್ನು ಅರಿತ ಮಲ್ಲಮ್ಮ ಪ್ರೀತಿಯಿಂದ ಬರಮಾಡಿಕೊಂಡಳು. ವೇಮನನ ಇಚ್ಛೆಯಂತೆ ದೇವದಾಸಿ ವೃತ್ತಿಯಿಂದ ಮುಕ್ತಳಾಗಿದ್ದಳು. ಉಳಿದ ಜೀವನವನ್ನು ವೇಮನನ ತತ್ವ–ಸಿದ್ಧಾಂತಗಳನ್ನು ಪ್ರಚಾರ ಮಾಡುವ ಕೆಲಸಕ್ಕೆ ಮೀಸಲಿಟ್ಟಳು. ವಿಶ್ವದಾಳ ನಿತ್ಯ ಜೀವನಕ್ಕೆ ಅನುಕೂಲವಾಗುವಂತೆ ಮಕ್ಕಳಿಗೆ ನೃತ್ಯ ಮತ್ತು ಸಂಗೀತ ಕಲಿಸುವ ಶಾಲೆಯನ್ನು ಪ್ರಾರಂಭಿಸಲು ಸಕಲ ವ್ಯವಸ್ಥೆಯನ್ನು ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮ ಮಾಡಿಕೊಟ್ಟಳು. ತನ್ನ ಜೀವನ ಪರ್ಯಂತ ಇದೇ ವೃತ್ತಿಯಲ್ಲಿ ಮುಂದುವರೆದು ಮಕ್ಕಳಿಗೆ ಸಂಗೀತ ಮತ್ತು ನೃತ್ಯ ಕಲಿಸುತ್ತ ತನ್ನ ಜೀವನವನ್ನು ಅಂತ್ಯಗೊಳಿಸಿದಳು.

ಇದೆಲ್ಲವನ್ನು ಮರೆತ ನಾಟಕಕಾರರು ಅಂದಿನ ಸಮಾಜದ ಸ್ಥಿತಿಗತಿಯನ್ನಾಧರಿಸಿ, ಅದಕ್ಕೆ ಹೊಂದಿಕೆ ಮಾಡುವ ಪ್ರಯತ್ನದಲ್ಲಿ ಮಲ್ಲಮ್ಮಳ ನಿಜ ಜೀವನವನ್ನು ಮರೆತು ಬಿಟ್ಟರು. ಮೂಗುತಿಯ ಘಟನೆಯನ್ನು ಅತ್ಯಂತ ಅಶ್ಲೀಲವಾಗಿ ಪ್ರಸ್ತುತಪಡಿಸಿದರು. ಮೂಗುತಿಯನ್ನು ಕೊಡುವ ಮೊದಲು ವಿಶ್ವದಾ ಬತ್ತಲೆಯಾಗಿ ವೇಮನನ ಮಂಚದ ಸುತ್ತಲು ಮೂರು ಸುತ್ತು ಹಾಕಿ ನೆಲದ ಮೇಲಿರುವ

ಮೂಗುತಿಯನ್ನು ಬಗ್ಗಿ ಬಾಯಿಂದ ತೆಗೆದುಕೊಳ್ಳಲು ಹೇಳಿ, ಆಕೆ ಹಾಗೆ ಮಾಡುವಾಗ ಹಿಂಬದಿಯಿಂದ ಆಕೆಯ ದೇಹದ ಅಂಗಾಂಗಳನ್ನು ನೋಡು ಎಂದು ಮಲ್ಲಮ್ಮ ಶರತ್ತನ್ನು ವಿಧಿಸಿದಳೆಂದು, ಹಾಗೆ ಮಾಡಿದ್ದರಿಂದ ವೇಮನನಿಗೆ ವೈರಾಗ್ಯ ಉಂಟಾಯಿತೆಂದು ಹೇಳುತ್ತಾರೆ. ಮಹಾಸಾಧ್ವಿಯಾದ ಹೇಮರಡ್ಡಿ ಮಲ್ಲಮ್ಮ ಹೀಗೆ ಹೇಳಲು ಸಾಧ್ಯವೇ? ಇವರು ಕಲ್ಪಿಸಿದಂತೆ ವೇಮನ ನಿಜವಾಗಿಯೂ ಕಾಮುಕನಾಗಿದ್ದರೆ, ಬತ್ತಲೆ ಶರೀರ ಹೇಗೆ ವೈರಾಗ್ಯವನ್ನುಂಟು ಮಾಡಲು ಸಾಧ್ಯ?

ನಾಟಕಕಾರರು ಕಲ್ಪಿಸಿದಂತೆ ವೈರಾಗ್ಯ ಭಾವ ತಾಳಿದವ ಹುಚ್ಚನಾಗಲು ಹೇಗೆ ಸಾಧ್ಯ? ವೈರಾಗ್ಯದಿಂದ ವ್ಯಕ್ತಿ ಬುದ್ಧನಾಗುತ್ತಾನೆ; ಮಹಾವೀರನಾಗುತ್ತಾನೆ. ಅಲ್ಲಮ್ಮಪ್ರಭುವಿನಂತಾಗುತ್ತಾನೆ. ಹುಚ್ಚನಂತೂ ಖಂಡಿತ ಆಗುವುದಿಲ್ಲ. ಆದರೆ ಆ ಕಾಲದ ಸಮಾಜದ ಸ್ಥಿತಿಗನುಗುಣವಾಗಿ ನಾಟಕವನ್ನು ನಿರ್ಮಿಸಿರಬಹುದು. ವಾಸ್ತವ ಖಂಡಿತವಾಗಿಯೂ ಹಾಗಿರಲು ಸಾಧ್ಯವಿಲ್ಲ.

## ಗುಪ್ತಗಾಮಿನಿ

ಸಾಧ್ವಿಶಿರೋಮಣಿ, ಸಂಸಾರಯೋಗಿನಿ, ಮೌನ ತಪಸ್ವಿ, ಅಪರಿಮಿತ ಸಹನಶೀಲೆ, ಶ್ರೇಷ್ಠ ತ್ಯಾಗ ಜೀವಿ, ಕ್ಷಮಾಗುಣದ ಸಾಕಾರ ಮೂರ್ತಿಯಾಗಿ ಸಾಮಾನ್ಯ ಜನರ ಹೃದಯದಲ್ಲಿ ಸದಾ ಜೀವಂತವಾಗಿರುವವಳು ಮಹಾಮಾತೆ ಹೇಮರಡ್ಡಿ ಮಲ್ಲಮ್ಮ. ಸಂಸಾರದ ಅಪರಿಮಿತ ಕಷ್ಟಗಳನ್ನು ಸಹಿಸುತ್ತ ಸದ್ಗತಿಯನ್ನು ಪಡೆಯಬಹುದು ಎಂಬುದನ್ನು ತೋರಿಸಿಕೊಟ್ಟವಳು. ರಡ್ಡಿ ರಾಜ ಕುಲದ ರಾಜಮಾತೆಯಾಗಿದ್ದರೂ ಸಾಮಾನ್ಯ ರೈತರು, ಆಕಳು ಕಾಯುವ ಕೂಲಿಕಾರರ ಜೊತೆಗಿದ್ದು, ಪರಮಸತ್ಯವನ್ನು ದರ್ಶಿಸುವ ಬಗೆಯನ್ನು ತೋರಿಸಿದವಳು.

ಭಾರತೀಯ ಋಷಿ ಪರಂಪರೆಯ ವ್ಯಕ್ತರೂಪವಾಗಿದ್ದ ಮಲ್ಲಮ್ಮ; ರಡ್ಡಿ ಜನಾಂಗದ ಆದರ್ಶ ಕುಲಮಾತೆ. ರಡ್ಡಿ ರಾಜ್ಯ ಸ್ಥಾಪನೆಗೆ ಕಾರಣೀಕರ್ತರಾದ ವ್ಯೋಮ ಯೋಗಿ (ಸಂಸ್ಕೃತದ ವ್ಯೋಮ ತೆಲುಗಿನ 'ವೇಮನ' ಎನ್ನುವುದರ ಸಮಾನಾರ್ಥ) ಅಂದರೆ 'ನಿರಾಕಾರ' ರೂಪ, ಬಯಲ ಅಸ್ತಿತ್ವ. ಸದಾ ಧ್ಯಾನದಲ್ಲಿರುತ್ತಿದ್ದ ಯೋಗಿಗಳು; ರಡ್ಡಿ ಸಾಮ್ರಾಜ್ಯದ ಮೊದಲ ದೊರೆ ಪ್ರೋಲಯ ವೇಮಾರಡ್ಡಿಯ ತಂದೆ ಅಲ್ಲಾಡರಡ್ಡಿಗೆ ತಮ್ಮ ಯೋಗ ಶಕ್ತಿಯನ್ನು ಅನುಗ್ರಹಿಸಿ; ಸತ್ಸಂಗ, ಧ್ಯಾನ, ಜನಸೇವಾ ಭಾವನೆಯನ್ನು ಸದಾ ಜಾಗೃತವಾಗಿಟ್ಟುಕೊಂಡು ಜೀವನ ಸಾಗಿಸಲು ಉಪದೇಶಿಸಿದ್ದರು. ಇದನ್ನೇ ರಡ್ಡಿ ರಾಜರು ನಿರಂತರವಾಗಿ ಭಕ್ತಿಯಿಂದ ಪಾಲಿಸುತ್ತಿದ್ದರು.

ಈ ಜನಾಂಗದಲ್ಲಿ ಮಹತ್ವ ಪೂರ್ಣವಾದ ನಾಲ್ಕು ಶಬ್ದಗಳಿವೆ, ಅವೆಂದರೆ, ವೇಮನ, ರಡ್ಡಿ, ಹೇಮ ಮತ್ತು ಮಲ್ಲಮ್ಮ. 'ವೇಮನ' ಎನ್ನುವುದು ಈ ಜನಾಂಗಕ್ಕೆ ತನ್ನ ತಪಸ್ ಶಕ್ತಿಯನ್ನೆಲ್ಲ ಧಾರೆ ಎರೆದ ಋಷಿಯ ಹೆಸರು. ಅಂದರೆ ಈ ಜನಾಂಗದ



ಮೂಲ ಪುರುಷ. 'ರಡ್ಡಿ' ಎನ್ನುವುದು ಆ ಜನಾಂಗದ ಮೂಲವೃತ್ತಿ ಅಂದರೆ ರೈತ, ರಟ್ಟೆ ಮುರಿದು ದುಡಿಯುವವ, ನಾಡ ರಕ್ಷಕ, ರಾಷ್ಟ್ರಕಟ್ಟುವವ, ಅನ್ನದಾತ ಎಂಬ ವಿಭಿನ್ನ ಅರ್ಥಗಳಿವೆ. ಕಾಲ ಬದಲಾದಂತೆ ವೃತ್ತಿಗಳು ಬದಲಾಗಿದ್ದರೂ, ಇಂದಿಗೂ ಅವರಿಗೆ ಕೃಷಿಯ ಮೇಲೆ ಅಪಾರ ಪ್ರೀತಿ. ಊರಲ್ಲಿ ಒಂದೇ ರಡ್ಡಿ ಕುಟುಂಬ ಇದ್ದರೂ ನಾಯಕರಾಗಿಯೇ ಇರುತ್ತಾರೆ. 'ರಡ್ಡಿ' ಎಂದರೆ ಏನೋ ಒಂದು ವಿಶ್ವಾಸ, ನಂಬಿಕೆ; ಜನಸೇವೆಗೋಸ್ಕರ ಸದಾ ಮುಂದಿರುತ್ತಾರೆ. ನಾಯಕರಾಗುವುದಕ್ಕಿಂತ, ರಾಜನಾಗುವುದಕ್ಕಿಂತ ಅವರನ್ನು ಸೃಷ್ಟಿ ಮಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ. ಸಂದರ್ಭ ಬಂದರೆ ಅಧಿಕಾರದಲ್ಲಿ ಕುಳ್ಳಿರಿಸಿದವರನ್ನು ಕೆಳಗಿಳಿಸಿ ಇನ್ನೊಬ್ಬನನ್ನು ಕುಳ್ಳಿರಿಸುವ ಪ್ರಯತ್ನದಲ್ಲಿ ಸದಾ ಮುಂದಿರುತ್ತಾರೆ. ಆದ್ದರಿಂದಲೇ ಈ ಜನಾಂಗವನ್ನು ಇತರ ಜನಾಂಗದವರು ವಿಶೇಷವಾಗಿ ಪ್ರೀತಿಸುತ್ತಾರೆ.

'ಹೇಮ' ಎಂದರೆ ಸಂಸ್ಕೃತದಲ್ಲಿ ಬಂಗಾರ ಎಂದರ್ಥ. ಹೇಮರಡ್ಡಿ ಎಂದರೆ ಮಣ್ಣಲ್ಲಿ ಹೊನ್ನು ಬೆಳೆಯುವವರು. ಸಾಮಾನ್ಯ ಅರ್ಥ ಕೃಷಿಯನ್ನು ಅತ್ಯಂತ ಭಕ್ತಿಯಿಂದ, ಶ್ರದ್ಧೆಯಿಂದ ಮಾಡಿ ಸರ್ವರಿಗೂ ಅನ್ನ ನೀಡುವವರು. ಇನ್ನೊಂದು ಅರ್ಥದಲ್ಲಿ ವೇಮನ ಋಷಿಯು ಇವರಿಗೆ ತಂತ್ರ ಸಿದ್ಧಿಯಿಂದ ಬಂಗಾರ ಮಾಡುವ ಕಲೆಯನ್ನು ಹೇಳಿಕೊಟ್ಟಿದ್ದರು. ಗಿಡಮೂಲಿಕೆಗಳ ರಸಾಯನ ತಯಾರಿಸಿ ಅದರಿಂದ ಬಂಗಾರ ಮಾಡುವ ಕಲೆಯನ್ನು ಈ ಜನಾಂಗದ ಸಾಧಕರು ಕಲಿತಿದ್ದರು. ಕಾಲಾನಂತರದಲ್ಲಿ ಮಹಾಯೋಗಿ ವೇಮನರು ಆ ಸಿದ್ಧಿಯನ್ನು ವಿಸರ್ಜಿಸಿದರು.

ನಿರಾಕಾರ ಯೋಗಿಯಿಂದ ವಿಶೇಷ ಅನುಗ್ರಹ ಪಡೆದ ಈ ಜನಾಂಗ ಯೋಗ ಸಾಧನೆಗೆ, ಆಧ್ಯಾತ್ಮಿಕ ಸಾಧನೆಗೆ ಅತ್ಯಂತ ಸೂಕ್ತವಾದ ಸ್ಥಳವಾಗಿರುವ ಶ್ರೀಶೈಲದ ಶಕ್ತಿಸ್ಥಳಕ್ಕೆ ಮೇಲಿನಿಂದ ಮೇಲೆ ಹೋಗಲಾರಂಭಿಸಿತು. ಭೂಮಂಡಲದ ಮೇಲಿರುವ ಕೆಲವು ವಿಶೇಷ ಶಕ್ತಿ ಕೇಂದ್ರಗಳಲ್ಲಿ ಶ್ರೀಶೈಲದ ಜ್ಯೋತಿರ್ಲಿಂಗವೂ ಒಂದು. ಋಷಿ ಪರಂಪರೆಯ ಮೇಲೆ ವಿಶೇಷ ಪ್ರೀತಿ ಮತ್ತು ಭಕ್ತಿಯಿದ್ದ ಈ ಜನಾಂಗದವರು ರಾಜರಾದ ಮೇಲೆ ಜ್ಯೋತಿರ್ಲಿಂಗಕ್ಕೆ ದೇವಾಲಯವನ್ನು ನಿರ್ಮಿಸಿದರು. ಅಲ್ಲಿರುವ ಯೋಗ ಸಾಧಕರಿಗೆ ಸರ್ವ ರೀತಿಯ ಅನುಕೂಲತೆಗಳನ್ನು ಒದಗಿಸಿದರು. ಅತ್ಯಂತ ದುರ್ಗಮ ಸ್ಥಳವಾಗಿದ್ದ ಆ ಸ್ಥಳಕ್ಕೆ ರಸ್ತೆ ಸಂಪರ್ಕವನ್ನು ಕಲ್ಪಿಸಿ ಸಂಸಾರಸ್ಥರು ಶ್ರೀಶೈಲ ಚನ್ನಮಲ್ಲಿಕಾರ್ಜುನನ ದರ್ಶನಕ್ಕೆ ಹೋಗಲು ಅನುಕೂಲ ಮಾಡಿಕೊಟ್ಟರು. ಪಾತಾಳ ಗಂಗೆಗೆ ಮೆಟ್ಟಿಲುಗಳನ್ನು ನಿರ್ಮಿಸಿ ಪವಿತ್ರ ಸ್ನಾನಕ್ಕೆ ಅವಕಾಶವನ್ನೊದಗಿಸಿದರು. ದೇವಸ್ಥಾನದ ಸುತ್ತಲಿರುವ ರೈತರಿಗೆಲ್ಲ ಸರ್ವ ಸಹಾಯವನ್ನೊದಗಿಸಿದ ರಡ್ಡಿ ರಾಜರು ಗೋ ಸಾಕಾಣಿಕೆಯ ಜೊತೆಗೆ ಔಷಧೀಯ ಸಸ್ಯಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡಿದ್ದರಿಂದ ರಡ್ಡಿ ರಾಜ ಮನೆತನವನ್ನು

ಅಲ್ಲಿಯ ಜನ ದೇವರ ಅವತಾರವೆಂದು ಭಾವಿಸಿದ್ದರು. ರಾಜ ಮನೆತನದವರಿಗಾಗಿ ಶಾಂತಿವನವೆಂಬ ವಿಸ್ತಾರವಾದ ಅರಣ್ಯವನ್ನು, ಕೃಷಿ ಭೂಮಿಯನ್ನಾಗಿ ಅಭಿವೃದ್ಧಿ ಪಡಿಸಿದ್ದರು.

ರಡ್ಡಿ ಸಾಮ್ರಾಜ್ಯದ ಮೊದಲ ಅರಸು ಪ್ರೋಲಯ ವೇಮಾರಡ್ಡಿಯ ಬಗೆಗೆ ವರ್ಣಿಸಿದ ತಾಮ್ರ ಪತ್ರದಲ್ಲಿ ವೇದಾಧ್ಯಯನ ಮಾಡುವ ಬ್ರಾಹ್ಮಣರಿಗೆ ಅಗ್ರಹಾರಗಳನ್ನು ಸ್ಥಾಪಿಸಿದ್ದು, ಅವುಗಳ ನಿರ್ವಹಣೆಗೆ ಭೂದಾನ ಮಾಡಿದ್ದು, ಶ್ರೀಶೈಲದ ಸರ್ವತೋಮುಖ ಅಭಿವೃದ್ಧಿಗಾಗಿ ನಿರಂತರ ನಿಗಾವಹಿಸಲು ಶಾಂತಿವನ ಸ್ಥಾಪಿಸಿದ್ದು, ಪಾತಾಳ ಗಂಗೆಗೆ ಮೆಟ್ಟಿಲುಗಳನ್ನು ನಿರ್ಮಿಸಿದ್ದು, ಅಹೋಬಲಮ್‌ನಲ್ಲಿ ನರಸಿಂಹ ದೇವಸ್ಥಾನವನ್ನು ಕಟ್ಟಿಸಿದ್ದು, 108 ಶಿವನ ದೇವಸ್ಥಾನಗಳನ್ನು ಕಟ್ಟಿಸಿರುವುದನ್ನು ಉಲ್ಲೇಖಿಸಲಾಗಿದೆ. ಇದೇ ತಾಮ್ರಪತ್ರದಲ್ಲಿ ಅಪ್ರತಿಮಭೂದಾನ ಪರಶುರಾಮ ಎಂಬ ಬಿರುದಿನಿಂದ ಪ್ರೋಲಯ ವೇಮಾರಡ್ಡಿಯನ್ನು ಪ್ರಶಂಸಿಸಲಾಗಿದೆ.

ದಕ್ಷಿಣ ಭಾರತದಲ್ಲಿ ಬ್ರಿಟಿಷ ಕಂಪನಿ ಸರ್ಕಾರದ ರಾಜ್ಯ ಸ್ಥಾಪನೆಗೆ ಪ್ರಮುಖ ಪಾತ್ರವಹಿಸಿದವ ಸರ್ ಥಾಮಸ್ ಮುನ್ರೋ. ಕಂಪನಿ ಸರ್ಕಾರದ ಸೇನಾಧಿಕಾರಿಯಾಗಿ, ಮೇಜರ ಜನರಲ್‌ನಾಗಿ ಮತ್ತು ಮದ್ರಾಸದ ಗವರ್ನರ್ ಆಗಿ ಭಾರತದಲ್ಲಿ 38 ವರ್ಷ (ಕ್ರಿ.ಶ. 1779 ರಿಂದ 1827) ಸೇವೆ ಸಲ್ಲಿಸಿ ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಪಟ್ಟಿಕೊಂಡದಲ್ಲಿ ಮರಣಹೊಂದಿದ.

ಸರ್ ಥಾಮಸ್ ಮುನ್ರೋ ಕ್ರಿ.ಶ. 1800 ರಲ್ಲಿ ಬಳ್ಳಾರಿ ಜಿಲ್ಲಾಧಿಕಾರಿಯಾಗಿದ್ದಾಗ ಕಂಪನಿ ಸರ್ಕಾರ ದೊಡ್ಡ ಪ್ರಮಾಣದಲ್ಲಿ ಹಣ ಸಂಗ್ರಹಿಸುತ್ತಿರುವ ಮಂತ್ರಾಲಯದ ರಾಘವೇಂದ್ರ ಸ್ವಾಮಿ ದೇವಸ್ಥಾನವನ್ನು ವಶಪಡಿಸಿಕೊಳ್ಳುವಂತೆ ಆದೇಶಿಸಿತ್ತು. ಈ ಕೆಲಸಕ್ಕೆ ಹೋದಾಗ ರಾಘವೇಂದ್ರ ಸ್ವಾಮಿಗಳು ವೃಂದಾವನ (ಸಮಾಧಿ) ದಿಂದ ಎದ್ದು ಬಂದು ದರ್ಶನ ನೀಡಿದ್ದರಿಂದ ದೇವಸ್ಥಾನವನ್ನು ಸರ್ಕಾರ ವಶಪಡಿಸಿಕೊಳ್ಳುವುದು ಸೂಕ್ತವಲ್ಲವೆಂದು ಕಂಪನಿ ಸರ್ಕಾರಕ್ಕೆ ಪತ್ರ ಬರೆದ. ಇದರ ಒಂದು ಪ್ರತಿ ಈಗಲೂ ಮಂತ್ರಾಲಯದ ದೇವಸ್ಥಾನದಲ್ಲಿದೆ

ಈ ಘಟನೆಯಿಂದ ಪ್ರಭಾವಿತನಾಗಿದ್ದ ಸರ್ ಥಾಮಸ್ ಮುನ್ರೋ ಭಾರತೀಯ ಋಷಿಗಳ ಮತ್ತು ಯೋಗಿಗಳ ಬಗೆಗೆ ಅಧ್ಯಯನವನ್ನಾರಂಭಿಸಿದ. ಭಾರತೀಯ ಆಧ್ಯಾತ್ಮಿಕ ಪರಂಪರೆಯನ್ನು ಸಮರ್ಪಕವಾಗಿ ಅರ್ಥಮಾಡಿಕೊಳ್ಳಲು ಮತ್ತು ಕಂಪನಿ ಸರ್ಕಾರದ ಆಡಳಿತವನ್ನು ಸುಭದ್ರಗೊಳಿಸಲು ಸ್ಥಳೀಯ ಭಾಷೆಗಳನ್ನು ಕಡ್ಡಾಯವಾಗಿ ಕಲಿಯುವಂತೆ ಕಂಪನಿ ಸರ್ಕಾರದ ಅಧಿಕಾರಿಗಳಿಗೆ ಆದೇಶಿಸಿದ. ಇದರ ಅಂಗವಾಗಿ ಕಡಪಾ ಜಿಲ್ಲೆಯ ಜಿಲ್ಲಾಧಿಕಾರಿಯಾಗಿದ್ದ ಜಾನ್ ಹನ್ ಬರ್ರಿಯ



ಸಹಾಯಕ ಅಧಿಕಾರಿಯಾಗಿ ಆಗಮಿಸಿದ್ದ ಚಾರ್ಲಸ್ ಫಿಲಿಪ್ ಬ್ರೌನ್, ವೇಲಗಾಪುಡಿ ಕೋದಂಡರಾಮ ಪಂಥಲು ಅವರಿಂದ ತೆಲುಗು ಭಾಷೆಯನ್ನು ಕಲಿಯುತ್ತಿದ್ದ. ಚಾರ್ಲಸ್ ಫಿಲಿಪ್ ಬ್ರೌನ್, ಸರ್ ಥಾಮಸ್ ಮುನ್ರೋನ ಸ್ನೇಹಿತ ಕಲ್ಕತ್ತಾದಲ್ಲಿ ಕ್ರಿಶ್ಚಿಯನ್ ಧರ್ಮ ಪ್ರಚಾರಕನಾಗಿ ಕಾರ್ಯ ನಿರ್ವಹಿಸುತ್ತಿದ್ದ ಡೇವಿಡ್ ಬ್ರೌನ್‌ನ ಮಗ. ಸಂಸ್ಕೃತವನ್ನು ಆಳವಾಗಿ ಅಧ್ಯಯನ ಮಾಡಿದ್ದ ಡೇವಿಡ್ ಬ್ರೌನ್ ಭಾರತೀಯ ಋಷಿ ಪರಂಪರೆಯನ್ನು, ಯೋಗಿಗಳ ಜೀವನವನ್ನು ಭಕ್ತಿಯಿಂದ ಸ್ಮರಿಸುತ್ತಿದ್ದ. ಈತನ ಮಗನಾಗಿ ದಿನಾಂಕ 10.11.1798 ರಂದು ಕಲ್ಕತ್ತಾದಲ್ಲಿ ಜನ್ಮ ಪಡೆದವನೇ ಚಾರ್ಲಸ್ ಫಿಲಿಪ್ ಬ್ರೌನ್.

ತೆಲುಗು ಭಾಷೆಯನ್ನು ಕಲಿತ ಚಾರ್ಲಸ್ ಬ್ರೌನ್, ಅಳಿಯುವ ಸ್ಥಿತಿಯಲ್ಲಿದ್ದ ಆ ಭಾಷೆಯ ಸಮಗ್ರ ಸಾಹಿತ್ಯವನ್ನು ಮುದ್ರಿಸಿ ಅದಕ್ಕೆ ಮರುಜನ್ಮ ನೀಡಿದ. ಆದ್ದರಿಂದಲೇ ಈಗಲೂ ತೆಲುಗು ಭಾಷಿಕ ಕವಿಗಳು, ಸಾಹಿತಿಗಳು ಚಾರ್ಲಸ್ ಬ್ರೌನ್‌ರವರನ್ನು ಭಕ್ತಿಯಿಂದ ಸ್ಮರಿಸುತ್ತಾರೆ. ಈತನ ಸ್ಮರಣೆಗಾಗಿ ಹಲವಾರು ಸಂಘ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. ಮಹಾಯೋಗಿ ವೇಮನರ ಪದ್ಯಗಳನ್ನು ಸಂಗ್ರಹಿಸಿ ಇಂಗ್ಲೀಷ ಭಾಷೆಗೆ ತರ್ಜುಮೆಗೊಳಿಸಿ ಜಗತ್ತಿಗೆ ಪರಿಚಯಿಸಿದವನೇ ಚಾರ್ಲಸ್ ಬ್ರೌನ್.

ಕ್ರಿ.ಶ. 1824 ರಲ್ಲಿ ಸರ್ ಥಾಮಸ್ ಮುನ್ರೋ ಚಾರ್ಲಸ್ ಬ್ರೌನ್‌ಗೆ ಬರೆದ ಪತ್ರದಲ್ಲಿ ಮಹಾಯೋಗಿ ವೇಮನ ಮತ್ತು ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮಳ ಬಗೆಗೆ ಉಲ್ಲೇಖವಿದೆ. **"ನೀನು ತೆಲುಗು ನಾಡಿನಲ್ಲಿ ಸಮರ್ಥವಾದ ಅಧಿಕಾರಿಯಾಗ ಬೇಕಾದರೆ ಯೋಗಿ ವೇಮನನ ಪದ್ಯಗಳನ್ನು ಮತ್ತು ಆತನ ಅಣ್ಣನ ಹೆಂಡತಿ ಅನತಲ್ಲಿ ಉರ್ಫ ಮಲ್ಲಮಾಂಬೆಯ ಭಕ್ತಿ ಮತ್ತು ಸೇವಾಭಾವನೆಯನ್ನು ಅಧ್ಯಯನ ಮಾಡು"** ಎಂದು ಬರೆದಿದ್ದ. ದಕ್ಷಿಣ ಭಾರತದ ರಾಜರುಗಳ ಇತಿಹಾಸವನ್ನು ಸಂಗ್ರಹಿಸಿ ಪ್ರಕಟಿಸಿದ ಸರ್ ಥಾಮಸ್ ಮುನ್ರೋ ರಡ್ಡಿ ರಾಜರುಗಳ ದಾನಪ್ರವೃತ್ತಿಯನ್ನು, ದೈವೀಭಾವನೆಯನ್ನು, ಸಾಹಿತ್ಯ, ಸಂಗೀತ ಮತ್ತು ದೇವಸ್ಥಾನಗಳ ಜೀರ್ಣೋದ್ಧಾರದ ಕಾರ್ಯಗಳು ವಿಶೇಷವಾದವುಗಳೆಂದು ಉಲ್ಲೇಖಿಸಿದ್ದಾನೆ. ಶ್ರೀಶೈಲದಲ್ಲಿ ರಡ್ಡಿ ರಾಜರು ಸ್ಥಾಪಿಸಿದ್ದ ಶಾಂತಿವನದ ಉಲ್ಲೇಖ ಮಾಡಿರುವವನೇ ಸರ್ ಥಾಮಸ್ ಮುನ್ರೋ.

ರಡ್ಡಿ ರಾಜರು ಸಾಹಿತ್ಯ, ಸಂಗೀತ ಮತ್ತು ನೃತ್ಯ ಕಲೆಯನ್ನು ವಿಶೇಷವಾಗಿ ಪ್ರೀತಿಸುವವರಾಗಿದ್ದರಿಂದ ತಮ್ಮ ಜೀವಿತದ ಅಂತಿಮ ಕಾಲವನ್ನು ಶ್ರೀಶೈಲದ ಶಾಂತಿವನದಲ್ಲಿ ಕಳೆಯಲು ಇಚ್ಛಿಸುತ್ತಿದ್ದರು. ಮನೆಯಲ್ಲಿ ಹೆಣ್ಣುಮಕ್ಕಳ ಜನನವಾದರೆ ಮಲ್ಲಮ್ಮ ಎಂದು ನಾಮಕರಣ ಮಾಡುವುದು ಶ್ರೀಶೈಲ ಚನ್ನಮಲ್ಲಿಕಾರ್ಜುನನ್ನು ಭಕ್ತಿಯಿಂದ ಸ್ಮರಿಸುವುದಾಗಿತ್ತು. ಆದ್ದರಿಂದಲೇ ಮಹಾಯೋಗಿ ವೇಮನರ ತಾಯಿ ಕೂತುರು ಮಲ್ಲಮ್ಮ ಶ್ರೀಶೈಲ ಚನ್ನಮಲ್ಲಿಕಾರ್ಜುನನ ಆಶೀರ್ವಾದದಿಂದಲೇ ಹುಟ್ಟಿದ್ದಳೆಂದು ನಂಬಿದ ಆಕೆಯ ತಂದೆ-ತಾಯಿ ಮಲ್ಲಮ್ಮಳೆಂದು ನಾಮಕರಣ

ಮಾಡಿದ್ದರು. ರಡ್ಡಿ ರಾಜ ಮನೆತನದ ಐದನೆಯ ದೊರೆ ಕುಮಾರಗಿರಿರಡ್ಡಿಯನ್ನು ಮದುವೆಯಾಗಿದ್ದ ಕೂತುರು ಮಲ್ಲಮ್ಮ ಐದು ಮಕ್ಕಳಿಗೆ ಜನ್ಮ ನೀಡಿದ್ದಳು,. ಕೊನೆಯ ಮಗ ವೇಮನ (ಮಹಾಯೋಗಿ ವೇಮನ) ಎರಡು ವರ್ಷದವನಿರುವಾಗ; ರಡ್ಡಿ ರಾಜರುಗಳು ಆಂತರಿಕ ಕಲಹದಿಂದ ಬೇಸತ್ತು ಮತ್ತು ಕುಮಾರಗಿರಿರಡ್ಡಿಯು ರಾಜನರ್ತಕಿ ಲಕುಮಾದೇವಿಯು ಜೊತೆಯಲ್ಲಿಯೇ ಹೆಚ್ಚಿನ ಕಾಲ ಕಳೆಯಲಾರಂಭಿಸಿದ್ದರಿಂದ ಮನನೊಂದು; ವೇಮನನ ಜವಾಬ್ದಾರಿಯನ್ನು ಕುಮಾರಗಿರಿರಡ್ಡಿಯ ಸಹೋದರಿ ನರಸಾಂಬೆಗೆ ವಹಿಸಿ ಶ್ರೀಶೈಲದ ಶಾಂತಿವನಕ್ಕೆ ಆಗಮಿಸಿ ಚನ್ನಮಲ್ಲಿಕಾರ್ಜುನನ ಸೇವೆಯಲ್ಲಿ ನಿರತಳಾಗಿ ಬಿಟ್ಟಳು. ದೇವಾಲಯದ ಜೀರ್ಣೋದ್ಧಾರದ ಜೊತೆಗೆ, ಯಾತ್ರೆಗೆ ಬರುವವರಿಗೆ ಊಟ ವಸತಿಯನ್ನು ಕಲ್ಪಿಸುವ ವ್ಯವಸ್ಥೆಯನ್ನಾರಂಭಿಸಿದಳು. ಸುತ್ತಲಿನ ಹಳ್ಳಿಗಳಲ್ಲಿ ಸಾವಿರಾರು ಎಕರೆ ಭೂಮಿಯನ್ನು ಕೃಷಿ ಮತ್ತು ಗೋ ಸಾಕಾಣಿಕೆಗಾಗಿ ರಡ್ಡಿ ರಾಜರು ಅಭಿವೃದ್ಧಿ ಪಡಿಸಿದ್ದರಿಂದ ಶಾಂತಿವನಕ್ಕೆ ಜನರು ಭಕ್ತಿಯಿಂದ ಕಾಣಿಕೆಯನ್ನು ಸಲ್ಲಿಸುತ್ತಿದ್ದರು. ದೈವ ಭಕ್ತಿ, ಜನಸೇವಾ ಭಾವದಿಂದ ಕೂತುರು ಮಲ್ಲಮ್ಮಳನ್ನು ಅಲ್ಲಿಯ ಜನ ಸಾಕ್ಷಾತ್ ದೇವತೆ ಎಂದು ಪೂಜಿಸಲಾರಂಭಿಸಿದರು. ಅಂತಿಮವಾಗಿ ಶ್ರೀಶೈಲದಲ್ಲಿಯೇ ಐಕ್ಯವಾದಳು.

ಕುಮಾರಗಿರಿರಡ್ಡಿ ರಾಜ್ಯಭಾರವನ್ನೆಲ್ಲ ತನ್ನ ಸಹೋದರಿ ನರಸಾಂಬೆಯ ಗಂಡ ಕಾಟಯ ವೇಮಾರಡ್ಡಿಗೆ ವಹಿಸಿಕೊಟ್ಟದ್ದರಿಂದ ಮತ್ತು ರಾಜಮಾತೆಯಾಗಿದ್ದ ಕೂತುರು ಮಲ್ಲಮ್ಮ ಶ್ರೀಶೈಲ ಚನ್ನಮಲ್ಲಿಕಾರ್ಜುನನ ಸೇವೆಗೆ ತೊಡಗಿಸಿಕೊಂಡಿದ್ದರಿಂದ ಕುಮಾರಗಿರಿರಡ್ಡಿಯ ಮಕ್ಕಳ ಜವಾಬ್ದಾರಿಯನ್ನು ನರಸಾಂಬೆ ವಹಿಸಿಕೊಂಡಳು. ನರಸಾಂಬೆಗೆ ಒಬ್ಬಳೇ ಮಗಳು, ಹೆಸರು ಅನತಲ್ಲಿ ಉರ್ಫ ಮಲ್ಲಮಾಂಬೆ (ಈಕೆಯೇ ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮ). ಕಾಟಯ ವೇಮಾರಡ್ಡಿ ರಾಜ್ಯಭಾರವನ್ನು ವಹಿಸಿಕೊಂಡ ನಂತರ ಕುಮಾರಗಿರಿರಡ್ಡಿಯ ಐದೂ ಜನ ಮಕ್ಕಳನ್ನು ತನ್ನ ಮಕ್ಕಳಂತೆ ಪ್ರೀತಿಸಲಾರಂಭಿಸಿದ, ಕುಮಾರಗಿರಿರಡ್ಡಿಯ ಮೂರನೆ ಮಗ ವೀರಭರಮರಡ್ಡಿ ಅತ್ಯಂತ ಶೂರನಾಗಿದ್ದ; ಅಷ್ಟೇ ದೈವಿ ಭಕ್ತನಾಗಿದ್ದ. ಮಲ್ಲಮಾಂಬೆಯೂ ಸಹ ಮನೆತನದ ಸಂಪ್ರದಾಯದಂತೆ ಸದಾ ಪೂಜೆ, ಮಂತ್ರ ಜಪದ ಜೊತೆಗೆ ಜನ ಸೇವೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದ್ದಳು.

ವೀರಭರಮರಡ್ಡಿ ಮತ್ತು ಮಲ್ಲಮಾಂಬೆಯರು "ದೈವಭಕ್ತಿ" ಮತ್ತು "ಜನಸೇವಾ" ವಿಷಯದಲ್ಲಿ ಅತ್ಯಂತ ಉತ್ಸುಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ತಪಸ್ವಿಗಳನ್ನು, ಯೋಗಿಗಳನ್ನು, ಚಿಂತಕರನ್ನು ಅರಮನೆಗೆ ಆಹ್ವಾನಿಸಿ ಸತ್ಸಂಗಗಳನ್ನು ಏರ್ಪಡಿಸುತ್ತಿದ್ದರು. ಇವರ ಸಮಾನ ಮನಸ್ಥಿತಿ, ಚಿಂತನೆಗಳು ಒಬ್ಬರನ್ನೊಬ್ಬರು ಆಕರ್ಷಿಸಲಾರಂಭಿಸಿದವು. ಇದನ್ನರಿತ ಮಲ್ಲಮಾಂಬೆಯ ತಾಯಿ ನರಸಾಂಬೆ



ಮದುವೆಯನ್ನು ನಿಶ್ಚಯಿಸಿದಳು. ಇತರರ ಒಪ್ಪಿಗೆಯೊಂದಿಗೆ ಅದ್ದೂರಿಯಿಂದ ಮದುವೆಯು ನೆರವೇರಿತು. ಮದುವೆಯಾದ ನಂತರ ಮಲ್ಲಮಾಂಬೆ ತವರು ಮನೆಯಾದ ರಾಜಮಂಡ್ರಿಯಿಂದ ಕೊಂಡವೀಡುವಿನ ಅರಮನೆಗೆ ಆಗಮಿಸಿದಳು. ರಾಜಮಾತೆ ಕೂತುರು ಮಲ್ಲಾಂಬೆ ಅರಮನೆಯನ್ನು ತೊರೆದು ಶ್ರೀಶೈಲ ಚನ್ನಮಲ್ಲಿಕಾರ್ಜುನನ ಸನ್ನಿಧಿಯಲ್ಲಿರಲು ಶ್ರೀಶೈಲಕ್ಕೆ ತೆರಳಿದ್ದರಿಂದ ಆಕೆಯ ಸ್ಥಾನವನ್ನು ಮಲ್ಲಮಾಂಬೆಯು ತುಂಬಿದಳು.

ದೈವ ಭಕ್ತಳೂ, ಆದರ್ಶ ಪತ್ನಿಯೂ ಆಗಿದ್ದ ಮಲ್ಲಮಾಂಬೆ ಉತ್ಸಾಹದ ಚಿಲುಮೆಯಾಗಿದ್ದಳು. ಋಷಿಗಳ ಅನುಗ್ರಹದಿಂದ ಜನ್ಮ ಪಡೆದಿದ್ದ ಮಲ್ಲಮಾಂಬೆ ಮಹಾಸಾಧ್ವಿಯಾಗಿದ್ದಳು. ಅರಮನೆಯ ಸರ್ವರಿಗೆಲ್ಲ ಅವರವರ ಅವಶ್ಯಕತೆಗನುಸರಿಸಿ ಸಹಾಯ ಮಾಡುತ್ತಿದ್ದಳು. ಅತ್ತೆ ಕೂತುರು ಮಲ್ಲಮ್ಮನಂತೆ, ಮಲ್ಲಮಾಂಬೆಯು ಕರುಣಾಭಾವದಿಂದ ಸಹಾಯ ಮಾಡುವುದನ್ನು ಗಮನಿಸಿ; ಈಕೆಯನ್ನು ಮಾತೆ "ಮಲ್ಲಮ್ಮ"ಳೆಂದೇ ಕರೆಯಲಾರಂಭಿಸಿದರು. ಕಾಲಾಂತರದಲ್ಲಿ ಮಲ್ಲಮಾಂಬೆ ಎನ್ನುವ ಹೆಸರು ಮಲ್ಲಮ್ಮ ಎಂದಾಯಿತು.

ಸಾಮಾನ್ಯವಾಗಿ ಎಲ್ಲ ರಾಜ ಮನೆತನಗಳಲ್ಲಿರುವಂತೆ ಅಧಿಕಾರಕ್ಕಾಗಿ ಅಂತಃಕಲಹ ರಡ್ಡಿ ರಾಜ ಮನೆತನದಲ್ಲಿಯೂ ನಡೆಯುತ್ತಿತ್ತು. ಒಂದು ನೂರು ವರ್ಷಗಳಿಂದ ಆಳ್ವಿಕೆ ನಡೆಸುತ್ತಿದ್ದ ರಡ್ಡಿ ರಾಜರ ವಂಶ ವಿಸ್ತಾರವಾಗಿ ಬೆಳೆದಿತ್ತು. ರಾಜ ಪರಿವಾರದ ಅಂತಃಕಲಹ ಒಂದೆಡೆಯಾದರೆ, ವಿದೇಶಿಗಳ ದಾಳಿಯು ಇನ್ನೊಂದೆಡೆ ನಿರಂತರವಾಗಿ ನಡೆಯುತ್ತಿತ್ತು. ರಡ್ಡಿ ರಾಜವಂಶದ ಅವಸಾನದ ಸೂಚನೆ ಎನ್ನುವಂತೆ ತೀವ್ರವಾದ ಬರಗಾಲ ಸಾಮ್ರಾಜ್ಯವನ್ನು ಅಲ್ಲೋಲಕಲ್ಲೋಲ ಮಾಡಿತು. ಮಗನಂತೆ ಪ್ರೀತಿಯಿಂದ ಸಾಕಿ ಸಲುಹಿದ ವೇಮನ ಮೂಗುತಿಯ ಘಟನೆಯ ನಂತರ ಮನೆಯನ್ನು ತೊರೆದಿದ್ದ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಹಠಾತ್ತನೆ ರಾಜ್ಯದ ಮೇಲೆ ವಿದೇಶಿಯರು ದಾಳಿ ಮಾಡಿದರು. ವೀರಾವೇಶದಿಂದ ಹೋರಾಡಿ ದಾಳಿ ಹಿಮ್ಮೆಟ್ಟಿಸಿದರು ರಡ್ಡಿ ರಾಜರು. ಆದರೆ ಯುದ್ಧದಲ್ಲಿ ಗಾಯಗೊಂಡ ವೀರಭರಮರಡ್ಡಿಗೆ ತಲೆಗೆ ಬಲವಾದ ಪೆಟ್ಟು ಬಿದ್ದು ಹಲವಾರು ತಿಂಗಳುಗಳವರೆಗೆ ಅಪ್ರಜ್ಞಾವಸ್ಥೆಯಲ್ಲಿದ್ದ. ಪ್ರಜ್ಞೆ ಮರಳಿದಾಗ ಶೂರತ್ವವೆಲ್ಲ ಮರೆಯಾಗಿ ಮುಗ್ಧ ಮಗುವಿನಂತಾಗಿದ್ದ. ಜನ ವೀರಭರಮರಡ್ಡಿ ಎಂದು ಕರೆಯುತ್ತಿದ್ದವರು; ಹುಚ್ಚ ಭರಮರಡ್ಡಿ ಎನ್ನಲಾರಂಭಿಸಿದರು.

ಆದರ್ಶ ಗೃಹಣಿಯಾಗಿದ್ದ ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮ ಇದಾವುದನ್ನೂ ಗಮನಿಸದೆ ಪ್ರೀತಿಯಿಂದ, ಮಗುವಿನಂತೆ ವೀರಭರಮರಡ್ಡಿಯನ್ನು ಆರೈಕೆ ಮಾಡುತ್ತಿದ್ದಳು. ರಾಜವೈದ್ಯರು ಹಲವಾರು ವಿಧದ ಔಷಧೋಪಚಾರಗಳನ್ನು

ಮಾಡಿದರೂ ಯಾವುದೇ ಪರಿಣಾಮವಾಗಲಿಲ್ಲ. ವಿಶೇಷ ಔಷಧಿಗಳಿಗಾಗಿ ಮತ್ತು ಪ್ರಕೃತಿ ಚಿಕಿತ್ಸೆಗೆ ಶ್ರೀಶೈಲದ ಶಾಂತಿವನಕ್ಕೆ ಕರೆದುಕೊಂಡು ಹೋಗುವುದು ಸೂಕ್ತವೆನ್ನುವ ನಿರ್ಣಯ ಮಾಡಿದರು.  ವೀರಭರಮರಡ್ಡಿಯ ಜೊತೆಗೆ ಮಲ್ಲಮ್ಮಳೂ ಸಹ ಶ್ರೀಶೈಲದ ಶಾಂತಿವನಕ್ಕೆ ಆಗಮಿಸಿದಳು.

ಶ್ರೀಶೈಲಕ್ಕೆ ಆಗಮಿಸಿದ್ದರಿಂದ ಅಲ್ಲಿಯ ಶಾಂತ ಪರಿಸರ, ಒತ್ತಡ ರಹಿತ ಜೀವನ; ವಿಶೇಷ ಔಷಧೀಯ ಗುಣಗಳ ಗಿಡಮೂಲಿಕೆಗಳಿಂದ ವೀರಭರಮರಡ್ಡಿಯ ಆರೋಗ್ಯದಲ್ಲಿ ಚೇತರಿಕೆ ಕಂಡುಬಂತು. ಮಹಾಸಾಧ್ವಿ, ಸಂಸಾರ ಯೋಗಿನಿಯಾದ ಮಲ್ಲಮ್ಮಳಿಗಂತೂ ಭೂಮಂಡಲದ ಮೇಲಿನ ಸ್ವರ್ಗವೆನ್ನುವಂತಹ ಅನುಭವವಾಗಲಾರಂಭಿಸಿತು.  ನೂರು ವರ್ಷಗಳ ರಡ್ಡಿ ರಾಜರ ಭಕ್ತಿ ಪೂರ್ವಕ ಪ್ರಯತ್ನದಿಂದ ಶ್ರೀಶೈಲ. ಶ್ರೇಷ್ಠ ಆಧ್ಯಾತ್ಮಿಕ ಕೇಂದ್ರವಾಗಿ ಪರಿವರ್ತನೆಯಾಗಿತ್ತು. ಯೋಗಿಗಳಿಗೆ, ಕಠೋರ ತಪಸ್ವಿಗಳಿಗೆ ಮಾತ್ರ ಸೀಮಿತವಾಗಿದ್ದ ದುರ್ಗಮ ಪ್ರದೇಶವಾಗಿದ್ದ ಶ್ರೀಶೈಲ ಸಾಮಾನ್ಯರಿಗೂ ಶಾಂತಿ–ಸಮಾಧಾನವನ್ನು ಸ್ವಲ್ಪವಾದರೂ ಅನುಭವಿಸಲು ತನ್ನನು ತಾನು ತೆರೆದುಕೊಂಡಿತ್ತು.  ಇದಕ್ಕೆಲ್ಲ ಕೇಂದ್ರ ಬಿಂದುವಾಗಿ ಕಾರ್ಯ ಮಾಡುತ್ತಿದ್ದ ಮಹಾರಾಣಿ ಕೂತುರು ಮಲ್ಲಾಂಬೆ ಐಕ್ಯಳಾಗಿದ್ದಳು. ರಡ್ಡಿ ರಾಜ ಮನೆತನದ ಈಕೆಯನ್ನು ಅಲ್ಲಿಯ ಜನ ಪ್ರೀತಿಯಿಂದ ಹೇಮರಡ್ಡಿ ಮಲ್ಲಮ್ಮಳೆಂದು ಕರೆಯುತ್ತಿದ್ದರು. ತವರು ಮನೆಯಿಂದ ಗಂಡನ ಮನೆಗೆ ಬಂದಾಗ ಮಲ್ಲಮಾಂಬೆಯ ಹೆಸರು ಮಲ್ಲಮ್ಮಳೆಂದು ಪರಿವರ್ತನೆಯಾಗಿತ್ತು, ಶ್ರೀಶೈಲಕ್ಕೆ ಬಂದಾಗ ಹೇಮರಡ್ಡಿ ಮಲ್ಲಮ್ಮಳೆಂದು ಬದಲಾವಣೆಯಾಯಿತು.

## ಶ್ರೀಶೈಲದಲ್ಲಿ ಹೇಮರಡ್ಡಿ ಮಲ್ಲಮ್ಮ

ಶ್ರೀಶೈಲ ಕ್ಷೇತ್ರವು ಭಾರತದ ಪುರಾತನವಾದ ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಅತ್ಯಂತ ಮಹತ್ವದ್ದಾಗಿದೆ. ಕಾರಣ ಭೂಮಿಯ ಮೇಲಿನ ಅತ್ಯಂತ ಪ್ರಭಾವಶಾಲಿಯಾದ ಹದಿನೆಂಟು ಶಕ್ತಿ ಕೇಂದ್ರಗಳಲ್ಲಿ ಒಂದಾದದ್ದು ಶ್ರೀಶೈಲ ಕ್ಷೇತ್ರ. ಜ್ಯೋತಿರ್ಲಿಂಗ ಮತ್ತು ಶಕ್ತಿ ಪೀಠವು ಜೊತೆಯಾಗಿ ಕೇಂದ್ರೀಕೃತವಾದ ಏಕೈಕ ಸ್ಥಾನವು ಈ ಶ್ರೀಶೈಲ ಕ್ಷೇತ್ರ. ಶಿವನನ್ನು ಲಿಂಗ ರೂಪದಲ್ಲಿಯ ಮಲ್ಲಿಕಾರ್ಜುನನೆಂದು, ಪಾರ್ವತಿಯನ್ನು ಭ್ರಮರಾಂಬಾ ರೂಪದಲ್ಲಿ ಪೂಜಿಸಲಾಗುತ್ತಿದೆ.

ಈ ಭೂಮಂಡಲದ ಪ್ರಾಣಿ ಜಗತ್ತಿನಲ್ಲಿ ಕೇವಲ ಮಾನವ ಜೀವಿ ಮಾತ್ರ ದೇವಾಲಯಗಳನ್ನು ಕಟ್ಟುವ ಮನಸ್ಥಿತಿಯನ್ನು ಹೊಂದಿದ್ದಾನೆ. ಪ್ರಾಣಿ ಪಕ್ಷಿಗಳು ತಮ್ಮ ತಮ್ಮ ದೇಹದ ಸಂರಕ್ಷಣೆಗೆ ಮತ್ತು ಮರಿಗಳಿಗೆ ಜನ್ಮ ನೀಡಲು ಸೂಕ್ತವಾದ ವಾಸಸ್ಥಳಗಳನ್ನು ನಿರ್ಮಿಸಿಕೊಳ್ಳುತ್ತವೆ. ದೇವರಿಗಾಗಿ ವಾಸಸ್ಥಳಗಳನ್ನು ನಿರ್ಮಿಸುವ ಏಕೈಕ ಜೀವಿ ಎಂದರೆ ಅದು ಮಾನವ ಜೀವಿ.



ಮಾನವ ಆರಂಭದಲ್ಲಿ ಪ್ರಾಣಿಗಳಂತೆ ಅನಾಗರಿಕ ಜೀವನ ಸಾಗಿಸುತ್ತಿದ್ದ. ಆಗ ಯಾವುದೇ ದೇವರನ್ನಾಗಲಿ, ದೇವಸ್ಥಾನಗಳನ್ನಾಗಲಿ ನಿರ್ಮಿಸಲಿಲ್ಲ. ಮಾನವನ ಪ್ರಜ್ಞೆಯು ವಿಕಾಸವಾಗಲಾರಂಭಿಸಿದಾಗ ಪ್ರಕೃತಿಯ ವಿಸ್ಮಯವನ್ನರಿತು, ಪ್ರಕೃತಿಯನ್ನು ಪೂಜಿಸಲಾರಂಭಿಸಿದ. ಸೂರ್ಯ, ಚಂದ್ರ, ಗಾಳಿ, ಮಳೆ ಬೆಂಕಿ ಮತ್ತು ಉಪಯುಕ್ತ ಗಿಡಮರಗಳನ್ನು ಪೂಜಿಸಲಾರಂಭಿಸಿದ. ಪ್ರಜ್ಞೆಯ ವಿಕಾಸವು ಅಂತಿಮ ಹಂತವನ್ನು ತಲುಪಿದಾಗ ಸಮಸ್ತ ಬ್ರಹ್ಮಾಂಡದ ಸೃಷ್ಟಿಗೆ ಕಾರಣವಾಗಿರುವ ಶಕ್ತಿಯನ್ನು ಅರಿಯುವ ಪ್ರಯತ್ನವನ್ನಾರಂಭಿಸಿದ.  ಈ ಪ್ರಯತ್ನದಲ್ಲಿ ಗ್ರಹಿಸಿದ ಶಬ್ದವೇ ಮಂತ್ರಗಳಾದವು. ಮಂತ್ರಗಳೇ ನಮ್ಮ ಧಾರ್ಮಿಕ ಗ್ರಂಥಗಳಾಗಿ ಪ್ರಕಟವಾದವು. ದೇವಸ್ಥಾನಗಳು ಈ ಮಂತ್ರಗಳ ಮೇಲೆ ಅನುಸಂಧಾನ ನಡೆಸುವ ಪೂಜ್ಯನೀಯ ಸ್ಥಳಗಳಾಗಿ ಜನ್ಮತಾಳಿದವು.

ಮಾನವ ಪ್ರಜ್ಞೆಯು ಅತ್ಯುನ್ನತ ಸ್ಥಿತಿಯನ್ನು ತಲುಪಿದ ಹಲವಾರು ಋಷಿ ಮುನಿಗಳು, ಯೋಗಿಗಳು, ಪರಮಸತ್ಯದೊಂದಿಗೆ ಸಾವಿರಾರು ವರ್ಷಗಳವರೆಗೆ ಅನುಸಂದಾನ ಮಾಡಿದ ಕ್ಷೇತ್ರಗಳೇ ಈ "ದ್ವಾದಶ ಜ್ಯೋತಿರ್ಲಿಂಗಗಳು" ಮತ್ತು "ಶಕ್ತಿ ಕೇಂದ್ರಗಳು".  ಮಾನವ ಪ್ರಜ್ಞೆಯು ಅಂತಿಮ ಹಂತವನ್ನು ಸ್ಪರ್ಶಿಸಿದಾಗ ದೇಹ ಪತನವಾಗುತ್ತದೆ. ಅನೇಕ ಜೀವಾತ್ಮಗಳು ಪ್ರಜ್ಞೆಯ ಅಂತಿಮ ಹಂತವನ್ನು ತಲುಪಿ ದೇಹಾತೀತವಾದ ಆ ಸ್ಥಳಕ್ಕೂ ಮತ್ತು ಅವು ಸೇರುವ ಅಲೌಕಿಕ ನೆಲೆಗೂ ಮಧ್ಯ ಒಂದು ಸಂಪರ್ಕ ಸೇತುವೆ ನಿರ್ಮಾಣವಾಗುತ್ತದೆ. ಈ ಸಂಪರ್ಕ ಸೇತುವೆಗಳೇ ಜ್ಯೋತಿರ್ಲಿಂಗಗಳು ಮತ್ತು ಶಕ್ತಿ ಕೇಂದ್ರಗಳಾಗಿವೆ. ಇವುಗಳು ಸ್ವಯಂಚಾಲಿತ, ಪ್ರಜ್ಞಾಶೀಲ, ಆಧ್ಯಾತ್ಮ ಪ್ರವಾಹ ನಿರಂತರವಾಗಿ ಹರಿಯುತ್ತಿರುವ ಪವಿತ್ರವಾದ ತೀರ್ಥ ಕ್ಷೇತ್ರಗಳಾಗಿವೆ.

ಇಂತಹ ಕ್ಷೇತ್ರಗಳಲ್ಲಿ ಅತ್ಯಂತ ಮಹತ್ವದ ಕ್ಷೇತ್ರವಾದ ಶ್ರೀಶೈಲಕ್ಕೆ ಹೇಮರಡ್ಡಿ ಮಲ್ಲಮ್ಮ ಆಗಮಿಸಿದ್ದು ದೈವ ಲೀಲೆಯ ಮಹತ್ವದ ಘಟನೆ ಎಂದರೆ ತಪ್ಪಾಗಲಾರದು. ನೂರು ವರ್ಷಗಳಿಂದ ಶ್ರೀಶೈಲ ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಿದ್ದ ರಡ್ಡಿ ರಾಜರು ಇಲ್ಲಿಯ ಜನರಿಗೆಲ್ಲ ದೈವ ಸ್ವರೂಪರಾಗಿಯೇ ಕಾಣುತ್ತಿದ್ದರು. ಅದರಲ್ಲಿಯೂ ಹೇಮರಡ್ಡಿ ಮಲ್ಲಮ್ಮಳ ದೈವಿ ಕಳೆ, ಪತಿ ಭಕ್ತಿ, ಅಸಹಾಯಕರಿಗೆ, ನೊಂದವರಿಗೆ ಸಹಾಯ ಹಸ್ತವನ್ನೀಡುವ ಕರುಣಾ ಭಾವವನ್ನು ಗಮನಿಸಿದ ಜನ ಆಕೆಯನ್ನು ಸಾಕ್ಷಾತ್ ದೇವತೆಯನ್ನಾಗಿ ಪೂಜಿಸಲಾರಂಭಿಸಿದರು.

ಹೇಮರಡ್ಡಿ ಮಲ್ಲಮ್ಮ ಶ್ರೀಶೈಲ ಚನ್ನಮಲ್ಲಿಕಾರ್ಜುನನ ಸನ್ನಿಧಿಗೆ ಆಗಮಿಸಿ ಹಲವಾರು ವರ್ಷಗಳೇ ಕಳೆದವು. ದೇವಸ್ಥಾನಗಳ ಜೀರ್ಣೋದ್ಧಾರ ಮತ್ತು ಯಾತ್ರಾರ್ಥಿಗಳಿಗೆ ಅವಶ್ಯಕವಿರುವ ಮೂಲಭೂತ ಸೌಲಭ್ಯಗಳು ಸಮರ್ಪಕವಾಗಿ ನೆರವೇರಿದವು. ಈ ಕಾರ್ಯಕ್ಕಾಗಿ ಸಾವಿರಾರು ಜನ ತಮ್ಮನ್ನು ತಾವು

ಸಮರ್ಪಿಸಿಕೊಂಡಿದ್ದರಿಂದ; ಕ್ಷೇತ್ರ ತೀವ್ರವಾದ ಅಭಿವೃದ್ಧಿಯನ್ನು ಹೊಂದಿತು. ಶ್ರೀಶೈಲ ಚನ್ನಮಲ್ಲಿಕಾರ್ಜುನನ ದರ್ಶನಕ್ಕೆ ಜನ ಪ್ರವಾಹದ ರೂಪದಲ್ಲಿ ಬರಲಾರಂಭಿಸಿದರು. ಜನ ಸೇವಾ ಕಾರ್ಯಗಳು ಸಮರ್ಪಕವಾಗಿ ನಡೆಯುವುದನ್ನು ಗಮನಿಸಿದ ಹೇಮರಡ್ಡಿ ಮಲ್ಲಮ್ಮಳ ಮನಸ್ಸು ಏಕಾಂತಕ್ಕಾಗಿ ಹಂಬಲಿಸಲಾರಂಭಿಸಿತು. ಇದಕ್ಕಾಗಿ ಚನ್ನಮಲ್ಲಿಕಾರ್ಜುನನ ದೇವಸ್ಥಾನದ ಪಶ್ಚಿಮ ದಿಕ್ಕಿಗೆ ಒಂದು ಕಿಲೋಮೀಟರ ದೂರದಲ್ಲಿರುವ ಪ್ರಶಾಂತವಾದ ಜಾಗೆಯನ್ನು ಆಯ್ಕೆ ಮಾಡಿಕೊಂಡು ವಾಸಸ್ಥಳವನ್ನು ಬದಲಾಯಿಸಿದಳು.

ಹೇಮರಡ್ಡಿ ಮಲ್ಲಮ್ಮ ತನ್ನ ಅಂತಿಮ ದಿನಗಳನ್ನು ಕಳೆದಳೆಂದು ನಂಬಿರುವ ಈ ಕ್ಷೇತ್ರ ಅತ್ಯಂತ ಪ್ರಶಾಂತವಾದ, ಆಧ್ಯಾತ್ಮಿಕ ಸಾಧನೆಗೆ ಸೂಕ್ತವಾದ, ಸಾಮಾನ್ಯ ಜನರ ಪ್ರಭಾವ ಅತೀ ಕಡಿಮೆ ಇರುವ ಸ್ಥಳವದು. ಹಲವಾರು ಜನ ಸಾಧಕರು ಆಧ್ಯಾತ್ಮಿಕ ಸಾಧನೆ ಮಾಡಿ ಸಿದ್ಧಿಯನ್ನು ಪಡೆದು, ಅದನ್ನು ಹಲವಾರು ಜನ ಸಾಧಕರಿಗೆ ವರ್ಗಾಯಿಸಿ ಐಕ್ಯವಾದ ಸ್ಥಳವದು.

ಈ ಸ್ಥಳಕ್ಕೆ ಆಗಮಿಸಿದ ಮೇಲೆ ಮಲ್ಲಮ್ಮ ಹೆಚ್ಚಿನ ಸಮಯವನ್ನು ಧ್ಯಾನದಲ್ಲಿಯೇ ಕಳೆಯುತ್ತಿದ್ದಳು. ಪರಮ ಸತ್ಯದ ಅನುಸಂಧಾನವನ್ನರಸಿ ಬರುವ ಮುಮುಕ್ಷುಗಳಿಗೆ ಮಾರ್ಗ ತೋರಿಸುವ ಸತ್ಸಂಗಗಳು ಪ್ರಾರಂಭವಾದವು. ಜನ ಸಾಮಾನ್ಯರ ಲೌಕಿಕ ಸಮಸ್ಯೆಗಳು ಚನ್ನಮಲ್ಲಿಕಾರ್ಜುನನ ದೇವಸ್ಥಾನಕ್ಕೆ ಸೀಮಿತವಾದವು. ಪಾರಮಾರ್ಥದಲ್ಲಿ ವಿಶೇಷ ಆಸಕ್ತಿ ಇರುವವರು ಮಾತ್ರ ಮಲ್ಲಮ್ಮಳ ದರ್ಶನಕ್ಕೆ ಬರುತ್ತಿದ್ದರು. ಅಲ್ಲಿ ಹೆಚ್ಚಿನ ಮಾತುಗಳಿಗೆ ಅವಕಾಶವಿರಲಿಲ್ಲ. ಹೆಚ್ಚಿನ ಸಂದೇಶಗಳು, ಅನುಗ್ರಹಗಳು ಮೌನದಲ್ಲಿಯೇ ಹರಿದು ಬರುತ್ತಿದ್ದವು. ಜೀವನದ ಸಕಲ ಆಯಾಮಗಳಲ್ಲಿ ಹಾಯ್ದು ಬಂದ ಮಲ್ಲಮ್ಮ ಅಲೌಕಿಕ ಪರಿಧಿಯಲ್ಲಿ ಉಪಸ್ಥಿತಳಾಗಿದ್ದಳು. ಸಮಸ್ತ ಪ್ರಪಂಚವನ್ನು ನಡೆಸುವ ದೈವಶಕ್ತಿ ಮಲ್ಲಮ್ಮಳನ್ನು ಕೇಂದ್ರವಾಗಿಸಿ ಲೋಕ ಕಲ್ಯಾಣದ ಕೆಲಸಗಳನ್ನು ಪ್ರಾರಂಭಿಸಿತ್ತು.

ಭಾರತೀಯ ಋಷಿ ಪರಂಪರೆಯ ವ್ಯಕ್ತರೂಪವಾಗಿದ್ದ ಮಲ್ಲಮ್ಮ, ಗುಹೆಯಲ್ಲಿ ಧ್ಯಾನಸ್ಥಳಾಗುತ್ತಿದ್ದಳು. ಜನಕಲ್ಯಾಣದ ಭಾವದಿಂದ ನಿರಂತರವಾಗಿ ತಪೋನಿಷ್ಠಳಾದ ಮಲ್ಲಮ್ಮ ಸಾಕ್ಷಾತ್ ಯೋಗಿನಿಯಾಗಿ ವಿಜೃಂಭಿಸಲಾರಂಭಿಸಿದಳು. ನಿರಂತರವಾದ ಧ್ಯಾನಾವಸ್ಥೆಯಿಂದ ದೈವಶಕ್ತಿಯ ಪ್ರಭಾವಳಿ ಆಕೆಯ ಸುತ್ತಲೂ ಪ್ರಜ್ವಲಿಸುತ್ತಿತ್ತು. ಸಂಸಾರದ ಕಷ್ಟ–ನಷ್ಟಗಳಿಗೆ ಪರಿಹಾರ ಕೇಳಿ ಬರುವ ಜನಸಾಮಾನ್ಯರು, ಕೇವಲ ಆಕೆಯ ದರ್ಶನದಿಂದ ಪರಿಹಾರಗಳನ್ನು ಪಡೆಯುತ್ತಿದ್ದರು. ಮಾನವ ಜೀವನದ ಅಂತಿಮ ಸತ್ಯವನ್ನರಿತು, ಮುಕ್ತಿ ಬಯಸುವ ಆಧ್ಯಾತ್ಮಿಕ ಸಾಧಕರಿಗೆ ಮೌನದಲ್ಲಿಯೇ ಮಾರ್ಗದರ್ಶನ ದೊರೆಯುತ್ತಿತ್ತು.



ಅಲ್ಲಿ ಯಾವ ಬಾಹ್ಯ ಆಚರಣೆಗಳಿಗೆ ಅವಕಾಶವಿರಲಿಲ್ಲ. ಅಪರೂಪಕ್ಕೊಮ್ಮೆ ಸತ್ಸಂಗಗಳು ನಡೆಯುತ್ತಿದ್ದವು. ಮಲ್ಲಮ್ಮಳ ದರ್ಶನಕ್ಕೆ ಬರುವವರೆಲ್ಲ ಮೌನವಾಗಿ ಮಲ್ಲಮ್ಮಳ ಮುಂದೆ ಕುಳಿತು ದರ್ಶನಾಶೀರ್ವಾದಗಳನ್ನು ಪಡೆದು ಪ್ರಸಾದ ಸ್ವೀಕರಿಸಿ ತೆರಳುತ್ತಿದ್ದರು. ರಡ್ಡಿ ರಾಜಮನೆತನದ ಸುಪರ್ಧಿಯಲ್ಲಿರುವ ಶಾಂತಿವನದಿಂದ, ಅವಶ್ಯಕ ಸೌಲಭ್ಯಗಳು ಸರಬರಾಜಾಗುತ್ತಿದ್ದವು. ದಿನಕಳೆದಂತೆ ಧ್ಯಾನಾವಸ್ಥೆ ವಿಸ್ತಾರವಾಗುತ್ತಿತ್ತು. ಆರಂಭದಲ್ಲಿ ದಿನಕ್ಕೆ ಎರಡು ಮೂರು ಗಂಟೆಗಳವರೆಗೆ ಧ್ಯಾನ ಮಾಡುತ್ತಿದ್ದ ಮಲ್ಲಮ್ಮಳ ಧ್ಯಾನಾವಸ್ಥೆ ಎರಡು ಮೂರು ದಿನಗಳವರೆಗೆ ಮುಂದುವರೆಯಲಾರಂಭಿಸಿತು. ಇದೇ ಮುಂದುವರೆದು ಹಲವಾರು ದಿನಗಳವರೆಗೆ ಸಮಾಧಿ ಸ್ಥಿತಿ ಮುಂದುವರೆಯಲಾರಂಭಿಸಿತು.

ದೇಹಭಾವ ಬ್ರಹ್ಮಭಾವವಾಗಿ ವಿಕಾಸವಾಗುತ್ತಿತ್ತು. ದೇಹಭಾವ ಕಳಚಲಾರಂಭಿಸಿತ್ತು. ಮಲ್ಲಮ್ಮಳ ದೇಹದಲ್ಲಿ ಸ್ಪಂದಿಸುತ್ತಿರುವ ಜೀವಾತ್ಮದ ಪ್ರಜ್ಞಾವಲಯ ತನ್ನ ಅತ್ಯುನ್ನತ ಸ್ಥಿತಿಯನ್ನು ತಲುಪುವ ಹಂತದಲ್ಲಿತ್ತು. ಸಾವಿರಾರು ವರ್ಷಗಳಿಂದ ಅನೇಕ ಋಷಿ ಮುನಿಗಳು ಯೋಗಸಮಾಧಿಯನ್ನು ಸಾಧಿಸಿದ ಆ ಸ್ಥಳದಲ್ಲಿ ಮಲ್ಲಮ್ಮಳ ಪ್ರಜ್ಞಾವಲಯದಲ್ಲಿ ಋಷಿ ಮುನಿಗಳು ಪ್ರತ್ಯಕ್ಷವಾಗಲಾರಂಭಿಸಿದರು. ಇದರಿಂದ ಆ ಕ್ಷೇತ್ರ ದೇಹಭಾವದಿಂದ ಆತ್ಮದೆಡೆಗೆ ಶಕ್ತಿಯ ಪ್ರವಾಹವಾಗಿ ಹರಿಯುವ ದೈವೀಶಕ್ತಿಯ ಕೇಂದ್ರವಾಗಿ ವಿದ್ಯುಕ್ತಗೊಂಡಿತು. ಸಾಮಾನ್ಯ ಜನರೂ ಕೂಡ ತಮ್ಮ ಮನಸ್ಸನ್ನು ಬಯಲಿನಲ್ಲಿ ಹರವಿಕೊಂಡು ಕುಳಿತರೆ ಸಾಕು ಅಂತರಾತ್ಮನ ಕಡೆಗೆ ಪ್ರಯಾಣ ತನ್ನಷ್ಟಕ್ಕೆ ತಾನೇ ಪ್ರಾರಂಭವಾಗಲಾರಂಭಿಸಿತು. ಅಲ್ಲಿಗೆ ಬರುವ ಅನೇಕರಿಗೆ ತಮಗರಿವಿಲ್ಲದೆ ಸಕಲ ಸಿದ್ಧಿಗಳು ಪ್ರಾಪ್ತವಾಗಲಾರಂಭಿಸಿದವು.

## ವಿದೇಹಿಯಾದ ಹೇಮರಡ್ಡಿ ಮಲ್ಲಮ್ಮ

ಪ್ರಕೃತಿ ಮಾನವನಿಗೆ ದೇಹವನ್ನು ದಯಪಾಲಿಸಿದ್ದು, ಜೀವನದ ಅಂತಿಮ ಸತ್ಯವನ್ನರಿತು ಅದರಲ್ಲಿ ಐಕ್ಯವಾಗಲು. ದೇಹ ಪರಮಸತ್ಯದ ಮೂಲವನ್ನರಿತು ಅದರ ಮೂಲ ಸ್ಥಿತಿ ಪರಮಾನಂದದಲ್ಲಿ ಲೀನವಾಗಲು ಉಪಯೋಗಿಸುವ ಸಾಧನ. ಮುಕ್ತಿಯ ಮಾರ್ಗ. ನಿರ್ವಾಣದೆಡೆಗೆ ಕರೆದೊಯ್ಯುವ ಸಾಧನ. ಬಯಲ ಅಸ್ತಿತ್ವವನ್ನರಿಯುವ ಯಂತ್ರ. ದೇಹದಲ್ಲಿರುವ ಜೀವಾತ್ಮ ಪರಮಸತ್ಯವಾದ ಆತ್ಮಾನುಭಾವದಲ್ಲಿ ಲೀನವಾದಾಗ ಕಾಯಿ ಹಣ್ಣಾಗಿ ಗಿಡದಿಂದ ಕಳಚಿ ಬೀಳುವಂತೆ, ಜೀವಾತ್ಮ ದೇಹದಿಂದ ಬಿಡುಗಡೆಯಾಗುತ್ತದೆ. ಇದನ್ನೇ ವಿದೇಹ ಪ್ರಾಪ್ತಿ ಎನ್ನಲಾಗುತ್ತಿದೆ. ಈ ಪ್ರಕ್ರಿಯೆಯಲ್ಲಿ ದೇಹ ತನ್ನ ಮೂಲ ಪಂಚಭೂತಗಳಲ್ಲಿ ಲೀನವಾಗುವುದರೊಂದಿಗೆ ಕಣ್ಮರೆಯಾಗುತ್ತದೆ; ಆದರೆ ಆ ದೇಹದ ಮೂಲಕ ಹೊರಹೊಮ್ಮಿದ ಮಾನವನ

ಕಲ್ಯಾಣಕ್ಕೆ ಮಾರ್ಗದರ್ಶಕವಾದ ತತ್ವ-ಸಿದ್ಧಾಂತಗಳು ನಮ್ಮೊಂದಿಗೆ ಸದಾ ಜೀವಿಸಲಾರಂಭಿಸುತ್ತವೆ. ಅವರ ದೇಹವಿರದಿದ್ದರೂ ದೇಹಾತೀತವಾಗಿ ಅವರು ತಮ್ಮ ಸಂದೇಶಗಳ ಮೂಲಕ ಸಾವಿರಾರು ವರ್ಷಗಳವರೆಗೆ ಜೀವಂತವಾಗಿರುತ್ತಾರೆ.

ಕಾಲದ ಪರಿಮಿತಿಗೊಳಪಟ್ಟ ಮಲ್ಲಮ್ಮಳ ದೇಹ ತನ್ನ ಕಾರ್ಯವನ್ನು ಮುಗಿಸಿದ ಕೃತಜ್ಞತಾ ಭಾವದಲ್ಲಿತ್ತು. ಜೀವಾತ್ಮ ಪರಮಾತ್ಮದಲ್ಲಿ ಲೀನವಾಗುತ್ತಿತ್ತು. ಈ ಅಪರೂಪದ ಕ್ಷಣಕ್ಕೆ ಸಾಕ್ಷಿಯಾಗಲು ದೇವಲೋಕದ ದೇವತೆಗಳೆಲ್ಲ ಶ್ರೀಶೈಲದ ಆ ಕ್ಷೇತ್ರದಲ್ಲಿ ಪ್ರತ್ಯಕ್ಷರಾಗಿದ್ದರು. ಅಂದು ಶಿವರಾತ್ರಿ; ಶ್ರೀಶೈಲ ಚನ್ನಮಲ್ಲಿಕಾರ್ಜುನನ ದೇವಸ್ಥಾನದಲ್ಲಿ ಶಿವನಾಮಸ್ಮರಣೆ ಅವ್ಯಾಹತವಾಗಿ ನಡೆಯುತ್ತಿತ್ತು. ಅಲ್ಲಿಂದ ಒಂದು ಕಿಲೋಮೀಟರ ದೂರದಲ್ಲಿರುವ ಇಂದು "ಮಲ್ಲಮ್ಮನ ಕಣ್ಣೀರು" ಎಂದು ನಂಬಿರುವ ಆ ಸ್ಥಳದಲ್ಲಿ ಅಂದು ಮಲ್ಲಮ್ಮ ತನ್ನ ಜನಕಲ್ಯಾಣದ ಕಾರ್ಯಗಳನ್ನು ದೇಹರಹಿತವಾಗಿ ಮಾಡುವ ಸಂಕಲ್ಪ ಮಾಡಿದ್ದಳು. ಈ ಅಪರೂಪದ ಕ್ಷಣಕ್ಕಾಗಿ ಶ್ರೀಶೈಲ ಚನ್ನಮಲ್ಲಿಕಾರ್ಜುನ ದೇವಲೋಕದ ದೇವತೆಗಳೊಂದಿಗೆ ಆಗಮಿಸಿದ್ದ.

ಹೇಮರಡ್ಡಿ ಮಲ್ಲಮ್ಮಳ ಜೀವಾತ್ಮ ಪರಮಾತ್ಮನಲ್ಲಿ ಲೀನವಾಗುವ ಕೊನೆ ಕ್ಷಣದಲ್ಲಿ ನಿಧಾನವಾಗಿ ಕಣ್ತೆರೆದಳು. ಜೀವಾತ್ಮ-ಪರಮಾತ್ಮದ ಅನುಸಂದಾನದ ಆ ಕ್ಷಣವನ್ನು ಕಣ್ತುಂಬ ನೋಡಿ ಕೃತಾರ್ಥರಾಗಲು ದೇವತೆಗಳೊಂದಿಗೆ, ಹಲವಾರು ವಿದೇಹಿ ಋಷಿಗಳು, ಯೋಗಿಗಳು ಪ್ರತ್ಯಕ್ಷರಾಗಿದ್ದರು. ಇವರೆಲ್ಲರನ್ನು ನೋಡಿದ ತಕ್ಷಣ ಮಲ್ಲಮ್ಮಳ ಕಣ್ಣಿನಿಂದ ಆನಂದ ಬಾಷ್ಪಗಳು ಉದುರಿದವು. ಆ ಆನಂದಭಾಷ್ಪಗಳು ಉದುರಿ ಭೂಮಿಯನ್ನು ತಲುಪಿದ ಜಾಗದಲ್ಲಿ ಅಂತರಾಳದಿಂದ ಗಂಗಾ ಮಾತೆ ಉದ್ಭವವಾಗಿ ಹರಿಯಲಾರಂಭಿಸಿದಳು. ಈ ಘಟನೆ ನಡೆದು ಸುಮಾರು 600 ವರ್ಷಗಳಾದರೂ ಇಂದಿಗೂ ಆ ಜಾಗದಲ್ಲಿ ಹರಿಯುತ್ತಿರುವ ಜಲಧಾರೆ ಬತ್ತಿಲ್ಲ. ಇದನ್ನೇ ಜನರು ಜನಪದ ಭಾಷೆಯಲ್ಲಿ "ಮಲ್ಲಮ್ಮನ ಕಣ್ಣೀರು" ಎಂದು ಆ ಕ್ಷೇತ್ರವನ್ನು ಸಂಬೋಧಿಸುತ್ತಾರೆ. ಅದು ದುಃಖದಿಂದುಂಟಾದ ಕಣ್ಣೀರಲ್ಲ; ಮಲ್ಲಮ್ಮಳಿಗೆ ಜ್ಞಾನೋದಯವಾದಾಗ ಆಕೆಯ ಕಣ್ಣಿನಿಂದ ಉದುರಿದ ಆನಂದ ಬಾಷ್ಪಗಳು.

ನಿಧಾನವಾಗಿ ಎರಡೂ ಕೈಗಳನ್ನು ಜೋಡಿಸಿ ನೆಲ ಮುಟ್ಟುವವರೆಗೆ ತಲೆಯನ್ನು ಬಾಗಿಸಿ ಸರ್ವರಿಗೂ ನಮಸ್ಕರಿಸಿದಳು. ಇದನ್ನು ನೋಡಿದ ದೇವತೆಗಳೆಲ್ಲರೂ ಗಾಬರಿಯಾದರು. "ಪರಮ ಸತ್ಯವನ್ನು ಸಾಕ್ಷಾತ್ಕರಿಸಿಕೊಂಡು ಸಾಕ್ಷಾತ್ ಬ್ರಹ್ಮಸ್ವರೂಪವಾಗಿರುವ ನೀನು ಯಾರಿಗೆ ನಮಸ್ಕರಿಸುತ್ತಿರುವೆ?" ಎಂದರು. ಆಗ ಮಹಾಸಾಧ್ವಿ ಮಲ್ಲಮ್ಮ ಹೇಳಿದಳು "ನಾನೀಗ ಯಾವ ಸ್ಥಿತಿಯಲ್ಲಿರುವೆನೋ ಅದಕ್ಕಾಗಿ ನಾನೊಬ್ಬಳೇ ಕಾರಣವಲ್ಲ ಇಡೀ ಜಗತ್ತೇ ಇದರಲ್ಲಿ ಭಾಗಿಯಾಗಿದೆ. ಆದ್ದರಿಂದ ಇಡೀ ಜಗತ್ತಿಗೆ ಕೃತಜ್ಞತೆಗಳನ್ನು ಅರ್ಪಿಸುವ ಸಲುವಾಗಿ ಭೂಮಿಗೆ ತಲೆಬಾಗಿಸಿದೆ" ಎಂದಳು.



"ಕಾರಣ, ಈ ಸ್ಥಿತಿ ಪ್ರಾಪ್ತಿಯಾಗಲು ಇಡೀ ಬ್ರಹ್ಮಾಂಡವೇ ನನ್ನೊಂದಿಗೆ ಬಾಗಿಯಾಗಿದೆ. ಸೂರ್ಯೋದಯವಾಗದಿದ್ದರೆ, ಮಳೆಯಾಗದಿದ್ದರೆ, ಗಾಳಿ ಬೀಸದಿದ್ದರೆ, ಜನರು ಕಷ್ಟಪಟ್ಟು ದುಡಿದು ನನಗೆ ಅನ್ನಹಾಕದಿದ್ದರೆ ನನಗೆ ದೊರೆತ ಈ ಅನುಭವ ಸಾಧ್ಯವಾಗುತ್ತಿತ್ತೇ? ಆದ್ದರಿಂದ ನಾನು ಅವರಿಗೆಲ್ಲ ಧನ್ಯವಾದಗಳನ್ನು ಸಲ್ಲಿಸಿದೆನು" ಎಂದಳು.

ಮಲ್ಲಮ್ಮ "ನಾನು ಜ್ಞಾನೋದಯವನ್ನು ಸಾಧಿಸಿದ್ದೇನೆ" ಎಂದು ಹೇಳಲಿಲ್ಲ. ಆಕೆ ಹೇಳಿದ್ದು, "ನನ್ನ ಮೂಲಕ ಇಡೀ ಜಗತ್ತು ಇದರ ಅನುಭವವನ್ನು ಪಡೆದಿದೆ. ಜ್ಞಾನೋದಯದ ಈ ಘಟನೆ, ಈ ಅಪ್ರತಿಮ ಬೆಳಕು ನನ್ನ ಮೂಲಕ ಜಗತ್ತು ಕಂಡುಕೊಂಡಿದೆ. ನಾನೊಂದು ನೆಪ, ನಿಮಿತ್ತ ಮಾತ್ರ, ಈಗ ನಾನು ಜಗತ್ತಿನ ಎಲ್ಲ ದಾರಿಗಳು ಕೂಡಿಕೊಂಡಿರುವ ಒಂದು ಕೂಡುಹಾದಿ ಮಾತ್ರ. ನೀವು ಎಂದಾದರೂ ಯೋಚಿಸಿದ್ದೀರಾ? ಹಲವು ದಾರಿಗಳು ಕೂಡುವ ವೃತ್ತ ಮಹತ್ವದ್ದು ಎನಿಸಿದರೂ, ಅದಕ್ಕೆ ಸ್ವಂತಿಕೆ ಎನ್ನುವುದು ಇರುವುದಿಲ್ಲ. ಅಲ್ಲಿ ಕೂಡಿಕೊಳ್ಳುತಿರುವ ನಾಲ್ಕು ದಾರಿಗಳನ್ನು ತೆಗೆದು ಬಿಟ್ಟರೆ ಆ ವೃತ್ತದ ಮಹತ್ವ ಮಾಯವಾಗುತ್ತದೆ. ನಾವೆಲ್ಲರೂ ವಿಶ್ವದ ಅನೇಕ ರೀತಿಯ ಶಕ್ತಿಗಳು ಒಂದನ್ನೊಂದು ಸಂಧಿಸುವ ಬಿಂದುಗಳು ಮಾತ್ರ. ಅಂತಹ ಬಿಂದುಗಳಿಂದ ಶರೀರಗಳು ನಿರ್ಮಾಣವಾಗಿ ಪರಮ ಸತ್ಯವನ್ನು ಅರಿತ ಮೇಲೆ ಅದು ಲಯವಾಗಬೇಕಲ್ಲವೇ?" ಎನ್ನುತ ನಿಧಾನವಾಗಿ ಪದ್ಮಾಸನದಲ್ಲಿ ಕುಳಿತು ಕಣ್ಣು ಮುಚ್ಚಿ ಧ್ಯಾನಸ್ಥಳಾದಳು. ಹಣೆಯ ಮಧ್ಯದ ಭಾಗದಲ್ಲಿರುವ ಆಜ್ಞಾಚಕ್ರದಲ್ಲಿ ಜ್ಯೋತಿಯೊಂದು ಕಾಣಲಾರಂಭಿಸಿತು. ಆ ಜ್ಯೋತಿಯ ಪ್ರಖರತೆ ಹೆಚ್ಚಾಗುತ್ತಾ ಬೆಳಕು ವಿಸ್ತಾರವಾಗಲಾರಂಭಿಸಿತು. ಪರಂಜ್ಯೋತಿಯ ಪ್ರಖರವಾದ ಬೆಳಕಿನಲ್ಲಿ ದೇಹ ಲೀನವಾಯಿತು.

## ಹೇಮರಡ್ಡಿ ಮಲ್ಲಮ್ಮಳ ಪವಾಡಗಳು

ಪವಾಡವೆಂದರೆ "ಸಹಜವಾಗಿ ವಿವರಣೆ ಕೊಡಲು ಸಾಧ್ಯವಾಗದ ಅಪರೂಪದ ಮಾನವನಿಂದಾಗುವ ಕೆಲಸಗಳು, ಸಾಮಾನ್ಯ ಮಾನವನ ಬುದ್ಧಿಗೆ, ಕಲ್ಪನೆಗೆ ನಿಲುಕಲಾರದ ಹಲವಾರು ವಿಸ್ಮಯಗಳು ಕೆಲವು ಮಾನವ ಜೀವಿಗಳಿಂದ ನಡೆದಿವೆ, ನಡೆಯುತ್ತಿವೆ. ಕೆಲವು ಸಂದರ್ಭಗಳಲ್ಲಿ ಮಾನವನ ಕಲ್ಪನೆಯಲ್ಲಿ ಅಸಾಧ್ಯವೆನ್ನುವ ಕೆಲಸಗಳು ನಡೆದಾಗ ಅವುಗಳಿಗೆ ಪವಾಡವೆನ್ನುತ್ತೇವೆ.

ಅಮಾವಾಸೆಯ ದಿನ ಶಿಶುವಿನಾಳ
ಶರೀಫರು ಹುಣ್ಣಿಮೆಯ ಚಂದ್ರನನ್ನು
ತೋರಿಸಿದ್ದು

ಗುರುಗೋವಿಂದ ಬಟ್ಟರು ತಾವು
ಕುಡಿಯುತ್ತಿದ್ದ ಮದ್ಯವನ್ನು
ಹಾಲನ್ನಾಗಿ ಪರಿವರ್ತಿಸಿದ್ದು

ಬುದ್ಧ ನಡೆದಾಡುವ ದಾರಿಗಳಲ್ಲೆಲ್ಲ
ಒಣಗಿದ ಗಿಡಗಳು ಸಹ ತಕ್ಷಣಕ್ಕೆ
ಹಸಿರಾಗಿ, ಸುಂದರ ಹೂಗಳನ್ನರಳಿಸಿ
ನೆರಳನ್ನು ಮತ್ತು ಸುವಾಸನೆಯನ್ನೊದಗಿಸಿದ್ದು,

ಸತ್ತ ಆಕಳು ಎದ್ದು ನಿಂತು
ರಮಣ ಮಹರ್ಷಿಗೆ ಹಾಲನ್ನು ನೀಡಿದ್ದು

ಕೃಷ್ಣ ಪರಮಾತ್ಮ ತಾಯಿ
ಯಶೋದಾಳಿಗೆ ತನ್ನ ಬಾಯಿಯಲ್ಲಿಯೇ
ಬ್ರಹ್ಮಾಂಡ ತೋರಿಸಿದ್ದು

ಮಹಾವೀರ ವಾಸವಿದ್ದ ಅರಣ್ಯದ
ಸುತ್ತಲಿರುವ ಹುಲಿಗಳು
ಹಿಂಸೆಯನ್ನು ತೊರೆದು ಉಪವಾಸ
ಮಾಡಿದ್ದು

ಶಂಕರಾಚಾರ್ಯರು ಸತ್ತ ಯುವರಾಜನ
ಶರೀರದಲ್ಲಿ ಪ್ರವೇಶ ಮಾಡಿ ಆ
ಶರೀರದ ಮೂಲಕ ಸಂಸಾರದ
ಅನುಭವವನ್ನು ಪಡೆದದ್ದು

ಯಾವುದೇ ಶಿಕ್ಷಣ ಪಡೆಯದೆ, ಓದಲು
ಬರೆಯಲೂ ಸಹ ಬರದ ಮಹಮ್ಮದ
ಪೈಗಂಬರರು "ಗಾರೆ ಹೀರಾ"
ಗುಹೆಯಲ್ಲಿರುವಾಗ "ಓದು ಓದು"
ಎಂದು ದೇವದೂತ ಹೇಳಿದ್ದು;
ಆ ಮೂಲಕ ಓದನ್ನಾರಂಭಿಸಿ
"ಕುರಾನ್" ಆವರ್ತಿತವಾದದ್ದು



ಶಿಲುಬೆಯ ಮೇಲೆ
ಕಾಲಿಗೆ ಕೈಗೆ ಮೊಳೆಯನ್ನು
ಹೊಡೆದು, ಮುಳ್ಳು ತಂತಿಯ ಕಿರೀಟವನ್ನು
ತಲೆಗೆ ಹಾಕಿ ಮರಣದಂಡನೆ
ಕೊಟ್ಟರೂ ಮತ್ತೆ ಪುನರುತ್ಥಾನವಾಗಿ
ದರ್ಶನ ನೀಡಿದ ಏಸುಮಹಾಸ್ವಾಮಿ

ಹೈದರಾಬಾದ ನಿಜಾಮ,
ಮಂತ್ರಾಲಯದ ರಾಘವೇಂದ್ರರಾಯರ
ದೈವಶಕ್ತಿಯನ್ನು ಪರೀಕ್ಷಿಸಲು
ತಟ್ಟೆಯಲ್ಲಿ ಮಾಂಸವನ್ನಿಟ್ಟು ಮೇಲೆ
ಬಟ್ಟೆಯನ್ನು ಮುಚ್ಚಿ, ಇದು ತಮಗೆ
ಪ್ರಸಾದವೆಂದು ಹೇಳಿದಾಗ, ತಮ್ಮ
ಕೈಯಲ್ಲಿರುವ ಕಮಂಡಲದಿಂದ ಅದರ
ಮೇಲೆ ನೀರನ್ನು ಚಿಮುಕಿಸಿ
ಬಟ್ಟೆಯನ್ನು ತೆರೆದಾಗ ಮಾಂಸ
ಹಣ್ಣುಗಳಾಗಿ ಪರಿವರ್ತನೆಯಾದದ್ದು.

ಮಹಾಯೋಗಿ ವೇಮನರು ತನ್ನ
ಹೊಟ್ಟೆಯಲ್ಲಿರುವ ಕರಳುಗಳನ್ನು
ಹೊರಗೆ ತೆಗೆದು, ಅವುಗಳನ್ನು ತೊಳೆದು
ಮತ್ತೆ ಹೊಟ್ಟೆಯಲ್ಲಿ ಹಾಕಿಕೊಂಡು
ತನ್ನ ತಾಯಿಗೆ ತೋರಿಸಿದ್ದು.

ವೇಮನರ ತಾಯಿಯ ಕೊರಳಲ್ಲಿರುವ
ತಾಮ್ರದ ದುಡ್ಡನ್ನು ವೇಮನರು
ಮುಟ್ಟುವ ಮೂಲಕ ಬಂಗಾರ ಮಾಡಿದ್ದು,

ಈ ರೀತಿಯ ಹಲವಾರು ಪವಾಡಗಳು ನಡೆದದ್ದನ್ನು ಇತಿಹಾಸದಲ್ಲಿ ಉಲ್ಲೇಖಿಸಲಾಗಿದೆ. ಇದೇ ರೀತಿ ಹಲವಾರು ಪವಾಡಗಳನ್ನು ಹೇಮರಡ್ಡಿ ಮಲ್ಲಮ್ಮ ಮಾಡಿದಳೆಂದು ಪುರಾಣಗಳಲ್ಲಿ ಉಲ್ಲೇಖ ಮಾಡಲಾಗಿದೆ. ಅವುಗಳೆಂದರೆ,

ಹೇಮರಡ್ಡಿ ಮಲ್ಲಮ್ಮಳನ್ನು ಕಾಮುಕ
ದೃಷ್ಟಿಯಿಂದ ನೋಡಿದ ಯುವಕನಿಗೆ
ಪಾರ್ಶ್ವವಾಯುವಿನ ರೋಗ ಉಂಟಾದದ್ದು.
ಮಲ್ಲಮ್ಮ ಕರುಣೆಯಿಂದ ಆತನನ್ನು
ಮುಟ್ಟಿದ ತಕ್ಷಣ ರೋಗ ಗುಣಮುಖವಾದದ್ದು.

ಶ್ರೀಶೈಲ ಚನ್ನಮಲ್ಲಿಕಾರ್ಜುನನಿಗೆ
ಕುರುಡ ಭಕ್ತನೊಬ್ಬ ತನ್ನ ಕಣ್ಣು
ಗಳಿಗಾಗಿ ಬೇಡಿಕೊಂಡಾಗ; ನೀನು
ಮಲ್ಲಮ್ಮಳ ಹತ್ತಿರ ಹೋಗು ಆಕೆ ಮಾತ್ರ
ನಿನಗೆ ಕಣ್ಣುಗಳನ್ನು ದಯಪಾಲಿಸುವಳೆಂದನು,
ಆಗ ಆತನು ಮಲ್ಲಮ್ಮಳ ದರ್ಶನಕ್ಕೆ ಬಂದಾಗ
ಆಕೆ ತನ್ನ ಕೈಯಲ್ಲಿರುವ ಸೆಗಣಿಯನ್ನು
ಆತನ ಕಣ್ಣಿಗೆ ಸ್ಪರ್ಶಿಸಿದಾಗ ಆತನಿಗೆ
ಕಣ್ಣುಗಳು ಬಂದದ್ದು.

ಚನ್ನಮಲ್ಲಿಕಾರ್ಜುನ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ
ಹಣದ ಕೊರತೆಯಾದಾಗ, ಸೆಗಣಿಯ ತಿಪ್ಪೆಯನ್ನೇ
ಬಂಗಾರ ಮಾಡಿದ್ದು.

ಪ್ರತಿ ದಿನ ಹೇಮರಡ್ಡಿ ಮಲ್ಲಮ್ಮ
ಜಂಗಮರಿಗೆ ಪ್ರಸಾದ ನೀಡದೆ ಊಟ ಮಾಡುತ್ತಿರಲಿಲ್ಲ,
ಇದರಿಂದ ಕುಪಿತಳಾದ ಅತ್ತೆ ಒಂದು ದಿನ
ಮಲ್ಲಮ್ಮಳ ಕೈಯಲ್ಲಿ ಬೆಂಕಿಯನ್ನಿಟ್ಟು ಅದನ್ನು
ಮಹಾತ್ಮರಿಗೆ ನೀಡೆಂದಾಗ, ಆಕೆಯ ಕೈಯಲ್ಲಿರುವ
ಬೆಂಕಿ ಮಹಾತ್ಮರ ಜೊಳಿಗೆಗೆ ಬೀಳುವಾಗ
ಆಹಾರ ಧಾನ್ಯವಾಗಿ ಪರಿವರ್ತನೆಯಾದದ್ದು.
ಹೊಲಕ್ಕೆ ಬಿತ್ತಲು ಜೋಳವನ್ನು
ತೆಗೆದುಕೊಂಡು ಹೋಗುವಾಗ, ದಾರಿಯಲ್ಲಿ
ಜಂಗಮನೊಬ್ಬ ಬಿಕ್ಷೆ ಕೇಳಿದಾಗ ಜೋಳದ



ಬೀಜವನ್ನೆಲ್ಲ ಆತನ ಜೋಳಿಗೆಗೆ ಹಾಕಿದಳು.
ಬೀಜವೆಲ್ಲಿ? ಎಂದು ಬಿತ್ತುವವರು ಕೇಳಿದಾಗ
ದೇವರನ್ನು ಸ್ಮರಿಸುತ್ತ ಬಗಸೆಯಲ್ಲಿ
ಮಣ್ಣನ್ನು ತೆಗೆದುಕೊಂಡು ಇದನ್ನೆ
ಬಿತ್ತಿರಿ ಎಂದಳಂತೆ. ಆ ಮಣ್ಣೇ ಮುಂದೆ
ಬೆಳೆಯಾಗಿ ಪರಿವರ್ತನೆಯಾದದ್ದು.

ಮುಗ್ದ ಭಕ್ತೆಯೊಬ್ಬಳು
"ಅಮ್ಮ ನೀನು ಮುಟ್ಟಿದ್ದೆಲ್ಲ ಬಂಗಾರವಾಗುತ್ತ–
ದೆಯಂತೆ, ದಯವಿಟ್ಟು ಈ ಹಣ್ಣನ್ನು ಮುಟ್ಟಿ
ಬಂಗಾರ ಮಾಡಿ ನನ್ನ ಬಡತನವನ್ನು
ದೂರ ಮಾಡು" ಎಂದು ಭಿನ್ನವಿಸಿಕೊಂಡಾಗ ಆ
ಹಣ್ಣನ್ನು ಮುಟ್ಟಿ ಬಂಗಾರ ಮಾಡಿದ್ದು.

ಮಲ್ಲಮ್ಮಳಿಗೆ ಅತ್ತೆ, ನಾದಿನಿಯರು
ಅಪಾರವಾದ ಕಷ್ಟವನ್ನು ಕೊಟ್ಟರು. ಇದರಿಂದ
ಕುಪಿತನಾದ ಚನ್ನಮಲ್ಲಿಕಾರ್ಜುನ ಅವರಿಗೆಲ್ಲ
ಮೈ ಉರಿಯುವ ರೋಗದ ಶಿಕ್ಷೆ ಕೊಟ್ಟ.
ಈ ರೋಗದಿಂದ ಮುಕ್ತಗೊಳಿಸಲು ಮಲ್ಲಮ್ಮ–
ಳಿಗೆ ಅವರೆಲ್ಲ ಶರಣಾಗಿ ಬಂದಾಗ.
"ದೇವರಾದ ನೀನು ಕ್ಷಮಿಸಿ ಬುದ್ದಿ ಹೇಳಬೇಕೆ
ವಿನಃ ಶಿಕ್ಷಿಸಬಾರದು" ಎಂದು ಶ್ರೀಶೈಲ ಚನ್ನಮಲ್ಲಿಕಾರ್ಜುನ–
ನಿಗೆ ಭಕ್ತಿಯಿಂದ ವಿನಂತಿಸಿಕೊಂಡು ಅವರೆಲ್ಲರ
ಶಾಪ ವಿಮೋಚನೆ ಮಾಡಿದ್ದು.

ದೇವರಿಗೆ ನೈವೇದ್ಯಮಾಡಲು ಅತ್ತೆ ಪದ್ಮಾವತಿ
ಹಳಸಿದ ಅಂಬಲಿಯನ್ನು ನೀಡಿದಾಗ
ಮಲ್ಲಮ್ಮ ಅದನ್ನು ದೇವರಿಗೆ ನೈವೇದ್ಯ ಮಾಡಿದಾಗ
ಅದು ಪ್ರಸಾದವಾಗಿ ಪರಿವರ್ತನೆಯಾದದ್ದು.

ಮಾವ ಕುಮಾರಗಿರಿರಡ್ಡಿ ತಿರುಪತಿಯ
ವೆಂಕಟರಮಣನ ದರ್ಶನಕ್ಕೆ ಹೋಗಬೇಕೆಂದು ಆಶಿಸಿದ–

ಆದರೆ ದೇಹ ದೂರದ ಪ್ರಯಾಣವನ್ನು
ಮಾಡುವಂತಿರಲಿಲ್ಲ ಇದನ್ನು
ಮಲ್ಲಮ್ಮಳಿಗೆ ಹೇಳಿದಾಗ ಶ್ರೀಶೈಲದ ಲಿಂಗದಲ್ಲಿಯೇ
ತಿರುಪತಿಯ ವೆಂಕಟರಮಣನ ದರ್ಶನ ಮಾಡಿಸಿದ್ದು.

ದೇಹವನ್ನು ತೊರೆಯುವ ಅಂತಿಮ
ಕ್ಷಣದಲ್ಲಿ ತನ್ನ ಕುಲಬಾಂಧವರಾದ
ರಡ್ಡಿ ಜನಾಂಗಕ್ಕೆ ಎಂದೂ ಬಡತನ ಬರಬಾರದೆಂದು,
ರಡ್ಡಿ ಬಂಗಾರದ ಕಡ್ಡಿಯಂತಾಗಲೆಂದು
ಅನುಗ್ರಹಿಸಿದ್ದು.

ಹೀಗೆ ಹಲವಾರು ಪವಾಡಗಳನ್ನು ವಿವಿಧ ಪುರಾಣಕಾರರು ಉಲ್ಲೇಖಿಸಿದ್ದಾರೆ. ಆದರೆ ಇದರಿಂದ ಜನ ಸಾಮಾನ್ಯರಿಗೆ ದೊರೆಯುವುದೇನು? ಯಾರಾದರೂ ಇದನ್ನು ಈಗ ಮಾಡಲು ಸಾಧ್ಯವೇ? ಕಳೆದ 600 ವರ್ಷಗಳಿಂದ ಈಕೆಯ ಜೀವನವನ್ನಾಧರಿಸಿ ನಿರಂತರವಾಗಿ ಪುರಾಣಗಳನ್ನು ಪುಣ್ಯಕಥೆಗಳನ್ನು ಹೇಳುತ್ತಿದ್ದಾರೆ. ನಾಟಕಗಳನ್ನು ಸೃಷ್ಟಿಸಿದ್ದಾರೆ. ಇದರಿಂದ ಆದದ್ದೇನು? ಸಾಮಾನ್ಯ ಮಾನವ ಜೀವಿಗಳಿಗೆ ಆಕೆಯ ವ್ಯಕ್ತಿತ್ವ ಸರಳವಾಗಿ ತಿಳಿಯಲಾರದಂತೆ ದೇವತೆಯನ್ನಾಗಿಸಿ ಪೂಜಿಸಲಾರಂಭಿಸಿದ್ದು.

ಆಕೆಯು ಐಕ್ಯಳಾದಳೆಂದು ನಂಬಿರುವ ಕ್ಷೇತ್ರದಲ್ಲಿ ದೇವಾಲಯವನ್ನು ಸೃಷ್ಟಿಸಲಾಗಿದೆ. ಆಕೆಗೆ ಜ್ಞಾನೋದಯವಾದ ಸ್ಥಳವೆಂದು ನಂಬಲಾಗಿರುವ ಗಿಡಕ್ಕೆ ತೊಟ್ಟಿಲನ್ನು ಕಟ್ಟಲಾಗಿದ್ದು, ಅದರಲ್ಲಿ ಹಣವನ್ನಿಟ್ಟು ತೂಗಿದರೆ ಮಕ್ಕಳಾಗುತ್ತವೆ. ಎನ್ನುತ್ತಾರೆ. ಆಕೆಯು ಕುಟ್ಟಿದ ಒಳ್ಳಿನಲ್ಲಿ ಒಣಕೆಯನ್ನು ನಿಲ್ಲುವಂತೆ ಮಾಡಿದರೆ ಇಷ್ಟಾರ್ಥಗಳೆಲ್ಲ ನೆರವೇರುತ್ತವೆ ಎನ್ನುತ್ತಾರೆ. ಮಲ್ಲಮ್ಮ ತನ್ನ ಅಂತಿಮ ದಿನಗಳನ್ನು ಕಳೆದಳೆಂದು ನಂಬಿರುವ ಜಾಗದಲ್ಲಿ, ಆ ಕಾಲದ ಮಾದರಿಯಲ್ಲಿ ಮನೆಯನ್ನು ನಿರ್ಮಿಸಿ ಅದರಲ್ಲಿ ಎರಡು ಮಣ್ಣಿನ ಗಡಿಗೆಗಳನ್ನಿಟ್ಟಿದ್ದಾರೆ. ಆ ಗಡಿಗೆಯ ಮುಂದೆ ಹಣವನ್ನಿಟ್ಟು ಗಡಿಗೆಯ ಬಾಯಿಗೆ ಕಿವಿಯನ್ನಿಟ್ಟು ಕೇಳಿದರೆ, ಮಲ್ಲಮ್ಮ ಬೀಸುವ ಸಪ್ಪಳ ಕೇಳಿಸುತ್ತದೆ ಎನ್ನುತ್ತಾರೆ.

ದೈವಶಕ್ತಿಯಿಂದ ಕಂಪಿಸುತ್ತಿದ್ದ ಪ್ರಶಾಂತವಾದ, ಧ್ಯಾನ ಸಾಧನೆಗೆ ಅತ್ಯಂತ ಪ್ರಶಸ್ತವಾಗಿದ್ದ ಆ ಪವಿತ್ರ ಕ್ಷೇತ್ರವಿಂದು ಕಂದಾಚಾರಗಳಿಂದ ನರಳುತ್ತಿದೆ. ಸತ್ ಚಿಂತನೆ, ಸತ್ಸಂಗಗಳು ನಡೆಯುತ್ತಿದ್ದ ಆ ಜಾಗದಲ್ಲಿ ಲೌಕಿಕ ಸಮಸ್ಯೆಗಳಿಗೆ ಪರಿಹಾರ ಹುಡುಕಿಕೊಂಡು ಬರುವವರಿಗೆ ಇಲ್ಲ ಸಲ್ಲದ ಆಚರಣೆಗಳನ್ನು ಹೇಳಿ ಆ ಮೂಲಕ



ಹಣಗಳಿಸುವ ಕೇಂದ್ರವಾಗಿದೆ. **ತಮ್ಮನ್ನು ತಾವು ಬದಲಾವಣೆ ಮಾಡಿಕೊಳ್ಳದೇ, ಇರುವ ತಮ್ಮ ಸ್ಥಿತಿಯನ್ನು ಎದುರಿಸಲಾಗದೆ. ದೊರೆತ ಸೌಭಾಗ್ಯಗಳನ್ನು ಅನುಭವಿಸಲಾಗದೆ, ಭಯ ಮತ್ತು ಬೇಡಿಕೆಯ ಭಾವನೆಯನ್ನೇ ಭಕ್ತಿ ಎಂದು ಬರುವವರನ್ನು ದೇವರ ಹೆಸರಿನಲ್ಲಿ ಮೋಸಗೊಳಿಸಿ ಹಣಗಳಿಸುವದು ನಮ್ಮ ಪರಂಪರೆಗಂಟಿದ ಶಾಪ.**

## ಮಲ್ಲಮ್ಮಳ ದರ್ಶನಕ್ಕೆ ನಾವು ಮಾಡಬೇಕಾದದ್ದು

1. ಜೀವನದಲ್ಲಿ ಬರುವ ಕಷ್ಟ–ನಷ್ಟಗಳನ್ನು ಗೋಳಾಡದೆ ಸ್ವೀಕರಿಸುವುದು. ಇದೇ ಮೂಲ ಸತ್ಯದರ್ಶನಕ್ಕೆ ಮಾರ್ಗ.
2. ಪ್ರತಿಯೊಂದು ಘಟನೆ ದೈವನಿಯಮಿತ; ಮಾಡುವವ **"ನಾನು"** ಎನ್ನುವುದೇ **'ಅಹಂ'** ಭಾವ. ಮಾಡುವವರು ನಾವಲ್ಲ ಎಲ್ಲವನ್ನೂ ಮಾಡುವ ಪ್ರಕೃತಿ ಆ ಕೆಲಸದಲ್ಲಿ ನಮ್ಮನ್ನು ಉಪಯೋಗಿಸುತ್ತದೆ ಎನ್ನುವ ಮೂಲ ಸತ್ಯವನ್ನು ಅರಿಯಬೇಕು.
3. ಗಂಡ ಹೆಂಡತಿ ಮಕ್ಕಳು, ಸಂಸಾರ, ಸಮಾಜವೆನ್ನುವುದೆಲ್ಲ ಮಾಯೆ, ಭ್ರಮೆ ಎಂದು ಮಾತನಾಡುತ್ತ ಕಾಲಹರಣ ಮಾಡಿ ಸಾಯದೇ. ಪರಮ ಸತ್ಯದ ದರ್ಶನಕ್ಕೆ ಈ ದೇಹ ಒಂದು ಸಾಧನವೆಂದು ತಿಳಿದು. ಅದನ್ನು ಪಾಲನೆ ಪೋಷಣೆ ಮಾಡಲು ನಿರಂತರವಾಗಿ ಕಾಯಕದಲ್ಲಿ ತೊಡಗಿರುವುದು.
4. ಮನಸ್ಸನ್ನು ಸದಾ ದೇವರ ಸ್ಮರಣೆಯಲ್ಲಿಡುವುದು. ಇದೊಂದೆ ಸಂಸಾರದ, ದೇಹದ ಸರ್ವರೋಗಗಳಿಗೆ ರಾಮಬಾಣ, ಮುಕ್ತಿಯ ಸರಳ ಮಾರ್ಗ.
5. ಮಲ್ಲಮ್ಮಳಂತೆ, ಏನೇ ಕಷ್ಟಗಳು ಬಂದರೂ ಯಾರನ್ನೂ ದೂಷಿಸದೆ, ಶಾಂತವಾಗಿರುವುದು. ಸರ್ವರಿಗೂ ಸದಾ ಒಳಿತನ್ನೇ ಬಯಸುವುದು. ನಿರಂತರ ಕ್ಷಮಾ ಗುಣದಲ್ಲಿರುವುದು.
6. ಸದಾ ಕರುಣಾ ಭಾವದಲ್ಲಿದ್ದು ಪರೋಪಕಾರಕ್ಕಾಗಿ ಸದಾ ಹಂಬಲಿಸುತ್ತಿರುವುದು. ಇದೇ ನಿಜವಾದ ದೇವರ ಪೂಜೆ.
7. ತನ್ನನ್ನು ದ್ವೇಷಿಸುವವರನ್ನು ಪ್ರೀತಿಸುವ ಮೂಲಕ ಅವರೂ ಪರಿವರ್ತನೆ–ಯಾಗುವಂತೆ ಪ್ರೇರೇಪಿಸುವುದು. ನಂತರ ಅವರು ಕ್ಷಮೆ ಕೇಳಿದಾಗ ಅವರನ್ನು ಕೀಳು ದೃಷ್ಟಿಯಿಂದ ನೋಡದೆ; ತನ್ನಂತೆ ಅವರನ್ನು ಹೃದಯಪೂರ್ವಕವಾಗಿ ಗೌರವಿಸುವುದು.

8. ಗೃಹಸ್ಥರಿಗೆ ಬಾಹ್ಯ ಸಂನ್ಯಾಸ ಬೇಕಿಲ್ಲ. ಮಾಡುವ ಕೆಲಸಗಳೆಲ್ಲವೂ ಪರಮಾತ್ಮನ ಅನುಗ್ರಹವೆಂದು ಸದ್ಭಾವನೆಯಿಂದ ಮಾಡುವುದು. ನಾನು ಮಾಡುತ್ತಿರುವುದೆಲ್ಲ ದೈವ ನಿಯಮಿತ; ಇಲ್ಲಿ "ನಾನು" ಎನ್ನುವುದು ಇಲ್ಲವೇ ಇಲ್ಲ ಎನ್ನುವುದನ್ನು ಅರಿತಾಗ ಅಂತರಂಗದಲ್ಲಿ ನಿಧಾನವಾಗಿ ವಿರಕ್ತಿಯು ಉತ್ಪನ್ನವಾಗುತ್ತದೆ. ನಿಧಾನವಾಗಿ ಸಂಸಾರದ ಜವಾಬ್ದಾರಿಗಳನ್ನು ಮಕ್ಕಳಿಗೆ ವಹಿಸಿಕೊಟ್ಟು ಮೊಮ್ಮಕ್ಕಳೊಂದಿಗೆ ಆಟವಾಡುತ್ತ, ದೇಹ ಶಕ್ತಿ ಕುಂದಿದಾಗ ನಿರಂತರವಾಗಿ ಪರಮಾತ್ಮನನ್ನು ಧ್ಯಾನಿಸುತ್ತ ದೇಹ ಭಾವವನ್ನು ಮೀರಿ, ಪ್ರೀತಿಯಿಂದ, ಭಕ್ತಿಯಿಂದ, ಧನ್ಯತಾ ಭಾವದಿಂದ ದೇಹವನ್ನು ತೊರೆಯಬೇಕು.

9. ತಮ್ಮ ನಿತ್ಯ ಜೀವನಕ್ಕೆ ಅವಶ್ಯವಿರುವಷ್ಟು ಹಣವನ್ನು ಧರ್ಮ ಮಾರ್ಗದಲ್ಲಿ ಸಂಗ್ರಹಿಸಬೇಕು. ಹೆಚ್ಚಿನದಕ್ಕೆ ಆಸೆ ಪಡಬಾರದು. ಹೆಚ್ಚಿಗೆ ಸಂಗ್ರಹವಾದರೆ ಅದನ್ನು ಬಡವರ, ಅಸಹಾಯಕರ, ಸಂನ್ಯಾಸಿಗಳ, ಯೋಗಿಗಳ ಸೇವಾ ಕಾರ್ಯಕ್ಕೆ ವಿನಿಯೋಗಿಸುವುದೇ ದೇವರ ಸೇವೆ ಎನ್ನುವ ಮೂಲ ಸತ್ಯವನ್ನು ಅರಿಯಬೇಕು.

10. ಹಣದ ಕೊರತೆ ಇರುವವರು, ಜೀವನ ನಿರ್ವಹಣೆಗೆ ನಿರಂತರವಾಗಿ ದುಡಿಯುವ ಸಂದರ್ಭ ಬಂದಾಗ. ಪರಮಾತ್ಮನ ನಾಮಸ್ಮರಣೆಯಿಂದ ಶಕ್ತಿಯನ್ನು ಪಡೆಯಬೇಕು. ಕೆಲಸ ಕೊಟ್ಟವರ ಸರಿ–ತಪ್ಪುಗಳನ್ನು ಗಮನಿಸದೆ ತಮ್ಮ ಕೆಲಸವನ್ನು ಶ್ರದ್ಧೆಯಿಂದ ಮಾಡಬೇಕು.

11. ಆಧ್ಯಾತ್ಮಿಕ ಚಿಂತನೆಯನ್ನು, ಮಾನವ ಜನ್ಮದ ಪವಿತ್ರತೆಯನ್ನು ಮಕ್ಕಳಿಗೆ ಚಿಕ್ಕಂದಿನಿಂದಲೇ ಭೋದಿಸಬೇಕು. ಕಂದಾಚಾರಗಳಿಗೆ ಅವಕಾಶವಿಲ್ಲದಂತೆ ದೇವರು, ಧರ್ಮ, ಧ್ಯಾನ, ಜಪ, ಮಂತ್ರೋಚ್ಚಾರಣೆಗಳ ವಾಸ್ತವಿಕ ಸತ್ಯವನ್ನು ಅರ್ಥ ಮಾಡಿಸಬೇಕು.

12. ಗುರುವಿನ ಅನುಗ್ರಹವಿಲ್ಲದೆ ಜ್ಞಾನ ಪ್ರಾಪ್ತಿಯಾಗದು. ಸರಳತೆ, ಶರಣಾಗತಿ ಭಾವದಲ್ಲಿ ನಿತ್ಯ ಕಾಯಕದ ಮೂಲಕ ಜನಸೇವೆ ಮಾಡುತ್ತ ಸತ್ಯ ದರ್ಶನಕ್ಕೆ ಹಂಬಲಿಸುವವರನ್ನು ಗುರು ತನ್ನಷ್ಟಕ್ಕೆ ತಾನೇ ಹುಡುಕಿಕೊಂಡು ಬರುತ್ತಾನೆ. ಇಲ್ಲವಾದರೆ ನಿಮ್ಮಂತರಂಗದಲ್ಲಿಯೇ ಸದ್ಗುರು ಉದ್ಭವವಾಗುತ್ತಾನೆ.

13. ಸಂನ್ಯಾಸವೆಂದರೆ ಮದುವೆ ಮಾಡಿಕೊಳ್ಳದೇ ಅಡವಿ ಸೇರುವುದಲ್ಲ. ಸಂಸಾರದಲ್ಲಿದ್ದುಕೊಂಡೆ ಅದರಲ್ಲಿರುವ ಸುಖ–ದುಃಖಗಳನ್ನು ಸಮಚಿತ್ತದಿಂದ ಅನುಭವಿಸುತ್ತ ಅನುಭಾವದೆಡೆಗೆ ಚರಿಸುವುದು.

14. ದೈವಸಾಕ್ಷಾತ್ಕಾರವೇ ಮಾನವನ ಅಂತಿಮ ಉದ್ದೇಶ. ದೈವಾನುಗ್ರಹವಿಲ್ಲದೇ ಸಾಕ್ಷಾತ್ಕಾರವಾಗುವುದಿಲ್ಲ. ಭಕ್ತಿಯಿಲ್ಲದೆ ದೈವಾನುಗ್ರಹವಾಗುವುದಿಲ್ಲ. ಸಕಲರಿಗೂ ಒಳಿತಾಗಲಿ ಎನ್ನುವ ಭಾವದಲ್ಲಿ ಸದಾ ಕಾಯಕದಲ್ಲಿ ತೊಡಗಿದವರಿಗೆ ದೈವಾನುಗ್ರಹ ಖಂಡಿತವಾಗಿ ದೊರೆಯುತ್ತದೆ.



15. ನಾವೆಲ್ಲ ಅರಿಯಬೇಕಾದದ್ದು ಹೇಮರಡ್ಡಿ ಮಲ್ಲಮ್ಮಳ ಚರಿತ್ರೆಯನ್ನಲ್ಲ; ಚಾರಿತ್ರ್ಯವನ್ನು. ಇವರು ಹುಟ್ಟು–ಸಾವುಗಳನ್ನು ಮೀರಿರುವ ಅವತಾರ ಪುರುಷರು. ಮಾನವ ಕಲ್ಪಿತ ಸ್ಥಾಪಿತ ಧರ್ಮ, ಜಾತಿ, ಭಾಷೆ, ದೇಶ ಭಾವನೆಯನ್ನು ದಾಟಿದ ಮೇಲೆ ದರ್ಶನ ನೀಡುವಂತಹ ಪುಣ್ಯ ಪುರುಷರು.

16. ಮಲ್ಲಮ್ಮ ಬಾಹ್ಯ ಆಚರಣೆಗಳಿಗೆ ಅತೀತವಾದವಳು. ಉಸಿರಿನೊಳಗಿರುವ ಪ್ರಾಣದಂತೆ ಆಕೆಯ ಇರುವಿಕೆ. ಭಕ್ತಿ, ಶರಣಾಗತಿ, ಸರಳ ಜೀವನದೊಂದಿಗೆ ಸೇವಾ ಭಾವದಲ್ಲಿರುವವರ ಅಂತರಂಗದಲ್ಲಿ ಮಲ್ಲಮ್ಮ ಉದ್ಭವವಾಗುತ್ತಾಳೆ.

ಮಹಾಶಿವಶರಣೆ ಅಕ್ಕಮಹಾದೇವಿ ತನ್ನ ಗಂಡ ಕೌಶಿಕ ಮಹಾರಾಜನನ್ನು ತೊರೆದು ವೈರಾಗಿಣಿಯಾಗಿ ಶ್ರೀಶೈಲದ ಚನ್ನಮಲ್ಲಿಕಾರ್ಜುನನೇ ನನ್ನ ಗಂಡನೆಂದು ಅನುಭವ ಮಂಟಪಕ್ಕೆ ಆಗಮಿಸಿ ಹಲವಾರು ವಚನಗಳನ್ನು ರಚಿಸಿ ಕದಳಿವನದಲ್ಲಿ ಐಕ್ಯಳಾದಳು. ಭೋಜರಾಜನ ಧರ್ಮಪತ್ನಿಯಾಗಿದ್ದ "ಮೀರಾ" ಕೃಷ್ಣ ಭಕ್ತಿಯಲ್ಲಿ ಪರವಶಳಾಗಿ ಆಕೆಯ ಸರ್ವ ಇಚ್ಛೆಗಳನ್ನು ಪೂರೈಸಲು ಸದಾ ಸಿದ್ಧನಾಗಿದ್ದ ಭೋಜರಾಜನನ್ನು ತೊರೆದು ಕೃಷ್ಣನನ್ನು ಹುಡುಕುತ್ತಾ ಭಕ್ತಿಯ ಹಾಡುಗಳನ್ನು ಹಾಡುತ್ತ ಜೀವನ ಯಾತ್ರೆಯನ್ನು ಮುಗಿಸಿದಳು.

**ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮ ಇರುವ ಗಂಡನನ್ನು ತೊರೆಯಲಿಲ್ಲ. ಸಂಸಾರದ ಕಷ್ಟ ನಷ್ಟಗಳನ್ನು ತಿರಸ್ಕರಿಸಲಿಲ್ಲ. ಜೀವಾತ್ಮ–ಪರಮಾತ್ಮದ ಜಿಜ್ಞಾಸೆಯ ಬೆನ್ನತ್ತಿ ಯಾವುದೇ ಸಾಹಿತ್ಯವನ್ನಾಗಲಿ, ಸಂದೇಶಗಳನ್ನಾಗಲಿ ನೀಡಲಿಲ್ಲ. ಅಸ್ಥಿರವಾದ ಸಂಸಾರದ ಜೀವನದಲ್ಲಿದ್ದು, ಅದರ ನೋವು–ನಲಿವುಗಳನ್ನು ಅನುಭವಿಸುತ್ತ ಪರಮ ಸತ್ಯವನ್ನು ದರ್ಶಿಸಿದವಳು. ಇರುವುದನ್ನು ತೊರೆದು ಇಲ್ಲದ್ದನ್ನು ಅರಸುವ, ಅದನ್ನೇ ಮುಕ್ತಿ ಮಾರ್ಗವೆಂದು ನಂಬಿರುವ ಪರಂಪರೆಗೆ ವ್ಯತಿರಿಕ್ತವಾಗಿ, ಇರುವ ಸಂಸಾರದಲ್ಲಿಯೇ ಅರಿವಿನ ಸ್ವರೂಪದ ಶಿವನನ್ನು ಸಾಕ್ಷಾತ್ಕರಿಸಿಕೊಂಡವಳು.**

ತಿರುವಣ್ಣಾಮಲೈ ರಮಣಮಹರ್ಷಿಗಳಿಗೆ 17 ನೆಯ ವಯಸ್ಸಿನಲ್ಲಿ ಸಾವಿನ ಅನುಭವವಾಯಿತು. ನಂತರ ಅವರು 54 ವರ್ಷಗಳ ಕಾಲ ದೇಹ ಸಹಿತ ಬದುಕಿದರು. ಭಕ್ತನೊಬ್ಬ "ನಿಮಗಾದ ಆ ಸಾವಿನ ಅನುಭವದ ಬಗೆಗೆ ಏನನ್ನೂ ಹೇಳುವುದಿಲ್ಲ ಮತ್ತು ಬರೆಯುವುದಿಲ್ಲ ಏಕೆ?" ಎಂದನಂತೆ. ಆಗ ರಮಣ ಮಹರ್ಷಿಗಳು ಹೇಳಿದ್ದು,

**"ವಾಸ್ತವದಲ್ಲಿ ಸಾವು ಎನ್ನುವುದು ಇಲ್ಲವೇ ಇಲ್ಲ. ಹುಟ್ಟು ಸಾವುಗಳೆನ್ನುವುದೆಲ್ಲ ಮಾನವನ ಕಲ್ಪನೆ ಮಾತ್ರ. ನಮ್ಮೆಲ್ಲರ ಕಲ್ಪನೆಯಲ್ಲಿರುವ ಸಾವು ಎನ್ನುವುದು ದೇಹದ ಬದಲಾವಣೆ ಮಾತ್ರ. ಪ್ರಜ್ಞಾಪೂರ್ವಕವಾಗಿ ದೇಹದ ಸಾವನ್ನು ಸಾಕ್ಷಿಯಾಗಿ ನೋಡಿದಾಗ**

**ಮೂಲ ಸತ್ಯದ ದರ್ಶನವಾಗುತ್ತದೆ. ಮೂಲ ಸತ್ಯವೆನ್ನುವುದು, ಮುಕ್ತಿ ಎನ್ನುವುದು, ಜ್ಞಾನೋದಯವೆನ್ನುವುದು, ದೇಹದಲ್ಲಾಗುವ ದೇಹಾತೀತ ಅನುಭವ. ಅನುಭವಿಸುವ ದೇಹಿಗೆ ಮಾತ್ರ ಅನುಭಾವದಲ್ಲಿ ಉಪಸ್ಥಿತವಾಗುವಂತಹುದು. ಅದನ್ನು ಶಬ್ದಗಳಲ್ಲಿ ಹೇಳಲಾಗದು. ಹೇಳಲು ಪ್ರಯತ್ನಿಸಿದರೆ ಮೂಲ ಸತ್ಯ ಸಾಯುತ್ತದೆ. ಕಾರಣ ಅದಕ್ಕಾವ ಭಾಷೆಯೂ ಇಲ್ಲ. ಭಾಷೆ ಎನ್ನುವುದು ಪರಮ ಸತ್ಯಕ್ಕೆ ಪ್ರಾಣ ಘಾತಕವಾದದ್ದು. ಅಷ್ಟಕ್ಕೂ ಹೇಳಿದರೂ ಕೇಳಿಸಿಕೊಂಡವರಿಗೆ ತಪ್ಪಾಗಿಯೇ ಅರ್ಥವಾಗುತ್ತದೆ.”**

ಹೌದು, ಹೇಳಿದ ಹೇಳಿಕೆಗಳು ನೀಡುವ ಸಂದೇಶಗಳು ಕೇಳುಗರ ಭಾವಕ್ಕೆ ತಕ್ಕಂತೆ ಅರ್ಥವಾಗುತ್ತವೆ. ಭೂಮಿಯ ಮೇಲೆ ಸಾವಿರಾರು ಭಾಷೆಗಳಿವೆ; ಯಾವ ಭಾಷೆಯಲ್ಲಿ ಯಾವ ಮಹಾತ್ಮ ಹೇಳುತ್ತಾನೋ, ಆತ ಜೀವಂತವಾಗಿರುವಾಗ ಪರಮ ಸತ್ಯದ ಅನುಭವ ಕೆಲವೇ ಕೆಲವು ಜನರಿಗೆ ಅತ್ಯಂತ ಸ್ವಲ್ಪ ಪ್ರಮಾಣದಲ್ಲಿ ಆಗಬಹುದು. ಆದರೆ ಆ ಮಹಾತ್ಮ ಭೌತಿಕವಾಗಿ ಕಣ್ಮರೆಯಾದಾಗ ಆತನ ಸಂದೇಶಗಳು, ತತ್ವಚಿಂತನೆಗಳು ಆ ಭಾಷೆಯ, ಆ ಜನಾಂಗದ ಜಾತಿಯ ಸ್ವತ್ತುಗಳಾಗುತ್ತವೆ. ನಂತರ ಬರುವ ಬುದ್ಧಿ ಜೀವಿಗಳು ಅವುಗಳನ್ನು ತಮ್ಮ ಧರ್ಮದ, ಜಾತಿಯ, ಜನಾಂಗದ, ಭಾಷೆಯ, ಮತ್ತು ದೇಶದ ಸ್ವತ್ತೆಂದು ಪ್ರಚಾರ ಮಾಡಲಾರಂಭಿಸುತ್ತಾರೆ. ವ್ಯಾಪಾರಿ ಮನೋಭಾವದ ಮಾನವನ ಮನಸ್ಸು ಆತನನ್ನು ದೇವರನ್ನಾಗಿಸಿ ಪುರಾಣ ಪುಣ್ಯಕತೆಗಳನ್ನು ಸೃಷ್ಟಿಸಿ, ದೇವಾಲಯಗಳನ್ನು ನಿರ್ಮಿಸಿ, ಆಚರಣೆಗಳನ್ನು ಪ್ರಾರಂಭಿಸಿ ಜನಸಂಘಟನೆ ಮಾಡುತ್ತಾರೆ. ಜನ ಸಂಘಟಿತವಾಗಿರುವಲ್ಲಿ ರಾಜಕಾರಣ ಸರಳವಾಗಿ ಪ್ರವೇಶ ಪಡೆಯುತ್ತದೆ. ಮೂಲ ಸತ್ಯ ಸತ್ತು, ಆ ಮಹಾತ್ಮ ಮತ್ತು ಆತನ ಸಂದೇಶಗಳ ಸುತ್ತಲೂ ರಾಜಕೀಯದ ಕೊಳಕು ಎರಚಾಟಗಳು ಪ್ರಾರಂಭವಾಗುತ್ತವೆ.

ಮಾನವನ ಇತಿಹಾಸವನ್ನು ಅಧ್ಯಯನ ಮಾಡಿದವರಿಗೆಲ್ಲ ಇದು ಸ್ಪಷ್ಟವಾಗಿ ಕಾಣುವಂತಹುದು. ಆದ್ದರಿಂದಲೇ **ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮ ಯಾವುದೇ ಸಾಹಿತ್ಯವನ್ನಾಗಲಿ, ಸಂದೇಶಗಳನ್ನಾಗಲಿ ನೀಡಲಿಲ್ಲ. ಯಾವುದೇ ಬಾಹ್ಯ ಆಚರಣೆಗಳನ್ನು ಪ್ರೋತ್ಸಾಹಿಸಲಿಲ್ಲ. ಶಿಷ್ಯ ಪರಂಪರೆಯನ್ನು ಪ್ರಾರಂಭಿಸಲಿಲ್ಲ. ನಿತ್ಯ ಜೀವನ ಪರಮಾತ್ಮನ ಅನುಗ್ರಹವೆಂದು ಅದರಲ್ಲಿ ಪರಿಪೂರ್ಣವಾಗಿ ತನ್ನನ್ನು ತಾನು ತೊಡಗಿಸಿಕೊಂಡು ಉತ್ಸಾಹದಿಂದ ಬದುಕಿದಳು. ಪರಮಾತ್ಮನ ದರ್ಶನಕ್ಕೆ ಸಂಸಾರವನ್ನೇ ಪ್ರಯೋಗ ಶಾಲೆಯನ್ನಾಗಿ ಮಾಡಿ ಅದರಲ್ಲಿ ಯಶಸ್ಸನ್ನು ಕಂಡಳು.**

**ಜನ ಸೇವೆಯೇ ನಿಜವಾದ ದೇವರ ಸೇವೆ ಎನ್ನುವುದನ್ನು ಅರಿತು, ಭಕ್ತಿಯಿಂದ ಜನ ಸೇವೆಯನ್ನು ಮಾಡಿ ಅದರಲ್ಲಿಯೇ ಮುಕ್ತಿ ಎಂಬ ಪರಮಾನಂದವನ್ನು ಅನುಭವಿಸಿದವಳು. ಜಗವೆಲ್ಲ ದೇವರ ಮನೆ. ಇಲ್ಲಿರುವ ಜೀವಿಗಳು, ಪ್ರಾಣಿ–ಪಕ್ಷಿಗಳು, ಕ್ರಿಮಿ–ಕೀಟಗಳು, ಗಿಡ–ಮರಗಳು, ಆತನ ವ್ಯಕ್ತ ರೂಪಗಳೆಂದು ಭಾವಿಸಿ,**



**ಅವುಗಳೆಲ್ಲದರೊಂದಿಗೆ ಸದ್ಭಾವದಿಂದ ಬದುಕಿದವಳು. ಇಲ್ಲಿರುವುದರೆಲ್ಲದರಲ್ಲಿಯೂ ದೇವರಿದ್ದಾನೆ. ಆತನಿಲ್ಲದ ಜಾಗ ಎಲ್ಲಿಯೂ ಇಲ್ಲ. ಆತನಿಗೆ ಒಂದು ರೂಪ ಅಥವಾ ಆಕಾರವನ್ನು ಕೊಟ್ಟರೆ, ಶಬ್ದಗಳ ಮೂಲಕ ತೋರಿಸಲು ಪ್ರಯತ್ನಿಸಿದರೆ ಸೀಮಾತೀತವಾದ ಆತನ ಇರುವಿಕೆಗೆ ಅಪಚಾರವೆಸಗಿದಂತಾಗುವುದೆಂದು, ಇರುವುದೆಲ್ಲವನ್ನೂ ಇರುವಂತೆ ಭಕ್ತಿಯಿಂದ ಸ್ವೀಕರಿಸಿ, ಅದೆಲ್ಲವನ್ನೂ ದೈವತ್ವಕ್ಕೇರಿಸಿ ಅದರಲ್ಲಿ ಲೀನವಾದವಳು ಹೇಮರಡ್ಡಿ ಮಲ್ಲಮ್ಮ.**

ಆಕೆಯ ಅನುಗ್ರಹಕ್ಕೆ ಪಾತ್ರರಾಗಬೇಕೆನ್ನುವವರು ಬಾಹ್ಯದ ಯಾವುದೇ ಆಚರಣೆಗೆ ಅಂಟಿಕೊಳ್ಳದೆ ಅಂತರಂಗದಲ್ಲಿ ಆಕೆಯ ಜೀವನವನ್ನು ಸ್ಮರಿಸುತ್ತಿರಬೇಕು. ಮಾನವನ ಜೀವನದ ಉದ್ದೇಶ ಪರಮಶಾಂತಿಯನ್ನು ಸ್ಪರ್ಶಿಸಿ ಅದರಲ್ಲಿ ಲೀನವಾಗುವುದು. ಅದಕ್ಕಾಗಿ ನಿತ್ಯ ಜೀವನವನ್ನು ಶರಣಾಗತಿ ಭಾವದಲ್ಲಿ, ಭಕ್ತಿಯ ನೆಲೆಯಲ್ಲಿ ಸಾಗಿಸುವುದು. ಮೂರ್ತಿ ಪೂಜೆಗೆ ಅತಿಯಾಗಿ ಅಂಟಿಕೊಳ್ಳದೆ, ಅದು ಮನಃಶಾಂತಿಯ ಸಾಧನವೆಂದು ಭಾವಿಸುವುದು. ದೇವರ ಹೆಸರಿನಲ್ಲಿ ಮಾಡುವ ಹೋಮ, ಹವನಗಳಂತಹ ಕಾರ್ಯಗಳನ್ನು ಮಾಡುವುದರಿಂದ ಕಷ್ಟ–ನಷ್ಟಗಳು ದೂರವಾಗುತ್ತವೆನ್ನುವ ನಂಬಿಕೆಯಂತೂ ಖಂಡಿತ ತಪ್ಪು. ಬರುವ ಕಷ್ಟ ನಷ್ಟಗಳನ್ನು ದೇವರ ಪ್ರಸಾದವೆಂದು ಸ್ವೀಕರಿಸಿದಾಗ ಜೀವನಕ್ಕೊಂದು ವಿಶೇಷ ಮೆರುಗು ಬರುತ್ತದೆ. ಕಷ್ಟ–ನೋವು–ಹತಾಶೆ–ಸೋಲುಗಳಿಲ್ಲದ ಜೀವನ ಜೀವನವೇ ಅಲ್ಲ. ಇವುಗಳಿಲ್ಲದ ಬದುಕು ನಿಜವಾಗಿ ಬದುಕೇ ಅಲ್ಲ.

ಇದನ್ನು ಸಾಧಿಸಿ ತೋರಿಸಿದವಳು ಹೇಮರಡ್ಡಿ ಮಲ್ಲಮ್ಮ. ಆಕೆಯ ತಾಳ್ಮೆ, ಸಹನೆ, ಸೇವಾಭಾವ, ಕ್ಷಮಾಗುಣ. ಪ್ರಕೃತಿಯೇ ದೇವರೆಂಬ ಪೂಜ್ಯ ಭಾವನೆ. ಬಡವರ, ಅಸಹಾಯಕರ, ಋಷಿ ಮುನಿಗಳ, ಯೋಗಿಗಳ ಸೇವೆಯೇ ದೇವರ ಸೇವೆ ಎಂದು ಸಂಕಲ್ಪಿಸಿ ಸರಳವಾಗಿ, ಸಹಜವಾಗಿ ವೈರಾಗ್ಯ ಭಾವದಲ್ಲಿ ಜೀವಿಸುವವರ ಅಂತರಂಗದಲ್ಲಿ ಹೇಮರಡ್ಡಿ ಮಲ್ಲಮ್ಮ ಪ್ರತ್ಯಕ್ಷಳಾಗುತ್ತಾಳೆ. ಜೀವನ ಸಾರ್ಥಕವಾಗುತ್ತದೆ. ಮಾನವನ ಜೀವನದ ಉದ್ದೇಶ ಸಫಲವಾಗುತ್ತದೆ. ಈ ಕಾರ್ಯಕ್ಕೆ ಹೇಮರಡ್ಡಿ ಮಲ್ಲಮ್ಮ ನಮಗೆಲ್ಲ ಪ್ರೇರಣೆ ನೀಡಲಿ. ಇದಕ್ಕಾಗಿ ನಾವೆಲ್ಲ ಪ್ರತಿದಿನ ಆಕೆಯ ಜೀವನವನ್ನು ಸ್ಮರಿಸುತ್ತ, ಆಕೆಯ ಅನುಗ್ರಹಕ್ಕೆ ಪಾತ್ರರಾಗೋಣ.

■■